ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 11

೧೨ ಜನವರಿ ೧೯೫೮

*

ಪುಟ ೧೦ ಬೆಲೆ: ೧೩ ನ. ಪೈಸೆ

ಜೆಕೋಸ್ಲೋವೇಕಿಯ ಪ್ರಧಾನಿಗಳಿಗೆ ಸುಸ್ವಾಗತ

ಭಾರತಕ್ಕೆ ಭೇಟಿ ಇತ್ತಿರುವ ಜೆಕೊಸ್ಲೋವೇಕಿಯ ಪ್ರಧಾನಿ ವಿಲಿಯಂ ಸಿರೋಕಿಯವರು ಇದೇ ತಿಂಗಳ 9ನೇ ತಾರೀಖಿನಂದು ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಆಗಮಿಸಲಿದ್ದಾರೆ. 'ಜನಶಕ್ತಿ' ಅವರಿಗೆ ಹಾರ್ದಿಕ ಸ್ವಾಗತ ಬಯಸುತ್ತದೆ.

ಪ್ರಧಾನಿ ಸಿರೋಕಿಯವರು 1902ರ ಮೇ 31ರಂದು ಬ್ರಾಟಿಸ್ಲಾವದಲ್ಲಿ ಜನಿಸಿದರು. ಇವರ ತಂದೆ ರೈಲ್ವೆ ಕೆಲಸಗಾರರಾಗಿದ್ದರು. ಇವರು 15 ವರ್ಷ ವಯಸ್ಸಿನಲ್ಲೇ ರೈಲ್ವೆ ಕೆಲಸಗಾರರಾಗಿ ಕೆಲಸಕ್ಕೆ ಸೇರಿದರು. ಕಾರ್ಮಿಕರ ಕ್ರಾಂತಿಕಾರೀ ಚಳುವಳಿಯ ಪರಿಚಯ ಮಾಡಿಕೊಂಡರು.

ಸೋಷಲ್ ಡೆಮಾಕ್ರಟಿಕ್ ಪಕ್ಷದ ಸದಸ್ಯರಾಗಿ ಸೇರಿ, ಸಮಾಜವಾದೀ ಪ್ರತಿಕೆಗಳಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. 1921ರಲ್ಲಿ ಬ್ರಾಟಿಸ್‌ಲಾವದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಸ್ಥಾಪಕರಲ್ಲೊಬ್ಬರು. 1935ರಲ್ಲಿ ಪಾರ್ಲಿಮೆಂಟಿಗೆ ಆರಿಸಿಬಂದರು.

ಜರ್ಮನಿಯಲ್ಲಿ ಹಿಟ್ಲರ್ ಅಧಿಕಾರಕ್ಕೆ ಬಂದ ಮೇಲೆ, ಸಿರೋಕಿಯವರು ಫಾಸಿಸಂನ ಅಪಾಯವನ್ನು ಬಯಲಿಗೆಳೆದರು ಮತ್ತು ತಮ್ಮ ರಾಷ್ಟ್ರದ ರಕ್ಷಣೆಗಾಗಿ ಜನತಾರಂಗವನ್ನು ಬಲಗೊಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದರು

ಮ್ಯೂನಿಚ್‌ನಲ್ಲಿಜೆಕೊಸ್ಲೋವೇಕಿಯಾಕ್ಕೆ ಆದ ದ್ರೋಹದಿಂದಾಗಿ ಅವರು ಬಂಧವಿಮೋಚನೆಗಾಗಿ ಹೋರಾಟ ನಡೆಸಲು, ಸಂಘಟನೆ ಕಟ್ಟಲು ದೇಶದಿಂದ ಹೊರಹೋದರು. 1930ರ ವರೆಗೆ ಪ್ಯಾರಿಸ್‌ನಲ್ಲಿ ದುಡಿಯುತ್ತಿದ್ದು ನಂತರ ಮಾಸ್ಕೋಗೆ ತೆರಳಿದರು. 1940ರಲ್ಲಿ ಸ್ಲೋವೆಕಿಯಾದ ಚಳವಳಿಯ ನಾಯಕರ ಬಂಧನವಾದ ನಂತರ, ಸಿರೋಕಿಯವರು ಸ್ಲೊವೇಕಿಯಾಕ್ಕೆ ತೆರಳಿ, ಅಲ್ಲಿ ನಾಜಿ ಆಕ್ರಮಣಕಾರರ ವಿರುದ್ಧ ಹೋರಾಟದ ನಾಯಕತ್ವ ವಹಿಸಿದರು. 1941ರ ಜುಲಾಯಿನಲ್ಲಿ ಜರ್ಮನಿಯ ಗೆಸ್ಟಪೋಗಳು ಅವರನ್ನು ಬಂಧಿಸಿದರು.

1945ರ ಫೆಬ್ರವರಿಯಲ್ಲಿ ತಮ್ಮ ಸಹೋದ್ಯೋಗಿಯೊಂದಿಗೆ ಅವರು ಕಾರಾಗೃಹದಿಂದ ತಪ್ಪಿಸಿಕೊಂಡು ಬಂದು, ಬಂಧವಿಮೋಚನಾ ಹೋರಾಟದಲ್ಲಿ ಸೇರಿಕೊಂಡರು. ಅದೇ ವರ್ಷ ಎಪ್ರಿಲ್‌ನಲ್ಲಿ ಅವರು ಕೋಸೀಯ ಪ್ರಥಮ ಸರಕಾರದಲ್ಲಿ ಉಪ ಪ್ರಧಾನಿಯಾಗಿ ನೇಮಕವಾದರು.

ಬಂಧ ವಿಮೋಚನೆಯ ನಂತರ ಮೇ 1945ರಿಂದ 1953ರ ವರೆಗೆ ಅವರು ಉಪಪ್ರಧಾನಿಯಾಗಿದ್ದರು ಮತ್ತು ವಿದೇಶಾಂಗ ಶಾಖಾ ಸಚಿವರೂ ಆಗಿದ್ದರು.

1953ರಮಾರ್ಚ್‌ನಲ್ಲಿ ಅಂಟೋನಿನ್ ಜಪೊಟೋಕಿ ಅಧ್ಯಕ್ಷರಾದ ಮೇಲೆ ವಿಲಿಯಂ ಸಿರೋಕಿ ಪ್ರಧಾನ ಮಂತ್ರಿಗಳಾದರು. ಅವರು ಜೆಕೊಸ್ಲೋವೇಕಿಯ ಕಮ್ಯೂನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋ ಸದಸ್ಯರೂ ರಾಷ್ಟ್ರೀಯ ರಂಗದ ಅಧ್ಯಕ್ಷರೂ ಆಗಿದ್ದಾರೆ.

ಸಿರೋಕಿಯವರು ತಮ್ಮ ಇಡೀ ಜೀವಮಾನವನ್ನು ದುಡಿಯುವ ಜನತೆಗಾಗಿ, ಅವರ ಹಕ್ಕುಬಾಧ್ಯತೆಗಳಿಗಾಗಿ ಹೋರಾಟಕ್ಕೆ ಮಿಸಲಿರಿಸಿದ್ದಾರೆ. ಜೆಕೊಸ್ಲೋವೇಕಿಯಾದಲ್ಲಿ ಸಮಾಜವಾದೀ ಸಮಾಜವನ್ನು ನಿರ್ಮಿಸುವ ಕಾರ್ಯದಲ್ಲಿ ಪರಿಣಾಮಕಾರೀ ಪಾತ್ರವನ್ನು ನಿರ್ವಹಿಸಿದ್ದಾರೆ.

★ ಶಾಂತಿ ಮತ್ತು ಸ್ವಾತಂತ್ರ್ಯಕ್ಕಾಗಿ ಏಷ್ಯಾ-ಆಫ್ರಿಕಾ ಘೋಷಣೆ ★

ಕೈರೋ ಸಮಾವೇಶದ ಮಹತ್ವಪೂರ್ಣ ತೀರ್ಮಾನಗಳು

ಡಿಸೆಂಬರ್ ತಿಂಗಳ ಅಂತ್ಯದಲ್ಲಿ ಸಮಾವೇಶಗೊಂಡಿದ್ದ ಏಷ್ಯಾ ಮತ್ತು ಆಫ್ರಿಕಾ ಜನತೆಯ ಪ್ರತಿನಿಧಿಗಳ ಸಮಾವೇಶವು ಮಹತ್ವಪೂರ್ಣವಾದ ನಿರ್ಣಯಗಳನ್ನು ಮಾಡಿವೆ. ಈಜಿಪ್ಟ್ ದೇಶದ ರಾಜಧಾನಿ ಕೈರೋ ನಗರದಲ್ಲಿ ಸಮಾವೇಶಗೊಂಡಿದ್ದ ಈ ಸಮ್ಮೇಳನವು ಇಡೀ ವಿಶ್ವದ ಗಮನವನ್ನು ಸೆಳೆದಿದೆ. ಎಚ್ಚೆತ್ತ ಏಷ್ಯ-ಆಫ್ರಿಕಾ ಜನತೆಯ ಶಾಂತಿ ಮತ್ತು ಸ್ವಾತಂತ್ರ್ಯ ಹೋರಾಟದಲ್ಲಿ ಈ ಸಮ್ಮೇಳನವು ಒಂದು ಮೈಲುಗಲ್ಲಾಗಿದೆ. ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಏಷ್ಯಾ-ಆಫ್ರಿಕ ರಾಷ್ಟ್ರಗಳ ಜನತೆಯ ಪಾತ್ರವನ್ನು ಈ ಅಧಿವೇಶನ ತೋರಿಸಿಕೊಟ್ಟಿದೆ.

ಅಧಿವೇಶನವು ಎಲ್ಲ ಪ್ರಮುಖ ಅಂತರರಾಷ್ಟ್ರೀಯ ಸಮಸ್ಯೆಗಳನ್ನು ಕುರಿತು ಚರ್ಚೆ ನಡೆಸಿವೆ 37 ರಾಷ್ಟ್ರಗಳ ಪ್ರತಿನಿಧಿಗಳು ಕೈರೋ ನಗರದಲ್ಲಿ ಆಗಮಿಸಿದಾಗ ತಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಸಾಮ್ರಾಜ್ಯವಾದೀ ಶೋಷಣೆಯ ವಿರುದ್ಧ ಹೋರಾಡುತ್ತಿರುವ ಈಜಿಪ್ಟ್ ಜನತೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸಿತು. ಕೈರೋದ ಅಲಂಕೃತ ಭವನದಲ್ಲಿ ಸಮಾವೇಶಗೊಂಡ ಈ ಅಧಿವೇಶನವು, ವಿವಿಧ ವಿಷಯಗಳನ್ನು ಕುರಿತು ಚರ್ಚೆ ನಡೆಸಿ ತಕ್ಕ ತೀರ್ಮಾನಗಳಿಗೆ ಬರಲು ರಾಜಕೀಯ ಆರ್ಥಿಕ ಸಾಂಸ್ಕೃತಿಕ ಮೊದಲಾದ ವಿವಿಧ ವಿಶೇಷ ಸಮಿತಿಗಳನ್ನು ನಿಯಮಿಸಿತು. ಈ ಸಮಿತಿಗಳು ಚರ್ಚೆ ನಡೆಸಿ, ಸೂಕ್ತ ನಿರ್ಣಯಗಳನ್ನು ಅಧಿವೇಶನದ ಮುಂದಿರಿಸಿದ್ದು, ಅನುಮೋದನೆಯಾಗಿವೆ.

ವಿಶ್ವಶಾಂತಿಯ ಕುರಿತು

ಪ್ರಸಕ್ತ ಅಂತರರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅಗತ್ಯವಿರುವ ಶಾಂತಿ ಸ್ಥಾಪನೆಯ ಕುರಿತಾದ ನಿರ್ಣಯದಲ್ಲಿ, ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಪ್ರಯೋಗವನ್ನು ಕೂಡಲೇ ನಿಲ್ಲಿಸಬೇಕೆಂದೂ, ನಿಶ್ಶಸ್ತ್ರೀಕರಣ ಮೊದಲಾದ ಪ್ರಮುಖ ಅಂತರರಾಷ್ಟ್ರೀಯ ಪ್ರಶ್ನೆಗಳ ಕುರಿತು ಪೂರ್ವ-ಪಶ್ಚಿಮ ರಾಷ್ಟ್ರಗಳ ನಾಯಕರುಗಳು ಸಮಾವೇಶಗೊಂಡು ಒಪ್ಪಂದಕ್ಕೆ ಬರಬೇಕೆಂದೂ ಮನವಿ ಮಾಡಿಕೊಂಡಿದೆ.

ಏಷ್ಯ-ಆಫ್ರಿಕಾ ದೇಶಗಳಲ್ಲಿ ನ್ಯೂಕ್ಲಿಯರ್ ಮತ್ತು ಕ್ಷಿಪಣಿ ಕೇಂದ್ರಗಳಿಗೆ ನೆಲೆ ಕೊಡಕೂಡದೆಂದು ಜನತೆಗೆ ಕರೆಯಿತ್ತಿದೆ.

ಇತ್ತೀಚೆಗೆ ನಡೆದ ನ್ಯಾಟೋ ಸಮಾವೇಶದ ತೀರ್ಮಾನಗಳನ್ನು ಕುರಿತು, ಇದು ಅಂತರ ರಾಷ್ಟ್ರೀಯ ಉದ್ರಿಕ್ತ ವಾತಾವರಣವನ್ನು ಮತ್ತಷ್ಟು ಹದಗೊಡಿಸುವುದೆಂದೂ, ನ್ಯಾಟೋ, ಸಿಯಾಟೋ ಮುಂತಾದ ಮಿಲಿಟರಿ ಕೂಟಗಳು ವಿಸರ್ಜನೆಯಾಗಬೇಕೆಂದೂ ತಿಳಿಸಿದೆ.

ಏಷ್ಯ ಮತ್ತು ಆಫ್ರಿಕಾ ರಾಷ್ಟ್ರಗಳಿಗೆ ಸಂಬಂಧಿಸಿದಂತೆ ಇರುವ ಸಿಯಾಟೋ ಮತ್ತು ಬಾಗ್ದಾದ್ ಕೌಲುಗಳು, ಶಾಂತಿ ಪ್ರಿಯ ಸ್ವಾತಂತ್ರ್ಯಪ್ರಿಯ ರಾಷ್ಟ್ರಗಳ ಸಾರ್ವಭೌಮತ್ವಕ್ಕೆ ಧಕ್ಕೆಯಾಗಿದೆಯೆಂದು ಸಾರಿ, ಅವುಗಳ ವಿಸರ್ಜನೆಗಾಗಿ ಹೋರಾಡಬೇಕೆಂದು ಕರೆಯಿತ್ತಿದೆ. ಶಾಂತಿ, ಸ್ವಾತಂತ್ರ್ಯ ಮತ್ತು ಅಭಿವೃದ್ಧಿಗಾಗಿ ಏಷ್ಯ-ಆಫ್ರಿಕಾ ಜನತೆ ಸತತ ಹೋರಾಟ ನಡೆಸಬೇಕೆಂದು ಕರೆಯಿತ್ತು, ಆ ಹೋರಾಟವನ್ನು ಮುಂದೆ ಸಂಘಟಿತವಾಗಿ ನಡೆಸಿಕೊಂಡು ಹೋಗಲು ಏಷ್ಯ-ಆಫ್ರಿಕ ಸೌಹಾರ್ದದ ಬಗ್ಗೆ ಶಾಶ್ವತ ಸಮಿತಿಯನ್ನು ಸ್ಥಾಪಿಸಲಾಗಿದೆ.

ವರ್ಣಬೇಧ ಮತ್ತು ವಸಾಹತು ನೀತಿಯ ಖಂಡನೆ

ದಕ್ಷಿಣ ಆಫ್ರಿಕಾದಲ್ಲಿ ಜಾರಿಯಲ್ಲಿರುವ ವರ್ಣಬೇಧ ನೀತಿಯನ್ನು ಖಂಡಿಸುತ್ತಾ ಸಮ್ಮೇಳನವು, ದಕ್ಷಿಣ ಆಫ್ರಿಕಾದ ಜನತೆ ಹಾಗೂ ನಾಗರಿಕ ರಾಷ್ಟ್ರಗಳ ನಾಯಕರು ವಿಶ್ವಸಂಸ್ಥೆಯಲ್ಲಿ ಈ ವರ್ಣಬೇಧ ನೀತಿಯ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತಿದ್ದರೂ ಅದು ಫಲಕಾರಿಯಾಗಿಲ್ಲ. ಈ ಆಧುನಿಕ ಯುಗದಲ್ಲಿ ವರ್ಣಬೇಧ ನೀತಿಯು ಅನಾಗರಿಕವಾಗಿದೆ ಎಂದು ತಿಳಿಸಿದೆ. ಸಮ್ಮೇಳನದಲ್ಲಿ ಈ ಊಹೆ ಮಾಡಲಾಗಿರುವ ನಿರ್ಣಯದಲ್ಲಿ ಏಳು ಅಂಶಗಳ ಸಲಹೆಯೊಂದನ್ನು ಮಾಡಲಾಗಿದೆ. ಅದರಲ್ಲಿ ಎಲ್ಲ ವರ್ಣಬೇಧ ನೀತಿಯ ಶಾಸನಗಳನ್ನು ರದ್ದುಗೊಳಿಸಬೇಕೆಂದೂ, ಎಲ್ಲರಿಗೂ ಸಮಾನವಾದ ಸ್ವಾತಂತ್ರ್ಯ ಹಕ್ಕುಗಳು ದೊರಕಬೇಕೆಂದೂ, ದುಡಿಯುವ ಹಕ್ಕು ಮತ್ತು ಜಮೀನು ಆಸ್ತಿ ಪಡೆಯುವ ಹಕ್ಕು ಮೊದಲಾದುವನ್ನು ಎಲ್ಲರಿಗೂ ಕೊಡಬೇಕೆಂದೂ ಮುಂತಾಗಿ ಸೂಚಿಸಲಾಗಿದೆ.

ವಸಾಹತುಶಾಹಿಯ ವಿರುದ್ಧ ಹೋರಾಡುತ್ತಿರುವ ಆಫ್ರಿಕಾದ ಜನತೆಗೆ ಸಂಪೂರ್ಣ ಬೆಂಬಲವೀಯುತ್ತ ಸಮ್ಮೇಳನವು ಸೈಪ್ರಸ್, ಅಲ್ಜೀರಿಯ ಮೊದಲಾದ ಕಡೆಗಳಲ್ಲಿ ಸ್ವಾತಂತ್ರ್ಯಯೋಧರ ಮೇಲೆ ಸಾಮ್ರಾಜ್ಯವಾದಿಗಳು ನಡೆಸುತ್ತಿರುವ ಅಮಾನುಷ ದಬ್ಬಾಳಿಕೆಯನ್ನು ಖಂಡಿಸಿ, ಜನತೆಯ ಸ್ವಾತಂತ್ರ್ಯ ಹೋರಾಟಕ್ಕೆ ಬೆಂಬಲವೀಯುವ ನಿರ್ಣಯವನ್ನು ಮಾಡಲಾಯಿತು.

ಏಷ್ಯಾ ಮತ್ತು ಆಫ್ರಿಕಗಳಲ್ಲಿ ವಸಾಹತು ಶಾಹಿಯ ಅವಶೇಷವು ಇನ್ನೂ ಉಳಿದಿರುವುದನ್ನು ಗಮನಿಸಿ, ವಸಾಹತುಶಾಹಿ ಸಂಪೂರ್ಣವಾಗಿ ಅಳಿಯಬೇಕೆಂದು ನಿರ್ಣಯ ಮಾಡಲಾಯಿತು. ಟಾಯ್‌ವಾನ್, ವೆಸ್ಟ್ ಇರಿಯನ್, ಗೋವಾ, ಓಕಿನೋವ ಮತ್ತು ಇತರ ರಾಷ್ಟ್ರಗಳ ಸ್ವಾತಂತ್ರ್ಯದ ಪ್ರಶ್ನೆಯು ಶೀಘ್ರವಾಗಿ ಇತ್ಯರ್ಥವಾಗಬೇಕೆಂದೂ, ಸಾಮ್ರಾಜ್ಯವಾದಿಗಳು ಅಲ್ಲಿಂದ ಕಾಲ್ತೆಗೆಯಬೇಕೆಂದೂ ಒತ್ತಾಯಿಸುವ ನಿರ್ಣಯವಾಯಿತು.

ಏಷ್ಯಾ-ಆಫ್ರಿಕಾ ದೇಶಗಳ ಜನತೆಯ ಈ ಸಮ್ಮೇಳನದ ನಿರ್ಣಯಗಳು ವಸಾಹತುಶಾಹಿಯ ವಿರುದ್ಧವಾಗಿ ಹೋರಾಡುತ್ತಿರುವ ಜನತೆಗೂ ಸ್ಫೂರ್ತಿಯನ್ನಿತ್ತಿದೆ.

ಆರ್ಥಿಕಾಭಿವೃದ್ಧಿಯ ಕುರಿತು

ಸಮ್ಮೇಳನದ ಆರ್ಥಿಕ ಸಮಿತಿಯು

(ಕೊನೇ ಪುಟ ನೋಡಿ)

ಮುಂಧ್ರ ಪ್ರಕರಣದಲ್ಲಿ ಹೊಸ ಬೆಳಕು

ಕಳೆದ ಪಾರ್ಲಿಮೆಂಟ್ ಅಧಿವೇಶನದಲ್ಲಿ ಹೊರಬಿದ್ದ ಮುಂಧ್ರ ಪ್ರಕರಣದ ಮೇಲೆ ಇದೀಗ ವಿವರಗಳು ಬರಹತ್ತಿವೆ ಜೀವವಿಮಾ ಕಾರ್ಪೊರೇಷನ್ ಮುಂಧ್ರ ಗುಂಪಿನ ಕೈಗಾರಿಕೆಗಳ ಷೇರನ್ನು 1.56 ಕೋಟಿ ರೂಗಳು ತೆತ್ತು ಕೊಂಡಿರುವುದರ ಬಗ್ಗೆ ತನಿಖೆ ಶೀಘ್ರದಲ್ಲೇ ಆರಂಭವಾಗಲಿದೆ. ಮುಂಬಯಿ ಹೈ ಕೋರ್ಟಿನ ನ್ಯಾಯಾಧಿಪತಿ ಶ್ರೀ ಚಾಗ್ಲಾರವರ ನೇತೃತ್ವದಲ್ಲಿ ತನಿಖೆ ನಡೆಯಲಿದೆ. ತನಿಖೆ ನಡೆದು, ಈ ಹೊಲಸು ಪ್ರಕರಣದಲ್ಲಿ ಎಲ್ಲ ಅಂಶಗಳು ಬಯಲಾಗಿ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಿ ಎಂದು ಒತ್ತಾಯ ಪಡಿಸುತ್ತೇವೆ.

ಮುಂಧ್ರ ಯಾರು?

ಈವರೆಗೆ ಕೇಳದಿದ್ದ ಈ ಮುಂಧ್ರ ಯಾರು ಎನ್ನುವುದನ್ನು ತಿಳಿಯ ಬೇಕಾಗಿದೆ ಈ 'ಮಹನೀಯ'ರು ಕಲ್ಕತದಲ್ಲಿ ಮಾರವಾರಿ ಕುಟುಂಬದಲ್ಲಿ ಜನಿಸಿದವರು. ವಿದ್ಯುಚ್ಛಕ್ತಿ ಸರಕುಗಳನ್ನು ಮಾರಾಟ ಮಾಡುವುದು ಇವರ ಆರಂಭದ ವ್ಯಾಪಾರವಾಗಿತ್ತು. ದ್ವಿತೀಯ ಮಹಾಯುದ್ಧ ಕಾಲದಲ್ಲಿ ಬೇಕಾದಷ್ಟು ಹಣ ಮಾಡಿದರು. ಷೇರು ಪೇಟೆಯಲ್ಲಿಯೂ ಇವರು ವ್ಯವಹಾರ ನಡೆಸುತ್ತಿದ್ದರು.

ಯುದ್ಧಾನಂತರದಲ್ಲಿ ಎಫ್ ಅಂಡ್ ಸಿ ಓಸ್ಲೆರ್ ಲಿ.ನ ಡೈರಕ್ಟರ್ ಆದರು; ಇದೇ ಅವರು ಮೊದಲು ಕೊಂಡ ಕಂಪೆನಿಯಾಗಿತ್ತು. ಒಂದು ಕೋಟಿ ರೂ.ಗಳ ಬಂಡವಾಳವಿದ್ದ ಕಂಪೆನಿ ಇವರ ಕೈಗೆ ಬಂದಿತು.

ನಂತರ ಕಲ್ಕತ್ತಾದಲ್ಲೇ ಅಂತ್ಯಂತ ದೊಡ್ಡ ಎಂಜನಿಯರಿಂಗ್ ಕಂಪೆನಿಯಾದ ಜೆಸ್ಸೋಪ್ ಅಂಡ್ ಕಂ. ಲಿ. ಇವರ ಕೈಗೆ ಬಂದಿತು. ಮುಂಧ್ರ ರವರು ಈ ಕಂಪೆನಿಯ ಅಧ್ಯಕ್ಷರಾಗಿದ್ದರು. ಕಳೆದ ವರ್ಷದ ವರೆಗೆ ಕೇಂದ್ರ ಸರಕಾರದ ನ್ಯಾಯಾಂಗ ಸಚಿವ ಎ. ಕೆ. ಸೇನ್‌ರವರು ಇದರ ಡೈರಕ್ಟರುಗಳಲ್ಲೊಬ್ಬರಾಗಿದ್ದರು. ಅಷ್ಟೇ ಅಲ್ಲದೆ ಅವರು ಮುಂಧ್ರರವರ ಉದ್ದಿಮೆಗಳಿಗೆ, ವ್ಯವಹಾರಗಳಿಗೆ ವಕೀಲರಾಗಿಯೂ ಇದ್ದರು.

ಒಂದಾದ ಮೇಲೊಂದು ಉದ್ಯಮಗಳು ಮುಂಧ್ರರವರ ಹಸ್ತಗತವಾಗುತ್ತ ಬಂತು. ಅವುಗಳಲ್ಲಿ ಅತ್ಯಂತ ದೊಡ್ಡ ಉದ್ದಿಮೆ ಎಂದರೆ ಬ್ರಿಟಿಷ್ ಇಂಡಿಯಾ ಕಾರ್ಪೊರೇಷನ್ ಲಿ. ಇದರ ನಿವ್ವಳ ಬಂಡವಾಳ 6.25 ಕೋಟಿ ರೂ, ಹಾಕಿರುವ ಬಂಡವಾಳ 4.06 ಕೋಟಿ ರೂಗಳು ಆಗಿವೆ. ಮುಂಧ್ರರವರು ಆದಾಯ ತೆರಿಗೆಯನ್ನು ಸಹ ಸರಿಯಾಗಿ ಪಾವತಿ ಮಾಡುತ್ತಿರಲಿಲ್ಲವೆಂದು ತಿಳಿದು ಬರುತ್ತದೆ.

ಜೀವವಿಮಾ ಕಾರ್ಪೊರೇಷನ್‌ನವರು 1.56 ಕೋಟಿ ರೂಗಳು ಹಾಕಿರುವುದಷ್ಟೇ ಅಲ್ಲದೆ, ಸ್ಟೇಟ್ ಬ್ಯಾಂಕ್ 4.5 ಕೋಟಿ ರೂಗಳನ್ನು ಸಾಲ ಕೊಟ್ಟಿದೆಯೆಂದೂ ತಿಳಿದು ಬಂದಿದೆ. ಮುಂಧ್ರರವರ ಒಟ್ಟು ಆಸ್ತಿಯ ಬೆಲೆಗಿಂತ ಹೆಚ್ಚಾಗಿ ಸಾಲ ಕೊಡಲಾಗಿದೆಯೆಂದು ತಿಳಿದು ಬಂದಿದೆ.

ಫಿರೋಜ್ ಗಾಂಧಿಯವರು ಲೋಕಸಭೆಯಲ್ಲಿ ಈ ಪ್ರಕರಣವನ್ನು ಬಯಲಿಗೆಳೆದನಂತರ, ಸರಕಾರವನ್ನು ಮುಖ್ಯವಾಗಿ ಅರ್ಥ ಸಚಿವ ಟಿ.ಟಿ.ಕೆ.ಯವರ ಗೌರವನ್ನು ಉಳಿಸಲು ಮುಂಧ್ರರವರು ಯತ್ನಿಸುತ್ತಿದ್ದಾರೆಂದು ತಿಳಿದುಬಂದಿದೆ. ಜೀವವಿಮಾ ಕಾರ್ಪೊರೇಷನ್ನಿನ ಹಣವು ನೇರವಾಗಿ ಪ್ರೀಮಿಯಂದಾರರಿಗೆ ಸೇರಿದ್ದಾದ್ದರಿಂದ ಅವನ್ನು ಹಿಂತುರುಗಿಸಿ ಕೊಡಲು ತಾವು ಯತ್ನಿಸುವುದಾಗಿಯೂ, ಆದರೆ ಹಾಗೆ ಮಾಡಲು ಸರಕಾರ ಸಾಲ ನೀಡಬೇಕಂದೂ, ಅಂದರೆ ಸ್ಟೇಟ್ ಬ್ಯಾಂಕ್ ಮೂಲಕ ಸಾಲ ನೀಡಬೇಕೆಂದೂ ಸಲಹೆ ಇತ್ತಿದ್ದಾರೆ.

ಟಿ. ಟಿ. ಕೆ. ಮಾಡಿದ ಸಹಾಯ

ಸ್ಟೇಟ್ ಬ್ಯಾಂಕಿನಿಂದ ಸಾಲ ಪಡೆದಿದ್ದ ಮುಂಧ್ರರವರು ಹಣವನ್ನು ಹಿಂತಿರುಗಿಸಿ ಕೊಡದಿದ್ದುದರಿಂದ, ಸ್ಟೇಟ್ ಬ್ಯಾಂಕಿನ ಮೇಲೆ ರಿಜರ್ವ್ ಬ್ಯಾಂಕಿನ ಒತ್ತಾಯವು ಹೆಚ್ಚಾಗಿದ್ದು, ಬ್ಯಾಂಕಿನವರು ಹಣ ವಸೂಲಿ ಮಾಡಿಕೊಳ್ಳಲು ಕ್ರಮತೆಗೆದುಕೊಳ್ಳುವುದಾಗಿ ತಿಳಿಸಿದ್ದರಿಂದ ಷೇರು ಬಜಾರಿನಲ್ಲಿ ಮುಂಧ್ರ ಗುಂಪಿನ ಉದ್ದಿಮೆಗಳ ಷೇರಿನ ಬೆಲೆ ಕೆಳಗಿಳಿಯಿತು. ಪರಿಸ್ಥಿತಿ ಹೀಗಿದ್ದಾಗ ಟಿ.ಟಿ. ಕೆ. ಮುಂಧ್ರರವರ ನೆರವಿಗೆ ಬಂದರೆಂದು ಗೊತ್ತಾಗಿದೆ. ಜೀವವಿಮಾ ಕಾರ್ಪೊರೇಷನ್ ಮೂಲಕ ಅಧಿಕ ಬೆಲೆ ತೆತ್ತು ಷೇರುಗಳನ್ನು ಕೊಂಡು, ಷೇರು ಮಾರುಕಟ್ಟೆಯಲ್ಲಿ ಬೀಳುತ್ತಿದ್ದ ಮುಂಧ್ರರರನ್ನು ಮೇಲೆತ್ತಲಾಯಿತು.

ಮುಂದ್ರರವರಿಗೆ ಬ್ರಿಟಿಷ್ ಬ್ಯಾಂಕುಗಳೂ ಸಹ ನೆರವು ನೀಡುತ್ತಿದ್ದು ಕಳ್ಳವ್ಯವಹಾರಗಳಿಗೂ ಪ್ರೋತ್ಸಾಹ ನೀಡುತ್ತಿದ್ದುವೆಂದೂ ಗೊತ್ತಾಗಿದೆ.

ಈ ಪ್ರಕರಣದ ಇತಿಹಾಸವನ್ನು ನೋಡದಲ್ಲಿ, ಮುಂಧ್ರರವರಿಗೆ ಸರಕಾರದಲ್ಲಿ ಎಷ್ಟು ಪ್ರಭಾವವಿತ್ತು ಎಂಬುದು ಅರಿವಾಗುತ್ತದೆ. ಟಿ. ಟಿ. ಕೆ.ಯಂಥ 'ದೇಶಭಕ್ತ'ರ ನೆರವಿದ್ದರೆ ಇಂಥ ದುರ್ವ್ಯವಹಾರಿಗಳಿಗೆ ತೊಂದರೆ ಎಲ್ಲಿ!

ಟಿ. ಟಿ. ಕೆ. ರಾಜೀನಾಮೆಯೆ?

ಮುಂಧ್ರ ಪ್ರಕರಣದಲ್ಲಿ ಸಿಕ್ಕಿಬಿದ್ದಿರುವ ಟಿ. ಟಿ. ಕೆ. ರಾಜೀನಾಮೆ ಕೊಡುವರೆ ಎಂಬ ವದಂತಿ ಹಬ್ಬಿದೆ. ನಿಜವಾಗಿ ಟಿ.ಟಿ ಕೆ. ಒಬ್ಬರು ಗೌರವಸ್ಥ ಸಚಿವರಾಗಿದ್ದಿದ್ದರೆ ಈಗ್ಗೆ ರಾಜೀನಾಮೆ ಇತ್ತು ಬಹು ದಿನಗಳಾಗಬೇಕಿತ್ತು.

ಯೋಜನೆಯನ್ನು ಉಳಿಸುವ ಹೆಸರಿನಲ್ಲಿ, ವಿದೇಶೀ ನೆರವಿಗಾಗಿ, ಅರ್ಥಾತ್ ಅಮೆರಿಕಾದ ಡಾಲರುಗಳಿಗಾಗಿ, ದೇಶದ ಗೌರವವನ್ನು, ಸ್ವತಂತ್ರ ವಿದೇಶಾಂಗ ನೀತಿಯನ್ನು ಒತ್ತೆ ಇಡಲು ಅಮೇರಿಕಾಕ್ಕೆ ಹೋಗಿ ಹಿಂದಿರುಗಿದಾಗಲೇ ಟಿ.ಟಿ.ಕೆ. ರಾಜೀನಾಮೆ ಈಯಬೇಕಿತ್ತು. ಪಾರ್ಲಿಮೆಂಟಿನಲ್ಲೂ ಮತ್ತು ಹೊರಗೂ ಅದಕ್ಕಾಗಿ ಒತ್ತಾಯವೂ ಇತ್ತು. ಆದರೆ ಟಿ.ಟಿ.ಕೆ. ಹಾಗೆ ಮಾಡಲಿಲ್ಲ.

ಮುಂಧ್ರ ಪ್ರಕರಣವಾದ ಮೇಲಂತೂ ಅವರು ಅರ್ಥ ಸಚಿವರಾಗಿ ಮುಂದುವರಿಯುವುದು ಕ್ಷೇಮವಲ್ಲವಾಗಿದೆ. ಈ ಪ್ರಕರಣದಲ್ಲಿ ಜೀವವಿಮಾ ಕಾರ್ಪೊರೇಷನ್ ಷೇರುಗಳನ್ನು ಕೊಂಡಾಗ ಕಾರ್ಪೊರೇಷನ್ನಿನ ಮೂವರು ಉನ್ನತ ಅಧಿಕಾರಿಗಳು ಹಾಗೂ ಸಚಿವರೂ ಇದ್ದರೆಂದು ತಿಳಿದು ಬರುತ್ತದೆ ಇದಕ್ಕೆ ಸಂಬಂಧಿಸಿ ಕಲ್ಕತಾದ ಕೆಲವು ವ್ಯಾಪಾರಸ್ಥರು ಕಾರ್ಪೊರೇಷನ್ ಈ ಷೇರುಗಳನ್ನು ಕೊಳ್ಳುವುದು ಉಚಿತವಲ್ಲ ಎಂದು ಸಲಹೆ ಮಾಡಿದರೆಂದೂ ತಿಳಿದು ಬಂದಿದೆ. ಹಿಂದೆ ಟಿ.ಟಿ.ಕೆ. ವಾಣಿಜ್ಯ ಶಾಖಾ ಸಚಿವರಾಗಿದ್ದಾಗ ಮನಸ್ಸಿಗೆ ಬಂದಂತೆ ಆಮದು ಲೈಸನ್ಸ್‌ಗಳನ್ನು ಇತ್ತು ನಮ್ಮ ದೇಶದ ವಿನಿಮಯ ಹಣವನ್ನು ಪೋಲು ಮಾಡಿದುದು ಯಾರೂ ಮರೆಯುವಂತಿಲ್ಲ. ಅದರ ಪರಿಣಾಮ ಈಗ ಅರಿವಾಗಿದೆ.

ಟಿ.ಟಿ.ಕೆ. ರಾಜಿರಾಮೆ ಕೊಟ್ಟನಂತರ ಅವರ ಸ್ಥಾನಕ್ಕೆ ಯಾರು ಬರುಬಹುದೆಂಬ ಬಗ್ಗೆ ಊಹಾಪೋಹಗಳು ಎದ್ದಿವೆ. ಅಮೆರಿಕದಲ್ಲಿ ಭಾರತದ ಪ್ರಸಕ್ತ ರಾಯಭಾರಿ ಶ್ರೀ ಜಿ. ಎಲ್. ಮೆಹ್ತಾ, ದೆಹಲಿ ವಿಶ್ವವಿದ್ಯಾ ನಿಲಯದ ಡಾ॥ ವಿ ಕೆ.ಆರ್. ವಿ. ರಾವ್ ಮತ್ತು ಮಾಜಿ ಹಣಕಾಸಿನ ಸಚಿವ ಶ್ರೀ ಚಿಂತಾಮಣಿ ದೇಶಮುಖ್ ಇವರ ಹೆಸರುಗಳನ್ನು ಸೂಚಿಸಲಾಗಿದೆ.

ಅಂತೂ ಈ ಮುಂಧ್ರ ಪ್ರಕರಣದಿಂದ ಟಿ.ಟಿ.ಕೆ. ಸುಲಭವಾಗಿ ಪಾರಾಗುವುದು ಕಷ್ಟವಾಗಿದೆ.

ಭಾರತದಲ್ಲಿ ಇಂಡೊನೇಷಿಯ ಅಧ್ಯಕ್ಷರು

ಇಂಡೋನೇಷಿಯದ ಅಧ್ಯಕ್ಷ ಸುಕಾರ್ನೋ ಭಾರತಕ್ಕೆ ಈ ವಾರ ಆಗಮಿಸಿದ್ದಾರೆ. ಭಾರತ ಸರ್ಕಾರದ ನಾಯಕರುಗಳೊಂದಿಗೆ ಅವರು ಪ್ರಮುಖ ಪ್ರಶ್ನೆಗಳ ಮೇಲೆ ಚರ್ಚೆ ನಡೆಸಲಿದ್ದಾರೆ. ಡಚ್ ಸಾಮ್ರಾಜ್ಯವಾದಿಗಳಿಂದ ವೆಸ್ಟ್ ಇರೇನ್ ವಿಮೋಚನೆಗೊಳಿಸಲು ಇಂಡೊನೇಷಿಯದ ಜನತೆ ಹೋರಾಟ ನಡೆಸುತ್ತಿದೆ. ಇಂಡೊನೇಷಿಯದ ಜನತೆಯ ಈ ಹೋರಾಟದಲ್ಲಿ ಭಾರತದ ಜನತೆಯ ಬೆಂಬಲ ಸತತವಾಗಿದೆ. ಅಧ್ಯಕ್ಷ ಸುಕಾರ್ನೋರವರ ಭಾರತದ ಭೇಟಿ ಯಶಸ್ವಿಯಾಗಲಿ ಎಂದು ಹಾರೈಸುತ್ತೇವೆ

ಅಮೆರಿಕನ್ ಪ್ರತಿನಿಧಿಯ ಮುಖಭಂಗ

ಪಾಕಿಸ್ಥಾನದ ಲಾಹೋರಿನಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ಇಸ್ಲಾಂ ಧರ್ಮ ಗೋಷ್ಠಿಯಲ್ಲಿ ಅಮೆರಿಕದ ಪ್ರತಿನಿಧಿ ಡಾ॥ ರಿಚರ್ಡ್ ಫ್ರೇಯವರು ಮಾತನಾಡುತ್ತ, ಇಸ್ಲಾಂ ಧರ್ಮದ ಬಗೆಗೆ ಮಾತನಾಡುವ ಬದಲು ಅನವಶ್ಯಕವಾಗಿ ಕಮ್ಯೂನಿಸಂ ವಿರುದ್ಧ ಭಾಷಣ ಮಾಡಿದರು. ಕಮ್ಯೂನಿಸಂಮೇಲೆ ಇಲ್ಲಸಲ್ಲದ ಅಪಪ್ರಚಾರಗಳನ್ನು ಹೇರಿಸಿ ಸೋವಿಯತ್ ಯೂನಿಯನ್ ಮತ್ತು ಇತರ ಸಮಾಜವಾದೀ ರಾಷ್ಟ್ರಗಳನ್ನೂ ಜರಿದರು.

ಆದರೆ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಚೀಣೀ ಹಾಗೂ ರಷ್ಯನ್ ನಿಯೋಗಗಳು ಅಮೆರಿಕದ ಪ್ರತಿನಿಧಿಯ ಭಾಷಣವನ್ನು ಪ್ರತಿಭಟಿಸಿ, ಧಾರ್ಮಿಕ ಸಮಾವೇಶವೊಂದದಲ್ಲಿ ಅನಗತ್ಯವಾಗಿ ಕಮ್ಯೂನಿಸಂ ವಿರುದ್ಧ ಮಾತನಾಡುವುದು ಸರಿಯಲ್ಲವೆಂದೂ, ಆ ರೀತಿ ಮಿಥ್ಯಾಪವಾದ ಮಾಡುವುದು ತಕ್ಕುದಿಲ್ಲವೆಂದೂ ತಿಳಿಸಿ, ಅವರು ತಮ್ಮ ಭಾಷಣವನ್ನು ಹಿಂದಕ್ಕೆ ತೆಗೆದು ಕೊಳ್ಳುವಂತೆ ಒತ್ತಾಯ ಪಡಿಸಿದರು.

ಸೋವಿಯತ್ ಮತ್ತು ಚೀಣೀ ಪ್ರತಿನಿಧಿಗಳ ಹಾಗೂ ಇತರ ಪ್ರತಿನಿಧಿಗಳ ಒತ್ತಾಯದಿಂದಾಗಿ ಅಮೆರಿಕದ ಪ್ರತಿನಿಧಿ ತನ್ನ ಭಾಷಣವನ್ನು ಹಿಂತೆಗೆದುಕೊಂಡು, ಕ್ಷಮೆ ಕೋರಬೇಕಾಯಿತು. ಇದು ಕಂಡು ಕಂಡಲ್ಲಿ ಮನಬಂದಂತೆ ಕಮ್ಯೂನಿಸಂ ವಿರುದ್ಧ ಹಾರಾಡುವ ಅಮೆರಿಕದ ವಕ್ತಾರರುಗಳಿಗೆ ಪಾಠ ಕಲಿಸುವಂತಾಗಿದೆ.

ರಷ್ಯದೊಂದಿಗೆ ನಿರಾಕ್ರಮಣ ಒಪ್ಪಂದ ಬ್ರಿಟಿಷ್ ಪ್ರಧಾನಿ ಮ್ಯಾಕ್‌ಮಿಲನ್ ಸೂಚನೆ

ರಷ್ಯದೊಂದಿಗೆ ನಿರಾಕ್ರಮಣ ಒಪ್ಪಂದವನ್ನು ಪಶ್ಚಿಮ ರಾಷ್ಟ್ರಗಳು ಮಾಡಿಕೊಳ್ಳುವುದಕ್ಕೆ ಯತ್ನಿಸಿದಲ್ಲಿ ಶಾಂತಿಯ ಭರವಸೆ ದೊರಕುವುದು ಎಂದು ಬ್ರಿಟಿಷ್ ಪ್ರಧಾನಿ ಮ್ಯಾಕ್ ಮಿಲನ್‌ರವರು ರೇಡಿಯೋ ಭಾಷಣವೊಂದರಲ್ಲಿ ಸೂಚಿಸಿದ್ದಾರೆ. ಪೂರ್ವ-ಪಶ್ಚಿಮ ರಾಷ್ಟ್ರಗಳ ಅಧಿಪತಿಗಳ ಸಮ್ಮೇಳನದಲ್ಲಿ ಭಾಗವಹಿಸಲು ತಮ್ಮ ಅಡ್ಡಿ ಇಲ್ಲವೆಂದೂ, ಆದರೆ ರಾಯಭಾರಿ ಮಟ್ಟದಲ್ಲಿ ಮಾತುಕತೆಗಳು ಯಾವ ರೀತಿ ಪ್ರಗತಿಯಾಗುವುದು ಎನ್ನುವುದರ ಮೇಲೆ ಅದು ಹೊಂದಿರುವುದೆಂದೂ ತಿಳಿಸಿದ್ದಾರೆ. ಸೋವಿಯತ್ ಯೂನಿಯನ್ ಪ್ರಮುಖ ಅಂತರ ರಾಷ್ಟ್ರೀಯ ವಿಷಯಗಳನ್ನು ಕುರಿತು ಚರ್ಚಿಸಲು, ಅಂತರ ರಾಷ್ಟ್ರೀಯ ಪರಿಸ್ಥಿತಿಯಲ್ಲಿನ ಉದ್ರಿಕ್ತ ವಾತಾವರಣವನ್ನು ಸಡಿಲಗೊಳಿಸಲು ಅಂಥ ಸಮ್ಮೇಳನವೊಂದು ಸೇರುವುದರ ಅಗತ್ಯತೆಯನ್ನು ಒತ್ತಿ ಹೇಳಿದ್ದಿತು.

ಅಲ್ಲದೆ ಇತ್ತೀಚೆಗೆ ನಡೆದ ನ್ಯಾಟೋ ಸಮ್ಮೇಳನಕ್ಕೆ ಮುಂಚಿತವಾಗಿ ರಷ್ಯದ ಪ್ರಧಾನಿ ಬುಲ್ಗಾನಿನ್‌ರವರು, ನಿರಾಕ್ರಮಣ ಒಪ್ಪಂದದ ಅಗತ್ಯತೆಯನ್ನು ಕುರಿತು ನ್ಯಾಟೋ ರಾಷ್ಟ್ರಗಳಿಗೆ ಪತ್ರವನ್ನೂ ಸಹ ಬರೆದಿದ್ದರು. ಬುಲ್ಗಾನಿನ್‌ರ ಪತ್ರಕ್ಕೆ ಉತ್ತರ ರೂಪವಾಗಿ ಮ್ಯಾಕ್ ಮಿಲನ್‌ರ ಈ ಹೇಳಿಕೆಯಾಗಿದೆ ಎಂದು ತಿಳಿದು ಬಂದಿದೆ.

ನಿರಾಕ್ರಮಣ ಒಪ್ಪಂದವನ್ನು ಕುರಿತಾದ ಪ್ರಧಾನಿ ಮ್ಯಾಕ್ ಮಿಲನ್‌ರ ಹೇಳಿಕೆ ಪಶ್ಚಿಮ ರಾಷ್ಟ್ರಗಳಲ್ಲಿ ತೀವ್ರ ಪ್ರತಿಕ್ರಿಯೆಯನ್ನುಂಟುಮಾಡಿದೆ. ಫ್ರಾನ್ಸ್ ಮತ್ತು ಕೆನಡಾಗಳು ಮ್ಯಾಕ್ ಮಿಲನ್‌ರ ಈ ಸೂಚನೆ, ರಷ್ಯದೊಂದಿಗೆ ಸಂಧಾನಕ್ಕೆ ಹೊಸ ಅವಕಾಶಗಳನ್ನು ಕಲ್ಪಿಸುವುದೆಂದು ಸ್ವಾಗತಿಸಿದೆ.

ಆದರೆ ಅಮೆರಿಕಾಕ್ಕೆ ಇದು ಕಳವಳವುಂಟುಮಾಡಿದೆ. ಅಮೆರಿಕಾದ ವಿದೇಶಾಂಗ ಶಾಖೆಯ ವಕ್ತಾರರುಗಳು ಮ್ಯಾಕ್ ಮಿಲನ್‌ರ ಹೇಳಿಕೆಯ ಬಗ್ಗೆ ಆಶ್ಚರ್ಯ ವ್ಯಕ್ತಗೊಳಿಸಿದ್ದಾರೆ ಮ್ಯಾಕ್ ಮಿಲನ್‌ರ ಭಾಷಣವನ್ನು ಇನ್ನೂ ಪರಿಶೀಲಿಸುತ್ತಿರುವುದಾಗಿ ತಿಳಿಸಿದ್ದಾರೆ.

ಬ್ರಿಟಿಷ್ ಲೇಬರ್ ಪಕ್ಷ ಮತ್ತು ಇತರ ವೃತ್ತಗಳು ಈ ಸಲಹೆಯನ್ನು ಸ್ವಾಗತಿಸಿವೆ. ನ್ಯಾಟೋ ರಾಷ್ಟ್ರಗಳು ಮ್ಯಾಕ್ ಮಿಲನ್‌ರವರ ಸಲಹೆಯನ್ನು ಬುಲ್ಗಾನಿನ್‌ರವರ ಪತ್ರಕ್ಕೆ ಈಯಲಿರುವ ಉತ್ತರದ ಕರಡನ್ನೂ ಚರ್ಚಿಸಲಿವೆ.

ಮಾಸ್ಕೋ ರೇಡಿಯೋ ಮ್ಯಾಕ್ ಮಿಲನ್‌ರ ಈ ಸಲಹೆಯ ಬಗ್ಗೆ ವರದಿ ಮಾಡುತ್ತಾ ಮ್ಯಾಕ್ ಮಿಲನ್‌ರವರ ಸೂಚನೆಯಲ್ಲಿ ಹೊಸತೇನೂ ಇಲ್ಲವೆಂದೂ ರಷ್ಯವು ಕಳೆದ ಕೆಲವು ವರ್ಷಗಳಿಂದಲೂ

(ಕೊನೇ ಪುಟ ನೋಡಿ)

ದೊಡ್ಡ ಭೂಮಾಲಿಕರ ವಿರೋಧದಿಂದ ಭೂಸುಧಾರಣೆಯನ್ನು ರಕ್ಷಿಸಿರಿ!

ಅಖಿಲ ಕರ್ನಾಟಕ (ಮೈಸೂರು ರಾಜ್ಯ)ದ ಭೂಮಾಲಿಕರ ಪ್ರತಿನಿಧಿಗಳ ಸಮ್ಮೇಳನವೊಂದು ಕಳೆದ ದಶಂಬರ ತಾ. 30 ಮತ್ತು 31ರಲ್ಲಿ ಶಿವಮೊಗ್ಗದಲ್ಲಿ ಜರಗಿ 'ಜತ್ತಿ ಸಮಿತಿ'ಯ ವರದಿಯನ್ನು ವಿರೋಧಿಸುವ ಸೋಗಿನಲ್ಲಿ ಭೂಸುಧಾರಣೆಯ ಬುಡಕ್ಕೆನೆ ಕೊಡಲಿಯ ಏಟು ಹಾಕುವ ನಿರ್ಣಯವನ್ನು ಮಾಡಿರುತ್ತದೆ. ಕರ್ನಾಟಕದ ರೈತರು ಮಾತ್ರವಲ್ಲ, ನಾಡಿನ ಏಳಿಗೆಯನ್ನು ಬಯಸುವ ಸಮಗ್ರ ಜನತೆ ಭೂಮಾಲಿಕರ ಈ ಪ್ರತಿರೋಧವನ್ನು, ಈ ಗುಲ್ಲೆಬ್ಬಿಸಿ ಬೆದರಿಸುವ ಪಿತೂರಿಯನ್ನು, ಸೋಲಿಸಲೇಬೇಕು. ಅದಕ್ಕೋಸ್ಕರ ಎಲ್ಲೆಲ್ಲೂ ಸಭೆ, ಸಮ್ಮೇಳನ, ಮತಪ್ರದರ್ಶನ ನಡೆಸಬೇಕು. ಮಂತ್ರಿಗಳು ಹೋಗುವಲ್ಲೆಲ್ಲ ಮನವಿಗಳನ್ನು ಅರ್ಪಿಸಬೇಕು. ಠರಾವುಗಳ ಮತ್ತು ತಂತಿಗಳ ಮೂಲಕ ಸರಕಾರವನ್ನು ಎಚ್ಚರಿಸಬೇಕು. ರೈತರನ್ನು ಮಿತಿಮೀರೆಯಿಲ್ಲದೆ ಸುಲಿಗೆ ಮಾಡುವ ಅವಕಾಶವನ್ನು ಉಳಿಸಿಕೊಳ್ಳುವುದಕ್ಕೆ ಹೆಣಗಾಡುವವರ ಆರ್ಭಟವನ್ನು ಜನತೆಯ ಒಕ್ಕೊರಲಿನ ಘೋಷಣೆಯಿಂದ ಅಡಗಿಸಬೇಕು. ಕರ್ನಾಟಕ ಪ್ರಾಂತ ಪ್ರಥಮ ರೈತ ಸಮ್ಮೇಳನದ ನಿರ್ಣಯಗಳ ತಳಹದಿಯಲ್ಲಿ ತಯಾರಿಸಲ್ಪಟ್ಟಿರುವ ಮನವಿಗೆ ಸಾವಿರ ಗಟ್ಟಲೆಯಲ್ಲಿ ಸಹಿ ಸಂಗ್ರಹಿಸುವ ಕಾರ್ಯವನ್ನು ರಭಸದಿಂದ ಸಾಗಿಸಬೇಕು. ರೈತ ಸಂಘಕ್ಕೆ ಸಾವಿರಗಟ್ಟಲೆ ರೈತರನ್ನು ಸದಸ್ಯರನ್ನಾಗಿ ಸೇರಿಸಬೇಕು. ಹಾಗೆ ದೊಡ್ಡ ದೊಡ್ಡ ಭೂಮಾಲಕರು, ರೈತರ ಶೋಷಣೆಯಿಂದ ಕೊಬ್ಬುವ ಪರೋಪಜೀವಿ ವರ್ಗ, ಕೊಡುತ್ತಿರುವ ಪಂಥಾಹ್ವಾನಕ್ಕೆ ಉತ್ತರ ಕೊಡಬೇಕು. ಜತ್ತಿ ಸಮಿತಿಯ ವರದಿಯಲ್ಲಿ ಹೇಳಿರುವಷ್ಟೇ ಅಲ್ಲ—ಅದಕ್ಕಿಂತಲೂ ಪ್ರಗತಿಶೀಲವಾದ ಮತ್ತು ಇಂದಿನ ಪರಿಸ್ಥಿತಿಯಲ್ಲಿ ಅತ್ಯಾವಶ್ಯಕವಾದ ಯೋಗ್ಯ ಭೂಸುಧಾರಣೆಯು ಕೂಡಲೆ ಆಗುವಂತೆ ಸರಕಾರವನ್ನು ನಿರ್ಬಂಧಿಸಬೇಕು. ಇದು ನಮ್ಮ ಕಳಕಳಿಯ ವಿನಂತಿ.

* * *

ಕರ್ನಾಟಕದ ಆದ್ಯಂತವಾಗಿ ಪ್ರಬಲ ಚಳುವಳಿ ನಡೆಯದಿದ್ದರೆ—ರೈತರು ನಿರೀಕ್ಷಿಸುವಂಥ ಭೂಸುಧಾರಣೆ ಒತ್ತಟ್ಟಿಗಿರಲಿ—ಜತ್ತಿ ಸಮಿತಿ ಸೂಚಿಸಿರುವ ಸುಧಾರಣೆ ಕೂಡ ಆಗಲಾರದು. ಕಾಂಗ್ರೆಸ್ ಪಕ್ಷದ ಧೋರಣೆ ಕಾರ್ಯಕ್ರಮಗಳನ್ನು ನಿರ್ಣಯಿಸುವ ಮತ್ತು ಕಾರ್ಯಕಾರಿಗೊಳಿಸುವ ನಾಯಕತ್ವದಲ್ಲಿ ಭೂಸುಧಾರಣೆಯ ವಿರೋಧಿಗಳ ಹಿಡಿತ ಬಹಳ ಬಲವಾಗಿದೆ. ಶಾಸನ ಕರ್ತರಾದ ವಿಧಾನ ಸಭಾ ಸದಸ್ಯರಲ್ಲಂತೂ ದೊಡ್ಡ "ಭೂಮಾಲಕರ, ಬಂಡವಾಳಗಾರರ ಮತ್ತು ಜಾತೀಯವಾದಿಗಳ" ಬಲ ಬಹಳವಾಗಿದೆ. ಮಂತ್ರಿ ಮಂಡಲದಲ್ಲೂ ಭೂಸುಧಾರಣೆಯ ಶತ್ರುಗಳಿದ್ದಾರೆ. ಇದನ್ನು ಮರೆತರೆ, ಕಡೆಗಣಿಸಿದರೆ, ಜನತೆಯ ನಿರೀಕ್ಷೆಯೆಲ್ಲ ಬರಿದಾಗುವುದು. ಅಧಿಕಾರಾರೂಢವಾಗಿರುವ ಈ ಜನವಿರೋಧಿ ಶಕ್ತಿಯನ್ನು ಇದಿರಿಸಿ ಸೋಲಿಸಬಲ್ಲ ಪ್ರಬಲ ಸಂಘಟನೆ ಮತ್ತು ಚಳುವಳಿ ಇಂದಿನ ಪ್ರಾಥಮಿಕ ಅವಶ್ಯಕತೆಯಾಗಿದೆ.

ಸಂಘಟನೆ ಮತ್ತು ಚಳವಳಿ ಅಗತ್ಯ

ಬಲವಾದ ಸಂಘಟನೆಯೂ ಚಳುವಳಿಯೂ ಬೆಳೆದರೆ, ಭೂಸುಧಾರಣೆಯ ಶತ್ರುಗಳನ್ನು ಸೋಲಿಸಲು ಸಾಧ್ಯವಿದೆ. ಕಾರಣ, ಭೂಸುಧಾರಣೆಯ ಪ್ರಾಮುಖ್ಯತೆಯನ್ನು ಇಂದು ಕೇಂದ್ರ ಸರಕಾರ, ಯೋಜನಾ ಮಂಡಲದ ಆದಿಯಾಗಿ ಇಡೀ ರಾಷ್ಟ್ರವೇ ಒಪ್ಪಿಕೊಂಡಿದೆ. ಭೂಸುಧಾರಣೆಯಾಗದೆ ಯಾವ ಕ್ಷೇತ್ರದಲ್ಲೂ ಪ್ರಗತಿ ಸಾಧ್ಯವಲ್ಲ. ಭೂಸುಧಾರಣೆಗೆ ಅನುಕೂಲವಾದ ಅಭಿಪ್ರಾಯವುಳ್ಳವರು ಕಾಂಗ್ರೆಸ್ ಪಕ್ಷದಲ್ಲೂ ಶಾಸನಕರ್ತರಲ್ಲೂ ಮಂತ್ರಿ ಮಂಡಲದಲ್ಲೂ ಗಣ್ಯ ಪ್ರಮಾಣದಲ್ಲಿ ಇದ್ದಾರೆ. ಎಲ್ಲದಕ್ಕಿಂತ ಹೆಚ್ಚಾಗಿ, ಗೇಣಿಯ ನಿರ್ಣಯ, ಹೊಲತಪ್ಪಿಸುವುದಕ್ಕೆ ತಡೆ, ಹಿಡುವಳಿಗೆ ಪರಿಮಿತಿ ಮುಂತಾದ ಅಂಶಗಳನ್ನು ಒಳಗೊಂಡಿರುವ ಕಾನೂನುಗಳು ಕರ್ನಾಟಕದ ನಾನಾ ಭಾಗಗಳಲ್ಲಿ ಜಾರಿಯಲ್ಲಿದ್ದು ಆ ಕಾನೂನುಗಳ ಒಳ್ಳೆಯ ಮತ್ತು ಕೆಟ್ಟ ಪರಿಣಾಮಗಳನ್ನು ಪ್ರತ್ಯಕ್ಷವಾಗಿ ಅನುಭವಿಸಿರುವ ರೈತರಿದ್ದಾರೆ. ಈಗ ಜಾರಿಯಲ್ಲಿರುವ ಕಾನೂನುಗಳ ಲೋಪದೋಷಗಳನ್ನು ತೊಡೆದು ಹಾಕಿ, ನಿಜವಾಗಿಯೂ ರೈತರ ಹಿತವನ್ನು ರಕ್ಷಿಸುವ ಮತ್ತು ವ್ಯವಸಾಯದ ಅಭಿವೃದ್ಧಿಗೆ ಅನುಕೂಲವಾಗುವ ಭೂಸುಧಾರಣೆಯ ಕಾನೂನನ್ನು ರೈತರು ಅಪೇಕ್ಷಿಸುತ್ತಾರೆ. ರೈತರು ಹೋರಾಡಿ ಈಗಾಗಲೆ ಪಡೆದಿರುವ ಸೌಲಭ್ಯತೆಗಳನ್ನು ಕಸಿದುಕೊಳ್ಳುದಕ್ಕೆ ಪ್ರಯತ್ನಿಸುವವರು ತೀವ್ರ ಪ್ರತಿಭಟನೆಯನ್ನು ಇದಿರಿಸಬೇಕಾಗುವುದು. ಈಗ ಇರುವ ಕಾನೂನುಗಳಿಗಿಂತಲೂ ಉತ್ತಮವಾದ ಸಮಗ್ರ ಭೂಸುಧಾರಣೆಯನ್ನು ಬಹಳ ಕಾಲದಿಂದ ನಿರೀಕ್ಷಿಸುತ್ತಿರುವ ರೈತರ ಕಣ್ಣಿಗೆ ಮಣ್ಣೆರಚಲು ಯತ್ನಿಸುವವರು ಸಾಮೂಹಿಕ ವಿರೋಧವನ್ನು ಇದಿರಿಸಬೇಕಾಗುವುದು. ಇದನ್ನು ತಿಳಿಯದಷ್ಟು ತಿಳಿಗೇಡಿತನ ಜವಾಬ್ದಾರ ವಲಯಗಳಲ್ಲಿ ಇರಲಾರದೆಂದು ಆಶಿಸಬಹುದು. ಸಂಘಶಕ್ತಿಯನ್ನೂ ಚಳುವಳಿಯನ್ನೂ ಬೆಳೆಸದಿದ್ದರೆ ಭೂಸುಧಾರಣೆ ಮುಳುಗಿ ಹೋಗುವ ಅಪಾಯವಿದೆ; ಸಂಘಟನೆಯೂ ಚಳುವಳಿಯೂ ಪ್ರಬಲವಾದರೆ ಯೋಗ್ಯ ಭೂಸುಧಾರಣೆ ಬೇಗನೆ ಕೈಗೂಡುವುದು ಸಾಧ್ಯವಿದೆ. ಇದು ಇಂದಿನ ಪರಿಸ್ಥಿತಿ.

ಕಾಲಹರಣೆ ಕೂಡದು

ಭೂಮಾಲಕರ ಪ್ರತಿನಿಧಿಗಳೆಂದು ಹೇಳಿಕೊಂಡು ಭೂಸುಧಾರಣೆಯನ್ನು ವಿರೋಧಿಸುವವರ ವಿಚಿತ್ರ ವಾದಸರಣಿ, ಅವರ ಬೇಡಿಕೆಗಳು, ಅವರ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ನೋಡಿದರೆ ಅವರು ಪ್ರಗತಿಯ ಚಕ್ರವನ್ನು ಹಿಂದಕ್ಕೆ ತಿರುಗಿಸಲು ಟೊಂಕಕಟ್ಟಿ ಹೊರಟಿದ್ದಾರೆಂದು ತೋರುತ್ತದೆ. ಜತ್ತಿ ಸಮಿತಿಯ ವರದಿಯು "ನ್ಯಾಯಕ್ಕೆ ವಿರೋಧವಾಗಿದೆ, ಭಾರತ ರಾಜ್ಯಾಂಗ ಘಟನೆಯ ತತ್ವಗಳಿಗೆ ಪ್ರತಿಕೂಲವಾಗಿದೆ, ಪಕ್ಷಪಾತ ಮಾಡುವಂಥಾದ್ದಾಗಿದೆ" ಎಂದು ಟೀಕಿಸಿ ಆ ವರದಿಯನ್ನು ಸಂಪೂರ್ಣವಾಗಿ ಹರಿದುಹಾಕಬೇಕೆಂದು ಅವರು ಸೂಚಿಸಿರುತ್ತಾರೆ. ರಾಜ್ಯದ ವ್ಯವಸಾಯಿಕ ಪರಿಸ್ಥಿತಿಯನ್ನು ಅಭ್ಯಾಸ ಮಾಡಿ ಯೋಗ್ಯ ಸುಧಾರಣೆ ಹೇಗಿರಬೇಕೆಂದು ಕಂಡು ಹಿಡಿಯಲು ತಿರುಗಿ ಕೂಲಂಕೂಶ ವಿಚಾರಣೆ ನಡೆಸಬೇಕೆಂದೂ, ಹಾಗೆ ವಿಚಾರಣೆಗೆ ವಿನಿಯೋಗಿಸಲ್ಪಡುವ ಸಮಯವು ವ್ಯರ್ಥವಾಗದೆಂದೂ ಅವರು ಹೇಳಿರುತ್ತಾರೆ.

ವಿಚಾರಣಾ ಸಮಿತಿಗಳ ಮೇಲೆ ವಿಚಾರಣಾ ಸಮಿತಿಗಳನ್ನು ನೇಮಿಸಿ ವರ್ಷಗಟ್ಟಲೆ ಕಾಲ ಕಳೆಯುವ ತಂತ್ರವನ್ನು ಈ ತನಕ ನಡೆಸುತ್ತ ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಚಾರ. ಜತ್ತಿ ಸಮಿತಿಯೂ ಸಾಕಷ್ಟು ಸಮಯ ಕಳೆದಿದೆ; ಅದರ ಚರ್ಚೆಗೆಂದು ಮತ್ತೆ ಕಾಲ ಕಳೆಯಲಾಗಿದೆ. ಇನ್ನು ಮತ್ತೊಂದು ಸಮಿತಿಯನ್ನು ನೇಮಿಸಬೇಕೆಂಬ ಈ ಸೂಚನೆಯು ಭೂಸುಧಾರಣೆಯನ್ನೇ ವಿಫಲಗೊಳಿಸುವ ತಂತ್ರವಾಗಿದೆ. ಸರಕಾರವು ವಿಚಾರಣೆಯಲ್ಲೇ ಕಾಲ ಕಳೆಯಬೇಕು; ಭೂಸುಧಾರಣೆ ಆಗಬೇಕೆಂದು ಚಡಪಡಿಸುವ ಜನರ ಕಣ್ಣಿಗೆ ಮಣ್ಣೆರಚಿ ಚಳವಳಿಯನ್ನು ಮುರಿಯಬೇಕು; ಅದೇ ಸಮಯದಲ್ಲಿ ಉಳುವ ರೈತರನ್ನು ಹೊಲಗಳಿಂದ ಹೊರದೂಡುವುದು, ಜಮೀನನ್ನೆಲ್ಲ ಬೇಕು ಬೇಕಾದವರೊಳಗೆ ಹಂಚಿಕೊಳ್ಳುವುದು, ಸುಳ್ಳು ದಾಖಲೆಗಳನ್ನು ತಯಾರಿಸಿಕೊಳ್ಳುವುದೇ ಮೊದಲಾದ ಕೆಲಸಗಳನ್ನು ಪೂರ್ತಿಗೊಳಿಸಬೇಕು—ಇದು ಭೂಮಾಲಿಕರ ಉಪಾಯವಾಗಿದೆ. ಇದಕ್ಕೆ ಸರಕಾರ ತಲೆ ಬಾಗಬಾರದು. ವಿಧಾನ ಸಭೆಯಲ್ಲಿ ಜತ್ತಿ ಸಮಿತಿಯ ವರದಿಯ ಚರ್ಚೆಯನ್ನು ಬೇಗನೆ ಮುಗಿಸಿ, ಈ ಆರ್ಥಿಕ ವರ್ಷ (ಮಾರ್ಚ್ ತಾ. 31) ಕೊನೆಗಾಣುವ ಮೊದಲೆ ಭೂಸುಧಾರಣೆಯ ಶಾಸನವನ್ನು ಜಾರಿಗೆ ತರಬೇಕೆಂದು ನಾವು ಸರಕಾರವನ್ನು ಒತ್ತಾಯ ಮಾಡುತ್ತೇವೆ. ಜತ್ತಿ ಸಮಿತಿಯು ಸಾಕಷ್ಟು ಮಾಹಿತಿಗಳನ್ನು ಒದಗಿಸಿದೆ; ಕೆಲವು ಯೋಗ್ಯ ಶಿಫಾರಸುಗಳನ್ನೂ ಮಾಡಿದೆ. ಅದರಲ್ಲಿ ಕೆಲವು ಕುಂದುಕೊರತೆಗಳು ಇವೆ ನಿಜ. ಆ ಕುಂದುಕೊರತೆಗಳನ್ನು ತಿದ್ದುವುದಕ್ಕೆ ತಿರುಗಿ ವಿಚಾರಣೆಯೇನೂ ಬೇಕಾಗಿಲ್ಲ. ಜತ್ತಿ ಸಮಿತಿಯ ವರದಿಯ ಚರ್ಚೆಯ ಕಾಲದಲ್ಲಿ ವಿಧಾನ ಸಭೆಯಲ್ಲಿ ಪ್ರಕಟಸಲ್ಪಡುವ ಅಭಿಪ್ರಾಯಗಳನ್ನು ಸರಕಾರ ಗಮನಿಸಲಿ. ಶಾಸನವು ಉಳುವ ರೈತರಿಗೆ ಆದಷ್ಟು ಹೆಚ್ಚು ರಕ್ಷಣೆ ಮತ್ತು ಸೌಲಭ್ಯತೆ ನೀಡುವಂತೆಯೂ ಬೇಸಾಯಗಾರರಲ್ಲದ ಪರೋಪಜೀವಿ ದೊಡ್ಡ ಭೂಮಾಲಕರು ನಡೆಸುತ್ತಿರುವ ಮಿತಿಮೀರೆಯಿಲ್ಲದ ಶೋಷಣೆ, ದಬ್ಬಾಳಿಕೆ, ಮೋಸಗಳನ್ನು ತಡೆಯುವಂತೆಯೂ ಯೋಗ್ಯ ನಿಯಮಗಳನ್ನು ಅದರಲ್ಲಿ ಒಳಪಡಿಸಲಿ. ಅದು ಕೂಡಲೆ ಆಗಬೇಕೆಂದು ನಾವು ಸರಕಾರವನ್ನು ಕೇಳಿಕೊಳ್ಳುತ್ತೇವೆ.

ಹಿಡುವಳಿಗೆ ಪರಿಮಿತಿ ಬೇಕು

ಜತ್ತಿ ಸಮಿತಿಯ ವರದಿಯು ಕಾರ್ಯರೂಪಕ್ಕೆ ಬಂದರೆ "ಮೈಸೂರು ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಭೂಮಾಲಕರ ಸ್ವಂತ ಸಾಗುವಳಿಗೆ ಒಂದೇ ಒಂದು ಅಂಗುಲ ಜಮೀನು ಕೂಡಾ ಸಿಗಲಾರದು" ಎಂದು ಭೂಮಾಲಿಕ ಪ್ರತಿನಿಧಿಗಳ ಸಮ್ಮೇಳನ ಹುಯಿಲೆಬ್ಬಿಸಿದೆ. ಜಮೀನು ಹರಿದು ಹಂಚಲ್ಪಟ್ಟು ವ್ಯವಸಾಯಿಕ ಉತ್ಪಾದನೆಗೆ ತಡೆ ಉಂಟಾಗುವುದೆಂದು ಈ ಸಮ್ಮೇಳನವು ಮೊರೆಯಿಟ್ಟಿದೆ. "ಹಿಡುವಳಿಯ ಮೇಲೆ ಪರಿಮಿತಿ ನಿರ್ಣಯಿಸುವುದಕ್ಕೆ ನಾವು (ಭೂಮಾಲಿಕರು) ಪೂರ್ತಿಯಾಗಿ ವಿರೋಧವಿದ್ದೇವೆ. ಪ್ರಪಂಚದಲ್ಲಿ ಎಲ್ಲಿಯೂ ಹಾಗೆ ಪರಿಮಿತಿ ನಿರ್ಣಯಿಸಿಲ್ಲ. ಬೇರೆ ಆದಾಯಗಳಿಗೆ ಪರಿಮಿತಿ ನಿರ್ಣಯ ಮಾಡದೆ ವ್ಯವಸಾಯಿಕ ಆದಯಕ್ಕೆ ಮಾತ್ರ ಪರಿಮಿತಿ ನಿರ್ಣಯಿಸುವುದು ನ್ಯಾಯವಲ್ಲ. ಹೀಗೆ ಪರಿಮಿತಿ ನಿರ್ಣಯಿಸುವುದರಿಂದ ಜನರಲ್ಲಿ ಶೇ. 2ರಷ್ಟು ಭಾಗಕ್ಕೆ ಸುಖವಾದ ಜೀವನ, ಮಕ್ಕಳ ವಿದ್ಯಾಭ್ಯಾಸ, ಶಾಸನ ಮಾಡುವುದರಲ್ಲೂ ಆಡಳಿತೆ ನಡೆಸುವುದರಲ್ಲೂ ಯೋಗ್ಯ ಪ್ರತಿನಿಧಿತ್ವ ಮುಂತಾದವುಗಳಿಗೆ ಅವಕಾಶವಿಲ್ಲದೆ ಹೋಗುವುದು" ಎಂದು ಈ ಸಮ್ಮೇಳನವು ವಾದಿಸಿದೆ.

ಈ ವಾದ ಹುರುಳಿಲ್ಲದ ಬಡಬಡಿಕೆಯೆಂದೇ ಹೇಳಬೇಕಾಗಿದೆ. ಜತ್ತಿ ಸಮಿತಿಯವರ ವರದಿಯ ಪ್ರಕಾರವೆ ಗೇಣಿಗೆ ಅಥವ ಗುತ್ತಿಗೆಗೆ ಹೊಲ ವಹಿಸಿಕೊಂಡು ಸಾಗುವಳಿ ಮಾಡುವವರ ಸಂಖ್ಯೆ ಶೇ. 13ರಷ್ಟಿದೆ. ಕೆಲವು ಜಿಲ್ಲೆಗಳಲ್ಲಿ ಅದು ಶೇಕಡ 50ಕ್ಕಿಂತ ಹೆಚ್ಚಿಗೆ ಇದೆ. ಜಮೀನಿಲ್ಲದ ಕೃಷಿ ಕೂಲಿಗಾರರ ಸಂಖ್ಯೆ ಶೇ. 15ರಷ್ಟಿದೆ. 10 ಎಕ್ರೆ, 5 ಎಕ್ರೆ ಮತ್ತು ಅದಕ್ಕಿಂತ ಕಮ್ಮಿ ಜಮೀನು ಇರುವವರು—ಅವರಲ್ಲಿ ಹೆಚ್ಚು ಮಂದಿ ಸ್ವಂತ ಸಾಗುವಳಿದಾರರು—ಶೇಕಡ 45ಕ್ಕಿಂತ ಹೆಚ್ಚು ಇದ್ದಾರೆ. ಇವರೆಲ್ಲ ಇಂದು ಕಡುಬಡತನ, ಕಷ್ಟಕಾರ್ಪಣ್ಯಗಳಿಗೆ ಗುರಿಯಾಗಿದ್ದಾರೆ. ಇಂಥವರನ್ನು ಸುಲಿದು ಶೇಕಡ 2ರಷ್ಟು ಮಂದಿ, ಗೇಣಿ ಪಡೆದು ಮೆರೆಯುವ ಭೂಮಾಲಿಕವರ್ಗ, ಇನ್ನು ಮುಂದೆ ಸ್ವಲ್ಪ ದುಡಿಯಬೇಕಾಗುವುದು, ಸ್ವಲ್ಪ ಕಷ್ಟಪಡಬೇಕಾಗುವುದು ನಿಜ. ಅದರಿಂದ ಸಮಾಜಕ್ಕೂ ದೇಶಕ್ಕೂ ಹಿತವಲ್ಲದೆ ಕೆಡುಕಾಗದು. ಪರೋಪಜೀವಿಗಳಾಗಿ ಮೆರೆಯುವುದಕ್ಕಿಂತ ದುಡಿದು ಬದುಕುವ ಸ್ಥಿತಿ ಉಂಟಾದರೆ ಈ ಶೇ. 2ರಷ್ಟು ಜನರಿಗೂ—ದೀರ್ಘಾವಧಿಯಲ್ಲಿ—ಒಳ್ಳೆಯದೆ! ಹೀಗಿರುವಾಗ ಅವರ ಸ್ಥಾಪಿತ ಹಕ್ಕನ್ನು ಉಳಿಸಿಕೊಳ್ಳಲು ಹೊರಟಿರುವ ಭೂಮಾಲಕರ ಪ್ರತಿನಿಧಿಗಳ ಸಮ್ಮೇಳನವು ಕೇವಲ ಸ್ವಾರ್ಥ ಮತ್ತು ಸಂಕುಚಿತ ದೃಷ್ಟಿಯನ್ನು ಹೊಂದಿದೆ ಎನ್ನದೆ ನಿರ್ವಾಹವಿಲ್ಲ.

ಮೊದಲು ಉಳುವವರು ಹೊಲದಲ್ಲಿ ಸ್ಥಿರತೆ ಗಳಿಸಲಿ; ಹೊಲದ ಮಾಲಕತ್ವ ಪಡೆಯಲಿ. ಅನಂತರ ಹಿಡುವಳಿಗಳ ಸಂಯೋಜನೆ, ಸಹಕಾರ ಮತ್ತು ಸಾಮೂಹಿಕ ಕೃಷಿ ಪದ್ಧತಿ ಮುಂತಾದ ರೀತಿಗಳಲ್ಲಿ ವ್ಯಾವಸಾಯಿಕ ಸುಧಾರಣೆಗಳನ್ನು ಅಮಲಿನಲ್ಲಿ ತರಲು ಕಾರ್ಯಕ್ರಮ ವಹಿಸಬಹುದು.

(೬ನೇ ಪುಟ ನೋಡಿ)

ಕಾರ್ಮಿಕ ವರ್ಗಕ್ಕೆ ಅಖಿಲ ಭಾರತ ಟ್ರೇಡ್ ಯೂನಿಯ

ದೇಶದ ಕಾರ್ಮಿಕ ವರ್ಗದ ನೆಚ್ಚಿನ ಕೇಂದ್ರ ಸಂಘಟನೆಯಾದ ಹಾಗೂ ಭಾರತದಲ್ಲಿ 37 ವರ್ಷಗಳ ಹಿಂದೆ, ಮೊದಲು ಸ್ಥಾಪಿತವಾದ, ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ 25ನೇ ಅಧಿವೇಶನವು ಕೇರಳದ ನಗರ ಎರ್ನಾಕುಳಂನಲ್ಲಿ ಡಿಸೆಂಬರ 25ರಿಂದ 29ರ ವರೆಗೆ ಜರಗಿತು. ಈ ಸಮ್ಮೇಳನವು ಎಲ್ಲ ರೀತಿಯಿಂದಲೂ ಚರಿತ್ರಾರ್ಹವಾದದ್ದು ಎಂದರೆ ಅತಿಶಯೋಕ್ತಿಯಲ್ಲ ಹಿಂದೆ ಜರುಗಿದ ಸಮ್ಮೇಳನಗಳಲ್ಲೂ ಸಹ ಅನೇಕ ಪ್ರತಿನಿಧಿಗಳೂ ಪ್ರೇಕ್ಷಕರೂ ಭಾಗವಹಿಸಿದ್ದರು. ಆದರೆ ಈ ಸಮ್ಮೇಳನದಲ್ಲಿ 9,47,239, ಸಂಘಟಿತ ಕಾರ್ಮಿಕರನ್ನೂ 870 ಕಾರ್ಮಿಕ ಸಂಘಗಳನ್ನೂ ಪ್ರತಿನಿಧಿಸುವ, 1282 ಚುನಾಯಿತ ಪ್ರತಿನಿಧಿಗಳೂ 189ಪ್ರೇಕ್ಷಕರೂ, ಕರ್ನಾಟಕದಿಂದ ಪ್ರತಿನಿಧಿಗಳೂ 5 ಪ್ರೇಕ್ಷಕರೂ ಇದ್ದರು. ಇದು ಎ.ಐ.ಟಿ.ಯು.ಸಿ. ಯ ಬೆಳೆಯುತ್ತಿರುವ ಶಕ್ತಿಯನ್ನು ಪ್ರತಿಬಿಂಬಿಸುತ್ತದೆ. ಮೊದಲ ಬಾರಿ 31 ಮಂದಿ ಸ್ತ್ರೀಕಾರ್ಮಿಕರು ಸಮ್ಮೇಳನಕ್ಕೆ ಬಂದಿದ್ದು ಹರ್ಷದಾಯಕ. ಅವರಲ್ಲಿ ಹೆಚ್ಚು ಮಂದಿ ಕರ್ನಾಟಕದಿಂದ ಬಂದಿದ್ದು ಹೆಮ್ಮೆಯ ವಿಷಯ. ಅಲ್ಲದೆ ಪ್ರಥಮತಃ ಹಿಂದೆಂದೂ ಬಾರದಷ್ಟು ಅಂತರ್ರಾಷ್ಟ್ರೀಯ ಸೌಹಾರ್ದ ಪ್ರತಿನಿಧಿಗಳು ಈ ಬಾರಿ ರಷ್ಯ, ಚೀಣ, ಉತ್ತರ ಕೊರಿಯ, ವಿಯೆಟ್‌ನಾಂ, ಫ್ರಾನ್ಸ್, ಜೆಕೋಸ್ಲೊವಾಕಿಯ, ರುಮೇನಿಯ, ಮತ್ತು ವಿಶ್ವ ಕೂಲಿಕಾರ ಮಹಾಮಂಡಲಗಳಿಂದ ಸಮ್ಮೇಳನದಲ್ಲಿ ಪ್ರಾರಂಭದಿಂದ ಅಂತ್ಯದ ವರೆವಿಗೂ ಹಾಜರಿದ್ದು ಶುಭಾಶಯಗಳನ್ನು ಕೋರಿದ್ದು ಮಾತ್ರವಲ್ಲದೆ ತೀವ್ರಾಸಕ್ತಿ ವಹಿಸಿದರು. ಮತ್ತೊಂದು ಅಂಶವೆಂದರೆ, ಮೊದಲ ಬಾರಿಗೆ ಕಾರ್ಮಿಕವರ್ಗದ ನಾಯಕತ್ವ ಒಪ್ಪಿಕೊಳ್ಳುವ, ಕಾರ್ಮಿಕ ವರ್ಗಕ್ಕೆ ಅನುಕೂಲಗಳನ್ನು ಮಾಡಿಕೊಡುತ್ತಿರುವ ಕಮ್ಯೂನಿಸ್ಟ್ ಸರಕಾರದ ಕೇರಳದಲ್ಲಿ ಸಮ್ಮೇಳನ ಸೇರಿತ್ತು. ಇದರಿಂದಾಗಿ ಹೊಸ ಹುರುಪು, ನವ ಚೈತನ್ಯ ಆತ್ಮ ಸಂಪಿಕೆಗಳು ಹೆಚ್ಚಾಗಲು ಕಾರಣವಾಯಿತು. ಎಲ್ಲಕ್ಕಿಂತ ಮಿಗಿಲಾಗಿ, ಅನೇಕ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳು ಕಾರ್ಮಿಕ ವರ್ಗದ ಮುಂದಿದ್ದರೂ ಸಹ ಅವುಗಳ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಸಮ್ಮೇಳನದ ಚರ್ಚೆಯಿಂದ ಹಾಗೂ ಪ್ರಧಾನ ಕಾರ್ಯದರ್ಶಿ ಕಾಂ॥ ಎಸ್ ಎ. ಡಾಂಗೆಯವರ ವರದಿಯಿಂದ ಹೆಚ್ಚು ಸ್ಪಷ್ಟತೆ ದೊರಕಲು ಅನುಕೂಲವಾಯಿತು. ವಯಸ್ಸಾಗಿದ್ದರಿಂದ ಎ. ಐ. ಟಿ. ಯು ಸಿಯ ಅಧ್ಯಕ್ಷ ಶ್ರೀ ವಿ. ಚಕ್ಕರೈ ಚೆಟ್ಟಿಯಾರ್‌ರವರು ಸಮ್ಮೇಳನಕ್ಕೆ ಬರಲಾಗಲಿಲ್ಲ. ಮುಂಬಾಯಿನ ಕಾರ್ಮಿಕ ಮುಖಂಡರೂ, ಎ. ಐ. ಟಿ. ಯು ಸಿ. ಯ ಉಪಾಧ್ಯಕ್ಷರಲ್ಲೊಬ್ಬರೂ ಆದ ಕಾಂ॥ ಎಸ್. ಎಸ್. ಮಿರಾಜ್‌ಕಾರ್‌ರವರು ಅಧ್ಯಕ್ಷತೆ ವಹಿಸಿದ್ದರು.

ಪ್ರಧಾನ ಕಾರ್ಯದರ್ಶಿಯ ವರದಿ

ಸುಮಾರು 25 ಗಂಟೆಗಳ ಕಾಲ ಚರ್ಚಿತವಾದ ಪ್ರಧಾನ ಕಾರ್ಯದರ್ಶಿ ಎಸ್. ಎ. ಡಾಂಗೆಯವರ ವರದಿ ಸಮ್ಮೇಳನದ ಅತಿ ಮುಖ್ಯ ಅಂಶವಾಗಿತ್ತು. ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಅವಲೋಕಿಸುತ್ತಾ, ಸೋವಿಯತ್ ರಷ್ಯವು ಗಗನಕ್ಕೆ ಹಾರಿಸಿರುವ ಎರಡು ಸ್ಪೂಟ್ನಿಕ್‌ಗಳು ಮಾನವನ ವಿಚಾರಧಾರೆಯನ್ನು ರಾಜಕೀಯವನ್ನೂ, ಸಿದ್ಧಾಂತವನ್ನೂ ಮೂಲಭೂತವಾಗಿ ಬದಲಾಯಿಸಿವೆ ಎಂದರು. ಏಕೆಂದರೆ, ಒಂದೆಡೆ ಬಂಡವಾಳಶಾಹಿ ರಾಷ್ಟ್ರಗಳ ನಾಯಕ ಅಮೆರಿಕ ಅಣುವನ್ನು ಒಡೆದು ಅಣು ಬಾಂಬನ್ನು ತಯಾರಿಸಿ ನಾಗಸಾಕಿ ಜನತೆಯ ಮೇಲೆ ಉಪಯೋಗಿಸಿ ಲಕ್ಷಾಂತರ ಜನರನ್ನು ಕೊಂದಿದ್ದಾರೆ ಇನ್ನೊಂದೆಡೆ ಅದೇ ಅಣುವನ್ನು ಭೇದಿಸಿ ಸಮತಾವಾದ ರಾಷ್ಟ್ರಗಳ ನಾಯಕ ಸೋವಿಯತ್ ರಷ್ಯವು, ಆಕಾಶದಲ್ಲಿ ಉಪಗ್ರಹಗಳನ್ನು ಬಿಟ್ಟು ಗಗನವನ್ನೇ ಆವರಿಸಲು ಮುಂದೋಡಿ, ಜನತೆಯ ಮನಸ್ಸಿನಲ್ಲಿ ಹೆಚ್ಚಿನ ಸಂತೋಷವನ್ನುಂಟುಮಾಡಿದೆ. ಸಮತಾವಾದವು ವಿಜ್ಞಾನವನ್ನು ಶಾಂತಿಗಾಗಿ ಉಪಯೋಗಿಸುತ್ತಿದ್ದಾರೆ, ಬಂಡವಾಳವಾದವು ಯುದ್ಧಕ್ಕಾಗಿ ಉಪಯೋಗಿಸುತ್ತಿದೆ. ಸ್ಪೂಟ್ನಿಕ್ಕನ್ನು ತಯಾರು ಮಾಡಿದ ನಂತರ ಬಂಡವಾಳಶಾಹಿ ರಾಷ್ಟ್ರಗಳೂ, ಯುದ್ಧಕೋರರೂ ಹೆದರಿದ್ದಾರೆ. ಯುದ್ಧದ ಭೀತಿ ಹಿಂದೆ ಸರಿದಿದೆ. ಶಾಂತಿ ಶಕ್ತಿಗಳು ಬಲಗೊಂಡಿವೆ. ಈ ಒಂದೇ ವಿದ್ಯಮಾನವು, 82 ರಾಷ್ಟ್ರಗಳು ಒಂದಾಗಿ ಸಹಬಾಳ್ವೆಯ ನಿರ್ಣಯಕ್ಕೆ ಸಹಿ ಹಾಕುವಂತೆ ಮಾಡಿದೆ.

ಶಾಂತಿ ಶಕ್ತಿಗಳು ಬಲಗೊಂಡಿರುವಂತೆಯೇ ವಸಾಹತು ರಾಷ್ಟ್ರಗಳ, ಸ್ವಾತಂತ್ರ್ಯ ಹೋರಾಟಗಳೂ ಮುಂದುವರಿದು ವಿಜಯದ ಹೊಸ ಪೀಳಿಗೆಯನ್ನೇ ಉಂಟುಮಾಡುತ್ತಿದೆ. ವಸಾಹತುಶಾಹಿಗಳ ಕಾರ್ಮಿಕ ವರ್ಗವು, ಬಂಡವಾಳಗಾರರ ಸಾಮ್ರಾಜ್ಯಶಾಹಿಗಳ ಶೋಷಣೆಯ ಅರ್ಥವನ್ನು ತಿಳಿದು, ತನ್ನ ದುಡಿಮೆಯ ಶಕ್ತಿಯನ್ನು ಶೋಷಣೆಗಾಗಿ ಉಪಯೋಗಿಸಲು ನಿರಾಕರಿಸುತ್ತಿದ್ದಾರೆ. ಬಂಡವಾಳಶಾಹಿ ಪದ್ಧತಿಯಲ್ಲಿ ಆಗಿಂದಾಗ್ಗೆ ತಲೆದೋರುತ್ತಿರುವ ಅಧಿಕ ಉತ್ಪಾದನೆಯ ಆರ್ಥಿಕ ಮುಗ್ಗಟ್ಟನ್ನು ನಿರ್ಮೂಲಗೊಳಿಸಬೇಕಾದಲ್ಲಿ, ಉತ್ಪತ್ತಿ ಸಾಧನಗಳು ದುಡಿಯುವವರ ಕೈಯಲ್ಲಿದ್ದರೆ ಮಾತ್ರ ಸಾಧ್ಯ ಎಂಬುದನ್ನರಿತು ವಿಶ್ವದ ಕಾರ್ಮಿಕವರ್ಗ ಸಮತಾವಾದದೆಡೆಗೆ ಮುಂದುವರಿಯುತ್ತಿದೆ. ಪರಿಸ್ಥಿತಿ ಪ್ರಜಾಪ್ರಭುತ್ವ ಶಕ್ತಿಗಳಿಗೆ ಒಳ್ಳೆಯದಾಗಿದ್ದರೂ ಸಹ, ಸಾಮ್ರಾಜ್ಯಶಾಹಿಗಳೂ, ಯುದ್ಧಕೋರರೂ ಪಿತೂರಿ ನಡೆಸುತ್ತಲೇ ಇದ್ದಾರೆ. ಆಲ್ಜೀರಿಯ ಗೋವಾ, ಕಾಶ್ಮೀರ, ಸಿರಿಯ ಮತ್ತಿತರ ಕಡೆಗಳಲ್ಲಿ ಯುದ್ಧದ ಕಾರ್ಮೋಡಗಳೂ, ಪಿತೂರಿಗಳೂ, ನಡೆಯುತ್ತಿವೆ. ಇದನ್ನರಿತು ಭಾರತದ ಕಾರ್ಮಿಕ ವರ್ಗ, ಶಾಂತಿಗಾಗಿಯೂ, ಆಲ್ಜೀರಿಯ ಮತ್ತಿತರ ವಸಾಹತು ಜನತೆಯ ಸ್ವಾತಂತ್ರ್ಯಕ್ಕಾಗಿಯೂ, ಆಫ್ರಿಕ—ಏಷ್ಯಾ ಜನತೆಯ ಸೌಹಾರ್ದವನ್ನು ಬಲಪಡಿಸುವುದಕ್ಕಾಗಿಯೂ ನಿರಂತರವಾಗಿ ದುಡಿಯಬೇಕಾದುದು ಮೊದಲ ಕರ್ತವ್ಯವಾಗಿದೆ.

ದೇಶದ ಪರಿಸ್ಥಿತಿಯನ್ನುನಾಡಿನ ಕಾರ್ಮಿಕ ವರ್ಗ ಕೂಲಂಕಷವಾಗಿ ಹಾಗೂ ಗಂಭೀರವಾಗಿ ಚರ್ಚಿಸಬೇಕಾಗಿದೆ. ಭಾರತ ಸ್ವಾತಂತ್ರ್ಯವನ್ನೇನೋ ಪಡೆದಿದೆ. ಆದರೆ ಆರ್ಥಿಕ ತಳಹದಿಯು ಭದ್ರವಾಗಿಲ್ಲದಿದ್ದಲ್ಲಿ, ಆರ್ಥಿಕ ಸ್ವಾತಂತ್ರ್ಯವು ಇನ್ನೂ ಕನಸಾಗೆಉಳಿದಲ್ಲಿ, ರಾಜಕೀಯ ಸ್ವಾತಂತ್ರ್ಯಕ್ಕೂ ಧಕ್ಕೆ ಬರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಆದ್ದರಿಂದಲೇ ದೇಶದ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿ ಮುಂದೆ ಹೋಗಲು ಯತ್ನಗಳನ್ನು ನಡೆಸಬೇಕಾಗಿದೆ. ಈಗಾಗಲೇ ಸರ್ಕಾರವು ಇದನ್ನು ಮನಗಂಡು ಯೋಜನೆಗಳನ್ನು ತಯಾರಿಸಿ ಕಾರ್ಯಗತ ಮಾಡ ಹೊರಟಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯು ದೇಶದ ಆರ್ಥಿಕ ಪರಿಸ್ಥಿತಿಯನ್ನು ಮೂಲಭೂತವಾಗಿ ಬದಲಾಯಿಸಲು ತಯಾರಾದ್ದಲ್ಲವೆಂಬುದು ಯೋಜನೆಯ ಅಂಶಗಳಿಂದಲೇ ತಿಳಿಯುತ್ತದೆ. ನೀರಾವರಿ ಯೋಜನೆಗೂ, ವ್ಯವಸಾಯ ಅಭಿವೃದ್ಧಿಗೂ ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚು ಪ್ರಾಮುಖ್ಯತೆ ಕೊಡಲಾಗಿದೆ. ಕೊರಿಯಾ ಯುದ್ಧದಿಂದ, ಪಡೆದ ಲಾಭದಿಂದಾಗಿ, ಮತ್ತು ಹಿತಕರ ಹವಾಗುಣಗಳಿಂದ ಪಡೆದ ಅಧಿಕ ಆಹಾರ ಉತ್ಪತ್ತಿಯಿಂದಾಗಿ ಮೊದಲನೆಯ ಯೋಜನೆ ಕಾರ್ಯಗತವಾಗಲು ಸಾಧ್ಯವಾದರೂ ನಮ್ಮದೇಶದ ಆರ್ಥಿಕ ಹಿಂದುಳಿವಿಕೆಯನ್ನು ಮಾರ್ಪಾಡು ಮಾಡಲಾಗಲಿಲ್ಲ. ಆದ್ದರಿಂದಲೇ ಎರಡನೆಯ ಪಂಚವಾರ್ಷಿಕ ಯೋಜನೆಯನ್ನು ಸರ್ಕಾರ ದೇಶದ ಮುಂದಿಟ್ಟಿದೆ. ಕಾರ್ಮಿಕವರ್ಗ ಇದಕ್ಕೆ ಬೆಂಬಲ ನೀಡಬೇಕೆ? ಬೇಡವೆ? ಬೆಂಬಲ ನೀಡುವುದಾದರೆ ಹೇಗೆ ಎಂಬ ಪ್ರಶ್ನೆ ಎಲ್ಲರನ್ನು ಬಾಧಿಸುತ್ತಿದೆ.

ಎರಡನೆಯ ಯೋಜನೆಗೂ ಮೊದಲನೆಯ ಯೋಜನೆಗೂ ಅನೇಕ ಮೂಲಭೂತ ವ್ಯತ್ಯಾಸಗಳಿವೆ.

ಮೊದಲನೆಯದಾಗಿ, ಯೋಜನೆಯ ಬಹು ಭಾಗ ಹಣ ಸರ್ಕಾರವೇ ನಡೆಸುವ ಕೈಗಾರಿಕೆಗಳಿಗೆ ಉಪಯೋಗಿಸಲಾಗುತ್ತದೆ. ಹೆಚ್ಚಿನ ಬಂಡವಾಳ ಸರ್ಕಾರದ ಹತೋಟಿಯಲ್ಲಿರುತ್ತದೆ.

ಎರಡನೆಯದಾಗಿ, ದೇಶದ ಕೈಗಾರಿಕಾ ಆರ್ಥಿಕ ಬೆಳವಣಿಗೆಗೆ ಅನುಕೂಲವಾಗುವಂತ ಘನ ಇಂಜಿನಿಯರಿಂಗ್, ಉಕ್ಕು ಮತ್ತು ಕಬ್ಬಿಣ, ಕಲ್ಲಿದ್ದಲುಗಣಿ ಮತ್ತು ತೈಲ ಸಂಶೋಧನೆ, ಇವುಗಳ ಬೆಳವಣಿಗೆಗಾಗಿ ಸರ್ಕಾರದ ಕ್ಷೇತ್ರದಲ್ಲಿ ಪ್ರಮುಖ ಸ್ಥಾನ ಕೊಡಲಾಗಿದೆ. ಇದರಿಂದಾಗಿ, ಇದುವರೆವಿಗೂ ಇದ್ದ ಖಾಸಗೀ ಬಂಡವಾಳದ ಮತ್ತು ವಿದೇಶೀ ಬಂಡವಾಳದ ಶಕ್ತಿಯು ಕುಗ್ಗುತ್ತದೆ.

ಮೂರನೆಯದಾಗಿ, ಬಂಡವಾಳಶಾಹಿ ರಾಷ್ಟ್ರಗಳ ನೆರವಿನಿಂದಲೇ ಮೇಲಿನ ಕೈಗಾರಿಕಾ ಬೆಳವಣಿಗೆ ಆದೀತು ಎಂಬುದನ್ನು ಬಿಟ್ಟು, ಸಮತಾವಾದಿ ರಾಷ್ಟ್ರಗಳಿಂದಲೂ ಸಹ, ಹಾಗೂ ಸೋವಿಯತ್ ಯೂನಿಯನ್ನಿನಿಂದ ಆರ್ಥಿಕ ಸಹಾಯವನ್ನು ಪಡೆಯಲು ಸರ್ಕಾರವು ಮುಂಬಂದಿದೆ. ಇದರಿಂದಾಗಿ, ಬಂಡವಾಳಶಾಹಿ ಸಾಮ್ರಾಜ್ಯಶಾಹಿ ರಾಷ್ಟ್ರಗಳ ರಾಜಕೀಯ ಕೊಂಡಿಗಲು ಸಡಿಲವಾಗಲು ಸಹಾಯಕವಾಗುತ್ತದೆ.

ನಾಲ್ಕನೆಯದಾಗಿ, ರೈತನ ಪರಿಸ್ಥಿತಿ ಸುಧಾರಿಸಿದರೆ ಮಾತ್ರ ಆರ್ಥಿಕ ತಳಹದಿ ಭದ್ರವಾಗಿರುವುದೆಂದರಿತು, ಮೂಲಭೂತ ಭೂಸುಧಾರಣೆಗಳ ಕಡೆ ಗಮನ ಕೊಡಬೇಕೆಂದು ಯೋಜನೆಯಲ್ಲಿ ಒತ್ತಿ ಹೇಳಲಾಗಿದೆ.

ಐದನೆಯದಾಗಿ, ಇವೆಲ್ಲಕ್ಕೂ ತಳಹದಿಯೋಪಾದಿಯಲ್ಲಿ, ದೇಶದ ಲೋಕ ಸಭೆಯೂ, ಸರ್ಕಾರವೂ, ಸಮತಾವಾದದ ಗುರಿಯನ್ನು ಒಪ್ಪಿಕೊಂಡಿವೆ. ಒಪ್ಪಿಗೆಯು ತಂತ್ರವೆಂದು ಕೆಲವರು ಪರಿಗಣಿಸಿದರೂ ಸಹ, ಇದು ಎಲ್ಲರಿಗೂ ಅನುಕೂಲವಾಗುವಂಥದ್ದು. ಕಾರ್ಮಿಕ ವರ್ಗ ಇದನ್ನು ಒಪ್ಪಿ, ನಿಜವಾದ ಸಮತಾವಾದ ಸ್ಥಾಪಿಸಲು ಮುಂದೆ ಹೋಗಬೇಕಾಗಿದೆ.

ಎರಡನೆಯ ಪಂಚವಾರ್ಷಿಕ ಯೋಜನೆಯ ತಿರುಳಿನ ರೂಪರೇಷೆಗಳು ಮೇಲಿನಂತಿವೆ. ಈ ಐದು ಅಂಶಗಳನ್ನು, ಯಾವ ದೇಶಪ್ರೇಮಿ ಒಪ್ಪುವುದಿಲ್ಲ! ಎಲ್ಲಾ ದೇಶ ಪ್ರೇಮಿಗಳೂ, ದೇಶದ ಸ್ವಾತಂತ್ರ್ಯದ ಆರ್ಥಿಕ ಬೆಳವಣಿಗೆಯ ದೃಷ್ಟಿಯಿಂದ ಮೇಲಿನ ಅಂಶಗಳನ್ನು ಒಪ್ಪುವರೆಂದು ಶ್ರೀ ಡಾಂಗೆ ನುಡಿದರು. ಹಾಗೂ ಕಾರ್ಮಿಕ ವರ್ಗಕ್ಕೆ ದೇಶದ ಹಿತದೃಷ್ಟಿ ಇರುವುದರಿಂದ ಯೋಜನೆಯ ತಿರುಳನ್ನು ಒಪ್ಪಿ ಕಾರ್ಯಗತ ಮಾಡಲು ಮುಂಬರಬೇಕೆಂದರು.

ಯೋಜನೆಯು ಕೆಲವು ಒಳ್ಳೆಯ ಅಂಶಗಳನ್ನು ಹೊಂದಿರುವುದರಿಂದ ಕಾರ್ಮಿಕ ವರ್ಗ ಅದನ್ನು ಸ್ವಾಗತಿಸುತ್ತದೆ. ಅದೇ ಸಮಯಕ್ಕೆ

- ವಿದೇಶೀ ಮತ್ತು ದೇಶೀ ಹಿರಿಯ ಬಂಡವ… ಪಿತೂರಿಯನ್ನು ವಿಫಲಗೊಳಿಸಲು -
- ದೇಶದ ಸ್ವಾತಂತ್ರ್ಯ ಮತ್ತು ಪ್ರಜಾಪ್ರ… ರಕ್ಷಿಸಲು-

ಪಂಚವಾರ್ಷಿಕ ಯೋಜನೆಯ ತಿರ… ಕಾರ್ಯಗತಗೊಳಿಸಿರಿ !

ಕಾರ್ಮಿಕರ ಅತ್ಯಾವಶ್ಯಕ ಕೇಳಿಕೆ… ಪಡೆಯಲು ಹೋರಾಡಿರಿ !

ಆ ಅಂಶಗಳನ್ನು ಕೈಬಿಡಬೇಕೆಂಬ ಅಭಿಪ್ರಾಯದಿಂದಲೇ, ದೇಶದ ಹಿರಿ ಬಂಡವಾಳಗಾರರೂ ವಿದೇಶೀ ಬಂಡವಾಳಗಾರರೂ ಯೋಜನೆಯನ್ನು ತೀವ್ರವಾಗಿ ಟೀಕಿಸುತ್ತಿದ್ದಾರೆ. ಯೋಜನೆಯು ಬಂಡವಾಳಶಾಹಿಗಳ ಹತೋಟಿಯಲ್ಲಿರುವುದರಿಂದ, ಅದನ್ನು ಕಾರ್ಯಗತ ಮಾಡಲು ಜನತೆಯ ಸಹಕಾರ ತೆಗೆದುಕೊಳ್ಳದಿರುವುದು ತಪ್ಪೆಂದು ಕಾರ್ಮಿಕ ವರ್ಗದ ಟೀಕೆ ಇದ್ದರೆ, ಯೋಜನೆಯನ್ನು ಮತ್ತಷ್ಟು ಪ್ರತಿಗಾಮಿಗಳೆಡೆಗೆ ಒಯ್ಯಲು ಅದನ್ನು ಮುರಿಯಲು ಬಂಡವಾಳಶಾಹಿಗಳು ಟೀಕಿಸುತ್ತಿದ್ದಾರೆ.

ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ ಹೆಚ್ಚಿನ ಭಾಗ ಬಂಡವಾಳವನ್ನು ರಾಜ್ಯದ ಕ್ಷೇತ್ರಕ್ಕೆ (ಸರ್ಕಾರವೇ ನಡೆಸುವ ಕೈಗಾರಿಕೆಗಳು) ಉಪಯೋಗಿಸಬೇಕೆಂಬುದನ್ನು ದೇಶದ ಖಾಸಗೀ ಬಂಡವಾಳಗಾರರೂ, ವಿದೇಶೀ ಬಂಡವಾಳಗಾರರೂ ತೀವ್ರವಾಗಿ ಎದುರಿಸುತ್ತಿದ್ದಾರೆ. ವಿದೇಶೀ ಬಂಡವಾಳಗಾರರಿಗೆ, ನಮ್ಮ ದೇಶ ಕೈಗಾರಿಕಾ ದೇಶವಾಗಿ ಮುಂದುವರಿದು, ಆರ್ಥಿಕ ಸ್ವಾತಂತ್ರ್ಯ ಪಡೆಯಬೇಕೆಂಬ ಇಚ್ಛೆಯಿಲ್ಲ. ಹಿಂದುಳಿದ ರಾಷ್ಟ್ರವಾಗಿಯೇ ಉಳಿದು, ನಮ್ಮ ದೇಶದಿಂದ ಕಚ್ಚಾ ಮಾಲುಗಳನ್ನು ಒಯ್ದು, ಪರದೇಶದಲ್ಲಿ ತಯಾರು ಮಾಡಿದ ವಸ್ತುಗಳನ್ನು ನಮ್ಮ ಮೇಲೆ ಹೊರಿಸಿ ತಮ್ಮ ರಾಜಕೀಯ ಆರ್ಥಿಕ ಹಿಡಿತವನ್ನು ಇನ್ನೂ ಹಾಗೆಯೇ ಇರಿಸಿಕೊಳ್ಳಲು ವಿದೇಶೀ ಬಂಡವಾಳಗಾರರು ಪಿತೂರಿ ನಡೆಸುತ್ತಿದ್ದಾರೆ. ಆದ್ದರಿಂದಲೇ ಅಮೆರಿಕ ಮತ್ತು ಬ್ರಿಟಿಷ್ ಬಂಡವಾಳಗಾರರು ಘನ ಕೈಗಾರಿಕಾ ಯಂತ್ರಗಳನ್ನು ನೀಡಲು ತಯಾರಾಗಿಲ್ಲ. ಸಮತಾವಾದಿ ರಾಷ್ಟ್ರ ಶೋಷಣೆಯ ಅಭಿಪ್ರಾಯವಿಲ್ಲದೆ, ದೇಶ ಮುಂದುವರಿಯಬೇಕೆಂಬ ಇಚ್ಛೆಯಿಂದ ಘನ ಕೈಗಾರಿಕಾ ಯಂತ್ರಗಳನ್ನು ಅತಿ ಸುಲಭ ಶರತ್ತುಗಳ ಮೇಲೆ ಕೊಡಲು ತಯಾರಿದೆ.

ವಿದೇಶೀ ಬಂಡವಾಳಗಾರರು ಒಂದೆಡೆ ಅಡ್ಡಿಗಳನ್ನು ತಂದೊಡ್ಡುತ್ತಿರುವಂತೆಯೇ ದೇಶದ ಹಿರಿಯ ಬಂಡವಾಳಗಾರರೂ ವರ್ತಿಸುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳಷ್ಟು ತೆರಿಗೆಗಳನ್ನು ಕೊಡದೆ ಜನತೆಯ ಮೇಲೆ ಹೆಚ್ಚು ತೆರಿಗೆ ಹೊರಿಸಲು ಯತ್ನಿಸುತ್ತಿದ್ದಾರೆ. ಜನತೆಯ ಹಣವನ್ನೂ ಸಹ ಸೂರೆಗೊಳ್ಳುತ್ತಿದ್ದಾರೆ. ಟಾಟಾರವರು ಎಂಜಿನ್ನುಗಳ ಬೆಲೆಯನ್ನು ಅಧಿಕವಾಗಿ ಹೆಚ್ಚಿಸಿರುವುದು, ಜೀವವಿಮಾ ಕಾರ್ಪೊರೇಷನ್ನಿನಿಂದ ಕೋಟ್ಯಾಧೀಶ್ವರ ಮುಂಧ್ರರವರು 1,56,00000ರೂ.ಗಳನ್ನು ಸಾಲ ಪಡೆದಿರುವುದು, ಸೋದೇಪುರ ಗ್ಲಾಸ್ ಫ್ಯಾಕ್ಟರಿ, ನೇಪಾ ಪೇಪರ್ ಮಿಲ್, ಭಾಕ್ರಾ-ನಂಗಲ್ ಯೋಜನೆ—ಇತ್ಯಾದಿಗಳ ದುರಂತ ಕಥೆಗಳು-ಇವುಗಳು ಖಾಸಗಿ ಬಂಡವಾಳಗಾರರು ಜನತೆಯ ಹಣವನ್ನು ಲೂಟಿ ಹೊಡೆಯುತ್ತಿರುವುದನ್ನು ಎತ್ತಿ ತೋರಿಸುತ್ತವೆ

ಯೋಜನೆಗೆ ಅಡ್ಡಿ ಬರುವ ಮೂರನೆಯ ಅಂಶವೆಂದರೆ, ಆಹಾರ ಧಾನ್ಯಗಳ ಕೊರತೆ.

ದಾಸ್ತಾನುಗಾರರು ಧ…
ಬೆಲೆಗಳು ಗಗನಕ್ಕೇರ…
ಸಹ, ಸರ್ಕಾರವು ಪರಿ…
ಕ್ರಮಗಳನ್ನು ತೆಗೆದುಕೊ…
ಭೂತ ಭೂಸುಧಾರಣೆಗ…
ಯುತ್ತಿದ್ದಾರೆ. ಆಹಾರ…
ಬಗೆಹರಿಸುವುದರಲ್ಲಿ …
ತೀವ್ರಾಸಕ್ತಿಯಿದೆ.

ಯೋಜನೆಗೆ ಆತಂಕ…
ನೆಯ ಅಂಶವೆಂದರೆ, …
ಯೋಜನೆಯನ್ನು …
ಜವಾಬ್ದಾರಿ ಕೆಲವು …
ಆಡಳಿತ ಯಂತ್ರದಲ್ಲಿ…
ಗೂ ಬಿಟ್ಟಿರುವುದರಿಂ…
ಸಂಪರ್ಕವೇ ಇಲ್ಲದಂ…
ಲಂಚ-ಖುಷುವತ್ತು, …
ಕಾರಶಾಹಿ ವರ್ತನೆಗ…
ಗೆ ಧಕ್ಕೆ ಬರುತ್ತಿದೆ.

ಈ ರೀತಿ ಯೋಜನ…
ಕಡೆಗೆ ಮಾರ್ಪಡಿಸಲು…
ಬದಲಾಯಿಸಲು, ಹಿ…
ಗಾರರೂ, ವಿದೇಶೀ …
ಯತ್ನಿಸುತ್ತಿರುವುದರಿಂ…
ವರ್ಗ ಸುಮ್ಮನೆ ಕೂ…
ರಾಧವಾದೀತು. ವಿದೇ…
ಬಂಡವಾಳಗಾರರ …
ಯಲು, ಕಾರ್ಮಿಕ …
ವಾರ್ಷಿಕ ಯೋಜನೆಗ…
ಗತಗೊಳಿಸಲು ಶಕ್ತಿ …
ಶ್ರೀ ಡಾಂಗೆ ಒತ್ತಿ ಹೇ…
ದಲ್ಲಿ, ಜನತೆಯ ಹಣ…
ದನ್ನೂ ದುರ್ವ್ಯಯ …
ಗಟ್ಟಲು, ರಾಜ್ಯದ ಕ್ಷೇ…
ಗಳಲ್ಲಿ ಹೆಚ್ಚು ದಕ್ಷತೆ…
ಕೈಗಾರಿಕೆಗಳ ಪರಿಸ್ಥಿ…
ಲು ದೇಶದ ಕಾರ್ಮಿ…
ಬೇಕು ಎಂದರು.

ಕೂಲಿ, ಬೋನಸ್…
ಬಗ್ಗೆ ವರದಿ ಮಾಡ…
ಒಂದೆಡೆ ಯೋಜನೆಯ…
ಡಲು ದುಡಿಯುವಂತೆ…
ಳಕ್ಕಾಗಿ, ಕಾರ್ಮಿಕ …
ಹೋರಾಡಬೇಕು" ಎ…
ಟ್ರೇಡ್ ಯೂನಿಯನ…
ಧೋರಣೆಯು ನಾಣ್ಯ…
ರುವಂತೆ ಎಂದು ವಿವ…
ಪಂಚವಾರ್ಷಿಕ ಯೋ…
ಯೋಜನೆಯು ತಯ…
ಗಾರರೂ ಕೂಲಿಯ…
ಹೆಚ್ಚಾಗದಂತೆ ನ…
ಆದರೆ ಕಾರ್ಮಿಕ ವ…
ಟಗಳಿಂದಾಗಿ ಕೂಲಿ…
ವಾಳಗಾರರ ಪಿತೂರಿ…
ಹೆಮ್ಮೆಯ ವಿಷಯ…

...ನ್ ಕಾಂಗ್ರೆಸ್ಸಿನ ರಜತ ಅಧಿವೇಶನದ ಕರೆ

ಅಂಶಗಳನ್ನು ಪರಿಶೀಲಿಸಿದಲ್ಲಿ, 1950 ರಿಂದ 1954ರವರೆವಿಗೆ ಉತ್ಪಾದನೆಯು ಶೇ॥ 43 ರಷ್ಟು ಹೆಚ್ಚಾಗಿದ್ದಲ್ಲಿ (ವರ್ಷಕ್ಕೆ ಸರಾಸರಿ 8·6ರಷ್ಟು ಹೆಚ್ಚಾಗಿದೆ) ನಿಜವಾದ ಕೂಲಿಯು ಹೆಚ್ಚಳವು ಶೇ॥ 14ರಷ್ಟು (ವರ್ಷಕ್ಕೆ ಸರಾಸರಿ ಶೇ॥ 2·8ರಷ್ಟು) ಮಾತ್ರ ಹೆಚ್ಚಾಗಿದೆ. ಬಂಡವಾಳಗಾರರ ಲಾಭವು ಅಧಿಕವಾಗಿದೆ. ಕೂಲಿ ಅದಕ್ಕನುಗುಣವಾಗಿ ಹೆಚ್ಚಾಗಿಲ್ಲ. ಅಂತೆಯೇ ಬೆಲೆಗಳು ದಿನೇ ದಿನೇ ಅಧಿಕವಾಗುತ್ತಿವೆ. ತುಟ್ಟಿ ಭತ್ಯ ಮಾತ್ರ ಅದಕ್ಕನುಗುಣವಾಗಿ ಹೆಚ್ಚಿಲ್ಲ. ಬೋನಸ್ಸಿನ ವಿಷಯದಲ್ಲೂ ಸಹ ಬಂಡವಾಳಗಾರರಿಗೆ ಅನುಕೂಲವಾಗುವಂಥ ತೀರ್ಪುಗಳನ್ನೇ ಲೇಬರ್ ಅಪೆಲೇಟ್ ಟ್ರಿಬ್ಯೂನಲ್ ಇತ್ತಿದೆ. ಸರ್ಕಾರವು ನಿಗದಿ ಮಾಡಿದ ಬೆಲೆಗಳಿಗೆ ಅತ್ಯಾವಶ್ಯಕ ವಸ್ತುಗಳನ್ನು ಒದಗಿಸದಿದ್ದಲ್ಲಿ, ಕಾರ್ಮಿಕರ ದುಡಿತದಿಂದ ಗಳಿಸಿರುವ ಅತ್ಯಧಿಕ ಲಾಭಗಳನ್ನು ಈ ಬಂಡವಾಳಗಾರರಿಂದ ಪಡೆದು, ಯೋಜನೆಗಾಗಿ, ಜನತೆಯ ಕಲ್ಯಾಣಕ್ಕಾಗಿ ಉಪಯೋಗಿಸದಿದ್ದಲ್ಲಿ, ಕಾರ್ಮಿಕ ಸಂಘಗಳು ಕೂಲಿಯ, ತುಟ್ಟಿ ಭತ್ಯದ ಹೆಚ್ಚಳಕ್ಕಾಗಿ ನಿರಂತರವಾಗಿ ಹೋರಾಡಬೇಕೆಂದು ಶ್ರೀ ಡಾಂಗೆ ಕರೆಕೊಟ್ಟರು.

ಕೂಲಿಯ ಹೆಚ್ಚಳಕ್ಕಾಗಿ ನಡೆದ ಹೋರಾಟಕ್ಕೆ ಹೆದರಿ ದೇಶದ ಬಂಡವಾಳಗಾರರು, ರ್‍ಯಾಷನಲೈಸೇಷನ್, ರಿಟ್ರೆಂಚ್‌ಮೆಂಟ್ ಇತ್ಯಾದಿಗಳಿಗೆ ಯತ್ನಿಸುತ್ತಿದ್ದಾರೆ. 15ನೆಯ ಇಂಡಿಯನ್ ಲೇಬರ್ ಕಾನ್‌ಫರೆನ್ಸಿನಲ್ಲಿ ತೆಗೆದುಕೊಂಡ ತೀರ್ಮಾನಗಳು ಇದನ್ನೂ ಸಹ ತಡೆದಿದೆ. ಆದರೆ ಸರ್ಕಾರವೂ ಬಂಡವಾಳಗಾರರೂ ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಳ್ಳಲು ಇನ್ನೂ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದನ್ನು ಕಾರ್ಮಿಕ ವರ್ಗ ಮಣ್ಣುಗೂಡಿಸಲು ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿದೆ :

1. ಹೆಚ್ಚುತ್ತಿರುವ ಬೆಲೆಗಳಿಗನುಗುಣವಾಗಿ, ಜೀವನ ಮಟ್ಟವನ್ನು ಉತ್ತಮಪಡಿಸಿಕೊಳ್ಳಲು, ಕೂಲಿಯ ಮತ್ತು ತುಟ್ಟಿ ಭತ್ಯದ ಹೆಚ್ಚಳಕ್ಕಾಗಿ ಹೋರಾಡುವುದು. ತುಟ್ಟಿ ಭತ್ಯವನ್ನು ಕೂಲಿಯಲ್ಲೇ ಸೇರಿಸುವಂತಾಗುವುದು. ಬೋನಸ್ ತೀರ್ಪುಗಳನ್ನು ಮಾರ್ಪಾಡು ಮಾಡುವುದು.

2. ತ್ರಿಪಕ್ಷ ಸಮ್ಮೇಳನದಲ್ಲಿ ಒಪ್ಪಿರುವಂತೆ ರ್‍ಯಾಷನಲೈಸೇಷನ್ ಮತ್ತು ಉತ್ಪಾದನೆ ಯೋಜನೆಗಳನ್ನು ಕಾರ್ಯಗತಗೊಳಿಸುವ ಮೊದಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ನೆರವೇರಿಸುವಂತೆ ಒತ್ತಾಯಪಡಿಸುವುದು.

3. ಬೆಲೆಗಳನ್ನು ಕಡಿಮೆ ಮಾಡುವುದು ಅಥವಾ ಅಲ್ಲಿಯೇ ಇರಿಸುವುದು.

4. ತುಟ್ಟಿ ಭತ್ಯ ಮತ್ತು ಬೋನಸ್ಸುಗಳನ್ನು ರಾಷ್ಟ್ರೀಯ ಸಾಲ ಅಥವಾ ಸೇವಿಂಗ್ಸ್ ಸರ್ಟಿಫಿಕೇಟುಗಳಾಗಿ ತೆಗೆದುಕೊಳ್ಳಲು ಒತ್ತಾಯಪಡಿಸದಿರುವುದು. ಕಾರ್ಮಿಕರು ತಾವಾಗಿಯೇ ಒಪ್ಪಿದಲ್ಲಿ ಬೆಂಬಲ ನೀಡುವುದು.

5. ರಾಷ್ಟ್ರೀಯ ವೇತನ ಪದ್ಧತಿಯೊಂದನ್ನು ತಯಾರು ಮಾಡಿ ಜಾರಿಗೆ ತರುವುದು. ವೇತನ ಸಮಿತಿ ಮತ್ತು ಕೂಲಿ ನಿರ್ಣಯ ಬೋರ್ಡುಗಳು ಎಲ್ಲ ಕೈಗಾರಿಕೆಗಳಲ್ಲೂ ಸ್ಥಾಪಿತವಾಗಿ ಆದಷ್ಟು ಶೀಘ್ರವಾಗಿ ತೀರ್ಪು ಕೊಡುವಂತೆ ಮಾಡುವುದು.

ಕೂಲಿ ಹೆಚ್ಚಳಕ್ಕಾಗಿ ಹೋರಾಡುವಂತೆಯೆ ಸಾಮಾಜಿಕ ಭದ್ರತಾ ಯೋಜನೆಗಳನ್ನು ಜಾರಿಗೆ ತರಲೂ ಸಹ ದುಡಿಯಬೇಕೆಂದು ಪ್ರಧಾನ ಕಾರ್ಯದರ್ಶಿಯವರು ತಿಳಿಸಿದರು. ಹಾಗೂ, ನೌಕರರ ರಾಜ್ಯ ವಿಮಾ ಯೋಜನೆಯಲ್ಲೂ, ಪ್ರಾವಿಡೆಂಟ್ ಬೆನಿಫಿಟ್ ಶಾಸನದಲ್ಲೂ, ಇರುವ ಅನೇಕ ನ್ಯೂನತೆಗಳನ್ನು ನಿವಾರಿಸಿ ಅವುಗಳನ್ನು ಬದಲಾಯಿಸಲು ದುಡಿಯಬೇಕೆಂದರು.

ಏನೇ ಯೋಜನೆ ಇರಲಿ, ಎಂತಹ ಕಾರ್ಯಕ್ರಮವಿರಲಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕಾದಲ್ಲಿ, ಬಂಡವಾಳಗಾರರ ಪಿತೂರಿಯನ್ನು ಮುರಿಯಬೇಕಾದಲ್ಲಿ, ಸರ್ಕಾರವು ಕೇಳಿಕೆಗಳನ್ನು ಮಾನ್ಯ ಮಾಡಬೇಕಾದಲ್ಲಿ ಕಾರ್ಮಿಕರ ಐಕ್ಯತೆ ಇದ್ದರೆ ಮಾತ್ರ ಸಾಧ್ಯ.

ಲೇಖಕರು :

ಕರ್ನಾಟಕ ಪ್ರಾಂತ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಪ್ರತಿನಿಧಿಯಾಗಿ ಸಮ್ಮೇಳನದಲ್ಲಿ ಭಾಗವಹಿಸಿದ್ದ

ಕಾ॥ ಎಂ. ಎಸ್. ಕೃಷ್ಣನ್

ಎ. ಐ. ಟಿ. ಯು. ಸಿ., ಹೆಚ್. ಎಂ ಎಸ್., ಐ. ಎನ್. ಟಿ. ಯು. ಸಿ., ಮತ್ತು ಯು. ಟಿ. ಯು. ಸಿ. ಗಳ ಮಧ್ಯೆ ಕೆಳಗಿನಿಂದ ಐಕ್ಯತಾ ಚಳುವಳಿ ಬೆಳೆದು ಬರುತ್ತಿರುವುದನ್ನು ಮನಗಂಡು, ಕಾರ್ಮಿಕವರ್ಗ ಈ ಐಕ್ಯತೆಯನ್ನು ಇನ್ನೂ ದೃಢಪಡಿಸಲು ದುಡಿಯಬೇಕೆಂದು ಕೋರಿದರು. ಅ. ಭಾ. ಟ್ರೇ. ಯು. ಸಿ. ಈ ದಿನ ದೇಶದಲ್ಲೆಲ್ಲಾ ಅತಿ ದೊಡ್ಡ ಕಾರ್ಮಿಕರ ಕೇಂದ್ರ ಸಂಘಟನೆಯಾಗಿದೆ; ಅದು ಐಕ್ಯತಾ ಚಳುವಳಿಯನ್ನು ಹೊಸ ಘಟ್ಟಕ್ಕೆ ಕೊಂಡೊಯ್ಯಬೇಕು ಎಂದು ನುಡಿದು, 17 ಅಂಶಗಳನ್ನೊಳಗೊಂಡ ಕಾರ್ಯಕ್ರಮವನ್ನು ಮುಂದಿಟ್ಟು ತಮ್ಮ ವರದಿಯನ್ನು ಮುಕ್ತಾಯಗೊಳಿಸಿದರು.

ಪ್ರಧಾನ ಕಾರ್ಯದರ್ಶಿಯ ವರದಿಯ ಬಗ್ಗೆ ತೀವ್ರ ಚರ್ಚೆ ಜರುಗಿತು. ಕೆಲವು ಪ್ರತಿನಿಧಿಗಳು, ವರದಿಯ ಬಗ್ಗೆ ಮೂಲಭೂತ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿ ಅದನ್ನು ಒಪ್ಪಕೂಡದೆಂದು ಸೂಚಿಸಿದರು. ವರದಿಯು ಬಹುಮತದಿಂದ ಅಂಗೀಕರಿಸಲ್ಪಟ್ಟಿತು.

ಘಟನಾವಳಿಗೆ ತಿದ್ದುಪಡಿಗಳು

ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಘಟನಾವಳಿಗೆ ಕೆಲವು ತಿದ್ದುಪಡಿಗಳು ಅಂಗೀಕರಿಸಲ್ಪಟ್ಟವು. ಮುಖ್ಯವಾಗಿ ಅ. ಭಾ. ಟ್ರೇ. ಯು. ಸಿ. ಯ ಸೇರ್ಪಡೆ ಶುಲ್ಕವನ್ನು ಸ್ವಲ್ಪ ಕಡಿಮೆ ಮಾಡಲಾಯಿತು. ಅಂತೆಯೇ ಬೆಳೆಯುತ್ತಿರುವ ಸಂಘಟನೆಗನುಗುಣವಾಗಿ ಜನರಲ್ ಕೌನ್ಸಿಲ್ ಮತ್ತು ಕಾರ್ಯಕಾರಿ ಸಮಿತಿಯನ್ನು ಬದಲಾಯಿಸಲಾಯಿತು.

ನಿರ್ಣಯಗಳು

ಎರಡನೆಯ ಪಂಚವಾರ್ಷಿಕ ಯೋಜನೆಯ ಬಗ್ಗೆ, ಪ್ರಧಾನ ಕಾರ್ಯದರ್ಶಿಯವರ ವರದಿಯ ಆಧಾರದ ಮೇಲೆ ಮಾಡಿದ್ದ ನಿರ್ಣಯವು ಅಂಗೀಕಾರವಾಯಿತು.

ಫ್ರೆಂಚ್ ಸಾಮ್ರಾಜ್ಯಶಾಹಿಗಳು ಆಲ್ಜೀರಿಯಾ ಜನತೆಯ ಸ್ವಾತಂತ್ರ್ಯ ಹೋರಾಟವನ್ನು ಹತ್ತಿಕ್ಕಲು ಯತ್ನಿಸುತ್ತಿರುವುದನ್ನು ಸಮ್ಮೇಳನವು ತೀವ್ರವಾಗಿ ಖಂಡಿಸಿ, ಆಲ್ಜೀರಿಯಾ ಜನತೆಯ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಿತು.

ಶಾಂತಿಗಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡುವ, ಅಣು ಅಸ್ತ್ರಗಳ ನಿಷೇಧಕ್ಕಾಗಿ ಚಳುವಳಿ ನಡೆಸಬೇಕೆನ್ನುವ ನಿರ್ಣಯವನ್ನು ಸಮ್ಮೇಳನವು ಅಂಗೀಕರಿಸಿತು.

ಇಂಡೊನೇಷಿಯಾ ಜನತೆಯು ಡಚ್ ಸಾಮ್ರಾಜ್ಯಶಾಹಿಗಳ ವಿರೋಧವಾಗಿ ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ನೀಡಿ, ಜನವರಿ 18 ರಂದು "ಇಂಡೊನೇಷಿಯಾ ದಿನ"ವನ್ನಾಗಿ ಆ ದೇಶಾದ್ಯಂತ ಆಚರಿಸಬೇಕೆಂದು ನಿರ್ಣಯಿಸಲಾಯಿತು.

ಗೋವಾ ಜನತೆಯ ಹೋರಾಟಕ್ಕೆ ಬೆಂಬಲ ನೀಡುವ, ರಾಜಕೀಯ ಬಂಧಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕೆನ್ನುವ, ಬೋನಸ್ ಮತ್ತಿತರ ಪ್ರಶ್ನೆಗಳ ಬಗ್ಗೆ ಸುಪ್ರೀಂ ಕೋರ್ಟು ತಲೆಯಿಟ್ಟು ಕಾರ್ಮಿಕರಿಗೆ ವಿರೋಧವಾಗಿ ಕೊಡುತ್ತಿರುವ ತೀರ್ಮಾನಗಳನ್ನು ತಡೆಗಟ್ಟಬೇಕೆನ್ನುವ, ಪಾಂಡಿಚೆರಿ ಕಾರ್ಮಿಕರು ಅನುಭವಿಸುತ್ತಿದ್ದ ಸೌಲಭ್ಯಗಳನ್ನೂ ಹಕ್ಕುಗಳನ್ನೂ ಮೊಟಕು ಮಾಡಕೂಡದೆಂದು ಒತ್ತಾಯಪಡಿಸುವ, ನೌಕರರ ರಾಜ್ಯ ವಿಮಾ ಯೋಜನೆಗಳಲ್ಲಿರುವ ನ್ಯೂನತೆಗಳನ್ನು ಕೂಡಲೇ ತಿದ್ದುಪಡಿ ಮಾಡಬೇಕೆಂದು ಒತ್ತಾಯಪಡಿಸುವ ನಿರ್ಣಯಗಳು ಅಂಗೀಕೃತವಾದುವು.

ಕನಿಷ್ಟ ಮತ್ತು ಜೀವನ ವೇತನಗಳನ್ನು ನಿಷ್ಕರ್ಷಿಸಲು ವೇತನ ಸಮಿತಿಗಳನ್ನು ಕೈಗಾರಿಕೆಗಳಲ್ಲಿ ರಚಿಸಬೇಕೆಂದೂ, 15ನೇ ಇಂಡಿಯನ್ ಲೇಬರ್ ಸಮ್ಮೇಳನದ ತೀರ್ಮಾನದಂತೆ ಕನಿಷ್ಟ ಕೂಲಿ ನಿಗದಿ ಮಾಡಬೇಕೆಂದೂ, ತುಟ್ಟಿ ಭತ್ಯವನ್ನು ಕೂಲಿಯಲ್ಲಿ ಸೇರಿಸಬೇಕೆಂದೂ, ಸರಾಸರಿ ಶೇ॥ 25ರಷ್ಟು ಹೆಚ್ಚು ಕೂಲಿಯನ್ನು ಮಧ್ಯವರ್ತಿ ಪರಿಹಾರವಾಗಿ ಕೊಡಬೇಕೆಂದೂ, ವೇತನ ಮತ್ತು ಬೋನಸ್ ಬಗ್ಗೆ ನಿರ್ಣಯ ಮಾಡಲಾಯಿತು.

ಎ. ಐ. ಟಿ. ಯು. ಸಿ ಅಧಿಕಾರಿ ವರ್ಗದ ಚುನಾವಣೆ

ಮುಂದಿನ ಸಾಲಿಗೆ ಕೆಳಗಿನ ಅಧಿಕಾರಿ ವರ್ಗವನ್ನು 30 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು:

ಅಧ್ಯಕ್ಷರು: ಶ್ರೀ. ಎಸ್ ಎಸ್. ಮೀರಜ್‌ಕರ್.

ಉಪಾಧ್ಯಕ್ಷರು: ಹೇಮಂತ್ ಕುಮಾರ ಘೋಸ್, ರಾಣೆನ್ ಸೆನ್, ಪಿ. ರಾಮಮೂರ್ತಿ ಕೇದಾರ್‌ದಾಸ್, ಎಸ್ ಎಸ್. ಯೂಸುಫ್, ಬಾಲಚಂದ್ರ ಮೆನನ್ ಮತ್ತು ಶ್ರೀಮತಿ ಪಾರ್ವತಿ ಕೃಷ್ಣನ್.

ಪ್ರಧಾನ ಕಾರ್ಯದರ್ಶಿ: ಎಸ್. ಎ. ಡಾಂಗೆ

ಕಾರ್ಯದರ್ಶಿಗಳು: ಕೆ. ಟಿ. ಕೆ. ತಂಗಮಣಿ, ರಾಜ ಬಹದ್ದೂರ್ ಗೌಡ್, ಇಂದ್ರಜೀತ್ ಗುಪ್ತ, ಸತೀಶ್ ಲುಂಬ ಮತ್ತು ಕೆ. ಜಿ. ಶ್ರೀವಾತ್ಸವ.

ಖಜಾಂಚಿ: ಟಿ. ಬಿ. ವಿಠ್ಠಲರಾವ್,

ಇವರಲ್ಲದೆ 153 ಸದಸ್ಯರನ್ನೊಳಗೊಂಡ ಜನರಲ್ ಕೌನ್ಸಿಲ್ ಸಹ ಚುನಾಯಿಸಲ್ಪಟ್ಟಿತು.

ಕರ್ನಾಟಕ ಪ್ರಾಂತದಿಂದ ಎಂ. ಸಿ. ನರಸಿಂಹನ್ ಮತ್ತು ಶಾಂತಾರಾಂ ಪೈರವರು ಕಾರ್ಯಕಾರಿ ಸಮಿತಿಗೂ; ಎಂ. ಎಸ್. ಕೃಷ್ಣನ್ ವಿ. ಎಂ. ಗೋವಿಂದನ್, ಉಮಾನಾಥ ನಾಯಕ್, ಬಿ. ಎನ್. ಕುಟ್ಟಪ್ಪ ಮತ್ತು ಪಿ. ನಾರಾಯಣ್‌ರವರು ಜನರಲ್ ಕೌನ್ಸಿಲ್ಲಿಗೂ ಚುನಾಯಿತರಾದರು.

ಐದು ದಿನಗಳು ನಡೆದ ಸಮ್ಮೇಳನವು ಡಿಸೆಂಬರ್ 29ರಂದು ಬೃಹತ್ ಮೆರವಣಿಗೆ ಮತ್ತು ಸಭೆಗಳಲ್ಲಿ ಮುಕ್ತಾಯಗೊಂಡಿತು. ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಜನ ಈ ಸಭೆಯಲ್ಲಿ ಭಾಗವಹಿಸಿದರು.

ಅ. ಭಾ. ಟ. ಯು. ಸಿ. ಯ 25ನೇ ಸಮ್ಮೇಳನದ ವರದಿ, ಚರ್ಚೆ ಮತ್ತು ನಿರ್ಣಯಗಳಿಂದ ದೇಶದ ಸಂಘಟಿತ ಕಾರ್ಮಿಕ ವರ್ಗ ಇನ್ನೂ ಹೆಚ್ಚಿನ ಐಕ್ಯತೆ ಸಾಧಿಸಲು ಸಹಾಯಕವಾಗಿದೆ. ತನ್ನ ರಾಜಕೀಯ ಮತ್ತು ಸಂಘಟನಾ ಕರ್ತವ್ಯಗಳನ್ನು ನಿರ್ವಹಿಸಲು ಎಂದಿಗಿಂತ ಸಹಕಾರಿಯಾಗಿದೆ.

ಅಶೋಕ ಮೆಹ್ತಾರ ಶೋಕ

ಪಿ. ಎಸ್. ಪಿ ಯ ನಾಯಕ ಅಶೋಕ ಮೆಹ್ತಾರಿಗೆ ಕೇರಳದಲ್ಲಿ ಒಂಭತ್ತು ತಿಂಗಳ ಕಮ್ಯೂನಿಸ್ಟ ಆಳ್ವಿಕೆಯಲ್ಲಿ ವ್ಯಕ್ತವಾಗುವ ವಿಷಯವಿಷ್ಟು:

ಒಂದನೆಯದಾಗಿ ಪ್ರಜಾಸತ್ತಾತ್ಮಕವಾಗಿ ಹಾಗೂ ಪಾರ್ಲಿಮೆಂಟರಿ ಸರ್ಕಾರದಂತೆ ಕಮ್ಯೂನಿಸ್ಟರಿಗೆ ಕಾರ್ಯ ನಿರ್ವಹಿಸುವ ಒಂದಿಷ್ಟು ಅಭಿಲಾಷೆಯಿಲ್ಲ. ಎರಡನೆಯದಾಗಿ ಕೇರಳದಲ್ಲಿ ಸ್ವತಂತ್ರ ಸಂಸ್ಥೆ ಮತ್ತು ಅವುಗಳ ಚಟುವಟಿಕೆಯನ್ನು ಧೂಳಿಪಟ ಮಾಡುವುದೇ ಕಮ್ಯೂನಿಸ್ಟರ ಕಾರಸ್ಥಾನವೆಂದು ಮೆಹ್ತಾರು ಶೋಕಪೂರಿತವಾಗಿ ಆರೋಪಿಸಿದ್ದಾರೆ.

ಅಷ್ಟೇ ಅಲ್ಲ ಕೇರಳದ ಜನರು ಕಮ್ಯೂನಿಸ್ಟರನ್ನು ಆರಿಸಿ ಗುರುತರವಾದ ತಪ್ಪು ಮಾಡಿದ್ದಾರೆಂದು ಕೂಡಾ ಅಲ್ಲಿನ ಜನತೆಯನ್ನೇ ಅಶೋಕ್ ಮೆಹ್ತಾರು ಆರೋಪಿಸಿದ್ದಾರೆ. ಕಮ್ಯೂನಿಸ್ಟರದು ಸರ್ವಾಧಿಕಾರವೆಂದು ದೂರಿದ್ದಾರೆ. ಇವರನ್ನು ಉರುಳಿಸಬೇಕೆಂದು ಕರೆಯುತ್ತಿದೆ ಪಿ. ಎಸ್. ಪಿ. ನಾಯಕತ್ವ. ಕಮ್ಯೂನಿಸ್ಟರುರುಳಿದರೆ ಕೇರಳದಲ್ಲಿ ಮಂತ್ರಿ ಮಂಡಳ 8 ಜನರ ಪಿ. ಎಸ್. ಪಿ. ತಂಡಕ್ಕೆ ಸಿಗದು. ಹಾಗಾದರೆ ಕಾಂಗ್ರೆಸನ್ನು ಪಟ್ಟಕ್ಕೇರಿಸಲು ಪಿ. ಎಸ್. ಪಿ. ದುಡಿಯುತ್ತಿದೆ ಎಂದಾಯಿತು. ವಿಶ್ವದೆಲ್ಲೆಡೆಯಲ್ಲೂ ಈ ಪ್ರಜಾಸಮಾಜವಾದಿಗಳ ಚರಿತ್ರೆಯೇ ಇಂತಹದು. ಕಮ್ಯೂನಿಸ್ಟರ ವಿರೋಧದಲ್ಲಿ ಜನತೆಯನ್ನು ದೇಶವನ್ನು ಘಾಸಿಸಂಗೂ ಕೂಡಾ ಒಪ್ಪಿಸಲು ಇವರು ಹಿಂಜರಿಯಲಾರರು !

ಪ್ರಜಾಪ್ರಭುತ್ವದ ಹೆಸರಿನಲ್ಲಿ ಕಮ್ಯೂನಿಸ್ಟರನ್ನು ದೂರುವುದು ಪಿ. ಎಸ್. ಪಿ ಪ್ರಧಾನ ನೀತಿಯೆಂಬುದೇನೊ ನಿಜ. ಆದರೆ ಪ್ರಜಾಪ್ರಭುತ್ವ ನೀತಿಯ ಪ್ರಕಾರವೇ ಆರಿಸಿ ಬಂದ ಕಮ್ಯೂನಿಸ್ಟ ಸರಕಾರವನ್ನು ಆರಿಸಿರುವ ಮತದಾರರನ್ನು ಆಪಾದಿಸ ಹೊರಟ ಈ ಅಶೋಕ ಮೆಹ್ತಾರ ಪ್ರಜಾ ಸಮಾಜವಾದವೆಂತಹದೋ! ಕಮ್ಯೂನಿಸ್ಟರು ಇತರ ಪಕ್ಷಗಳ ಸರ್ವನಾಶಕ್ಕೆ ತೊಡಗಿದ್ದಾರೆ ಎಂದು ಅನ್ನುವ ಮೆಹ್ತಾರು ಅದೇ ಘಳಿಗೆಯಲ್ಲಿ ಪಿ. ಎಸ್. ಪಿ. ಎಂದೂ ಕಮ್ಯೂನಿಸ್ಟರೊಡನೆ ಸಹಬಾಳ್ವೆ ಮಾಡಲು ಒಪ್ಪದು ಎಂದಿದ್ದಾರೆ. ಇಲ್ಲಿ ಸರ್ವಾಧಿಕಾರ ಮನೋವೃತ್ತಿ ಯಾರದೆಂದು ಸ್ವಯಂವ್ಯಕ್ತ !

ಅಂತೂ ಅಂತರ್ರಾಷ್ಟ್ರೀಯ ರಂಗದಲ್ಲಿ ರಷ್ಯಾದೊಡನೆ ಸಹಬಾಳ್ವೆ ಮಾಡಲು ನಿರಾಕರಿಸುವ ಯುದ್ಧಕೋರ ಡಲ್ಲೆಸ್ ಹೇಳಿಕೆಗಳಿಗೂ, ನಮ್ಮ ಪಿ. ಎಸ್. ಪಿ ತಂಡದ ಉದ್ಗಾರಗಳಿಗೂ ಕಾಕತಾಳೀಯ ಹೋಲಿಕೆ ಕಾಣುತ್ತಿದೆ! ಹೇಗಿದ್ದರೂ ಪಿ ಎಸ್. ಪಿ. ಅಧ್ಯಕ್ಷ ಗಂಗಾಶರಣ ಸಿಂಹ ಮತ್ತು ಅಶೋಕ ಮೆಹ್ತಾರ ಈ ಆರ್ತನಾದವು ಕೇರಳಿಗರ ದೃಷ್ಟಿಯಲ್ಲಿ ಅರಣ್ಯ ರೋದನವಾಗಿ ಪರಿಣಮಿಸಿದರೂ, ಅಲ್ಲಿನ ಪ್ಲಾಂಟರುಗಳು ಮತ್ತು ಚರ್ಚ್ ಹಾಗೂ ಇತರ ಪಟ್ಟಭದ್ರಹಿತಗಳ ಕಣ್ಣಿಂದ ನೀರುಬರಿಸಬಹುದು.

ಮನೆ ಮುರಿದ ಮಗ

(ಸಾಮಾಜಿಕ ನಾಟಕ)

ಮೂಲ: ಶ್ರೀ ತೋಪಿಲ್ ಭಾಸಿ. ಅನುವಾದ: **ಪಂಡಿತ್.**

["ಮನೆ ಮುರಿದ ಮಗ" ಮಲೆಯಾಳಿ ನಾಟಕ "ಮುಡಿಯನಾಯ ಪುತ್ರನ್" ಎನ್ನುವುದರ ಭಾವಾನುವಾದ. ಇದರ ಲೇಖಕ ಶ್ರೀ ತೋಪಿಲ್ ಭಾಸಿ, ಎಂ.ಎಲ್.ಎ., ಇವರು ಮಲೆಯಾಳೀ ಭಾಷೆಯ ನಾಟಕ ರಂಗದಲ್ಲಿ ಪ್ರಖ್ಯಾತರಾಗಿದ್ದಾರೆ ಕೇರಳ ರಾಜ್ಯದಲ್ಲಷ್ಟೇ ಅಲ್ಲದೆ ಭಾರತದಲ್ಲೇ ನಾಟಕ ರಂಗದಲ್ಲಿ ಕೋಲಾಹಲವೆಬ್ಬಿಸಿದ "ನಿಂಙಳ್ ಎನ್ನೇ ಕಮ್ಯೂನಿಸ್ಟ್ ಆಕಿ" (ನೀವು ನನ್ನನ್ನು ಕಮ್ಯೂನಿಸ್ಟ್ ಮಾಡಿದಿರಿ) ನಾಟಕ ಕರ್ತರು ಇವರೇ ಆಗಿದ್ದಾರೆ. "ಮನೆ ಮುರಿದ ಮಗ" ಅವರ ಉತ್ತಮ ಸಾಮಾಜಿಕ ನಾಟಕಗಳಲ್ಲೊಂದಾಗಿದೆ. ಕಳೆದ ತಿಂಗಳ ಅಂತ್ಯದಲ್ಲಿ ದೆಹಲಿಯಲ್ಲಿ ನಡೆದ ಅಖಿಲ ಭಾರತ ಜನತಾ ರಂಗಭೂಮಿಯ ಎಂಟನೆಯ ಅಧಿವೇಶನದಲ್ಲಿ ಈ ನಾಟಕವು ಪ್ರದರ್ಶಿತವಾಗಿ ಎಲ್ಲರ ಮೆಚ್ಚಿಗೆಯನ್ನು ಪಡೆದಿದೆ.

ಕನ್ನಡ ಓದುಗರಿಗೆ, ನಾಟಕ ಪ್ರೇಮಿಗಳಿಗೆ ಈ ನಾಟಕದ ಭಾವಾನುವಾದವನ್ನು ನಮ್ಮ ಪತ್ರಿಕೆಯ ಸಂಚಿಕೆಯಲ್ಲಿ ಧಾರಾವಾಹಿಯಾಗಿ ಕೊಡಲು ತೀರ್ಮಾನಿಸಿದ್ದೇವೆ. ಅನುವಾದ ಮಾಡುವಾಗ ಸ್ಥಳ, ಸನ್ನಿವೇಶ ಹಾಗೂ ಪಾತ್ರಗಳ ಹೆಸರನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸರಿಹೊಂದುವಂತೆ ಅಳವಡಿಸಿಕೊಳ್ಳಲಾಗಿದೆ—**ಸಂ**].

ದೃಶ್ಯ ೧

(ಬೆಟ್ಟದ ತಪ್ಪಲಿನ ಕಾಲುದಾರಿ. ಸಂಜೆ ದಾಟಿ, ನಸುಗತ್ತಲೆ ತಲೆಯೆತ್ತಿದ ಹೊತ್ತು. ದೂರದಿಂದ ಗಂಜೀರದ ತಾಳದೊಡನೆ ಹಳ್ಳಿಗರ ಸಮೂಹ ಗಾನದ ಮೆಲುದನಿ ತೇಲಿ ಬರುತ್ತಿದೆ.

ದಾರಿಯ ಪಕ್ಕದಲ್ಲೊಂದು ಬಂಡೆಕಲ್ಲಿನ ಮೇಲೆ ಯಾರೋ ಒಬ್ಬ ಕುಳಿತಿರುವುದು ಮಸುಕಾಗಿ ಕಾಣುತ್ತಿದೆ. ಆತ ಬೀಡಿ ಸೇದುತ್ತಿದ್ದಾನೆ. ಅದರ ಬೆಂಕಿ ಮಿಣುಕುಹುಳದಂತೆ ಮಿನುಗುತ್ತಿದೆ.

ತೆಂಗಿನ ಗರಿಯ ಪಂಜು ಬೀಸುತ್ತ ಬೆಳಕು ಹರಿಸಿ, ಬೇಗ ಬೇಗನೆ ಹೆಜ್ಜೆ ಹಾಕುತ್ತ, ಯಾರೋ ಬರುವಂತಿದೆ. ಅವನ ಮುಖದ ಮೇಲೆ ಬೆಳಕು ಚೆಲ್ಲುತ್ತಿದೆ. ತಲೆಯೆತ್ತಿ ಬೆಳಕಿನತ್ತ ನೋಡುತ್ತಾನೆ.

ಪಂಜು ಬರುತ್ತಿದ್ದಂತೆ ಬೆಳಕು ಹೆಚ್ಚಾಗಿ ಕುಳಿತಿರುವ ವ್ಯಕ್ತಿ ರಾಜು ಎಂದು ಈಗ ಗುರುತು ಸಿಗುವುದು.

ರಾಜು — ಯಾರಿಗೂ ಹೆದರುವವನಲ್ಲ. ಯಾವುದಕ್ಕೂ ಹೇಸುವವನಲ್ಲ. ಲಂಗುಲಗಾಮಿಲ್ಲದೆ ಹಾರಾಡುವ ಪೋಲಿ. ತನಗೆ ನೋವಾಗುವುದರ ಪರಿವೆಯಿಲ್ಲ ಎಂದ ಮೇಲೆ ಬೇರೆಯವರಿಗೆ ನೋವಾಗುವುದರ ಗೊಡವೆಯಾದರೂ ಇರುವುದೆ? ಅದೊಂದೂ ಅವನಿಗಿಲ್ಲ. ಕಂಡವರೊಡನೆ ಜಗಳ ಕಾಯುವ ಸ್ವಭಾವ ಅವನದು. ಯಾಕೆ? ಯಾರೊಡನೆ? ಅದೊಂದೂ ಅವನಿಗೆ ತಿಳಿಯದು. ಜಗತ್ತನ್ನೇ ತುಚ್ಛೀಕರಿಸುವ ಭಾವನೆ ಅವನ ಉರಿಮುಖದಲ್ಲಿ ಒಡಮೂಡಿದೆ. ಮೈ-ಕೈ ಗಟ್ಟಿ-ಮುಟ್ಟಾಗಿಯೂ ಇದೆ. ಚೊಕ್ಕಟವಾಗಿ ಇದ್ದಿದ್ದರೆ ಚೆಲುವನಾಗಿ ತೋರುತ್ತಿದ್ದ ಎನ್ನಬಹುದು. ಅವನ ವಯಸ್ಸು ಸುಮಾರು ಮೂವತ್ತು ವರ್ಷ.

ರಾಜು ಕಿಲಾಡಿಯಂತೆ ಪಂಚೆ ಉಟ್ಟು, ತೋಳು ಇಲ್ಲದ 'ಬನೀನು' ತೊಟ್ಟು, ತಲೆಗೆ ಪೇಟದಂತೆ ಬಟ್ಟೆ ಸುತ್ತಿದ್ದಾನೆ.

ಪಂಜು ತೀರ ಹತ್ತಿರಕ್ಕೆ ಬಂತು. ರಾಜು ಬೀಡಿ ಆರಿಸಿ ಎಸೆದ.

ಪಂಜು ಬೀಸಿಕೊಂಡು, ಬೆಟ್ಟ ಇಳಿದು ಹಳ್ಳಿಯ ಕಡೆಗೆ ಹೋಗುತ್ತಿರುವಾಕೆ—ಹೊಲೆಯ ತನಿಯನ ಮಗಳು, ಬೊಳ್ಳಿ. ಅವಳು ಹದಿನಾರೋ ಹದಿನೆಂಟೋ ವರ್ಷದ ಯುವತಿ. ಎಣ್ಣೆ ಕಪ್ಪು ಬಣ್ಣ. ದುಂಡಗಿನ ಮುಖ. ದುಡಿಮೆಯ ವ್ಯಾಯಾಮದಿಂದ ಬಲಿತ ಮೈಗೆ ಜವ್ವನದ ಉಬ್ಬು ಗರಿಕಟ್ಟಿದೆ.

ಕೆಲಸಕ್ಕೆ ಹೋಗಿದ್ದವಳು ಹಿಂದಿರುಗುವಾಗ ಕತ್ತಲಾಗಿ ಬಿಟ್ಟಿದೆ. ಹೇಗಾದರೂ ಸುರಕ್ಷಿತವಾಗಿ ಮನೆ ಸೇರುವ ಆತುರದಿಂದ ಯಾವುದನ್ನೂ ಗಮನಿಸದೆ ವೇಗವಾಗಿ ಸಾಗುತ್ತಿದ್ದಾಳೆ.

ಬೊಳ್ಳಿ ಹತ್ತಿರ ಬಂದಾಗ ರಾಜು ಕೆಮ್ಮಿ ಸದ್ದು ಮಾಡಿದ. ಸದ್ದು ಕೇಳಿ ಬೊಳ್ಳಿ ಬೆಚ್ಚಿಬಿದ್ದಳು. "ಹಾಂ" ಎಂದು ಉದ್ಗರಿಸಿ ತಟಕ್ಕನೆ ನಿಂತಳು. ಪಂಜನ್ನು ಬೀಸಿ ಬೆಳಕು ಹರಿಸಿ, ಕುಳಿತಿದ್ದವನ ಕಡೆಗೊಮ್ಮೆ ನೋಡಿದಳು. ಅವನ ಗುರುತು ಹತ್ತಿದಾಗ ಭಯ ಮತ್ತಷ್ಟು ಹೆಚ್ಚಾಯಿತು. ರಾಜುವಿನಿಂದ ಆದಷ್ಟು ದೂರವಿರಲು ದಾರಿಯ ಪಕ್ಕಕ್ಕೆ ಸರಿದು, ಮುಂದಕ್ಕೆ ನಡೆಯತೊಡಗಿದಳು.

ಅವಳು ರಾಜು ಕುಳಿತಿದ್ದ ಬಂಡೆಯನ್ನು ದಾಟಿ ಒಂದೆರಡು ಹೆಜ್ಜೆ ಮುಂದಿಡುವುದರಲ್ಲಿ, ರಾಜು ಎದ್ದ.)

ರಾಜು: (ಸಾಧಾರಣ ಮಟ್ಟನಲ್ಲಿ) ಏಯ್, ಬೊಳ್ಳಿ! ಹೆದರ್ಕೋಬೇಡ! ನಾನೇನು ಹುಲಿಯೆ?

(ಬೊಳ್ಳಿ ಮತ್ತಷ್ಟು ದಿಗಿಲು ಬಿದ್ದಳು. ಕಾಲುಗಳು ನಡುಗಿ ಹೆಜ್ಜೆ ತಪ್ಪತೊಡಗಿತು. ಉಸಿರು ಕಟ್ಟಿದಂತಾಯಿತು. ಪ್ರಯಾಸದಿಂದ, ಹಿಂತಿರುಗಿ ನೋಡದೆಯೆ ಮುಂದು ಸರಿಯಲು ಯತ್ನಿಸುತ್ತಾಳೆ.)

ರಾಜು: (ಬೊಳ್ಳಿಯ ಹತ್ತಿರಕ್ಕೆ ಬಂದು) ಹೆದರ್ಕೋ ಬೇಡಾಂದ್ರೆ! ಒಂದಿಷ್ಟು ಬೆಂಕಿ ಕೊಡು ನೋಡಾನ! (ಕಿವಿಗೆ ಸಿಕ್ಕಿಸಿ ಇಟ್ಟಿದ್ದ ಬೀಡಿಯನ್ನು ತೆಗೆದು, ಎಡಗೈಯನ್ನು ಪಂಜಿನ ಕಡೆಗೆ ನೀಡುತ್ತಾನೆ.)

(ಬೊಳ್ಳಿ ಭಯದಿಂದ ಮುಂದೆ ಕಾಲಿಡಲಾರದೆ ನಿಂತು, ನಡುಗುವ ಕೈಯಿಂದ ಪಂಜನ್ನು ರಾಜುವಿನ ಕಡೆಗೆ ನೀಡುತ್ತಾಳೆ.)

ರಾಜು: ಏನು! ಗಂಡಸರನ್ನೇ ನೋಡಿಲ್ವೆನೀನು? (ಪಂಜನ್ನು ತೆಗೆದುಕೊಂಡು, ಬೀಸಿ ಚೆನ್ನಾಗಿ ಹೊತ್ತಿಸಿ ಅವಳ ಮುಖದ ಹತ್ತಿರ ಹಿಡಿದು ಒಂದು ನಿಮಿಷ ಅವಳನ್ನೇ ನೋಡುತ್ತಾನೆ. ತಟ್ಟನೆ ಪಂಜು ದೂರಕ್ಕೆ ಎಸೆದು ಅವಳ ಕೈ ಹಿಡಿದುಕೊಳ್ಳುತ್ತಾನೆ.)

(ರಾಜು ಬೊಳ್ಳಿಯನ್ನು ಎಡಗೈಯಿಂದ ತನ್ನ ಎದೆಗೆ ಅಪ್ಪಿಕೊಳ್ಳಲು ಪ್ರಯತ್ನಿಸುತ್ತಾನೆ. ಅವಳು ಪಕ್ಕನೆ ಬಗ್ಗಿ, ಅವನ ಬಲಗೈಯನ್ನು ಬಲವಾಗಿ ಕಚ್ಚುತ್ತಾಳೆ.)

ರಾಜು: ಹೇಂ! (ಅಕಸ್ಮಾತ್ತಾಗಿ ಕೈ ಕಡಿದುದರಿಂದ ಹಿಡಿತ ಸಡಿಲಾಗುತ್ತದೆ. ಬೊಳ್ಳಿ ತಪ್ಪಿಸಿಕೊಳ್ಳುತ್ತಾಳೆ. "ಪಿಸಾಸಿ" ಎಂದು ಒದರಿ, ಒಂದೇ ಉಸಿರಿಗೆ ಹಳ್ಳಿಯತ್ತ ಓಡುತ್ತಾಳೆ.

ರಾಜು ಒಂದು ನಿಮಿಷ ಅಲ್ಲೇ ತಡೆದು ನಿಲ್ಲುತ್ತಾನೆ. ಬಲಗೈ ಎತ್ತಿ, ಬೊಳ್ಳಿ ಕಡಿದ ಗಾಯವನ್ನು ನೋಡುತ್ತಾನೆ. ಅದರಿಂದ ನೆತ್ತರು ಸೋರುತ್ತಿದೆ. ಮುಷ್ಟಿ ಸಡಿಲಿಸುತ್ತಾನೆ. ಬೊಳ್ಳಿಯ ತುಂಡಾದ ಬಳೆಗಳ ಚೂರುಗಳು ಅದರೊಳಗಿವೆ. ಪಂಜು ದೂರದಲ್ಲಿ ಹೊಗೆಯಾಡುತ್ತಾ ಬಿದ್ದಿದೆ. ರಾಜು ಗಾಯವನ್ನೂ, ಬಳೆಯ ತುಂಡುಗಳನ್ನೂ, ಪಂಜನ್ನೂ, ಬೊಳ್ಳಿ ಓಡಿಹೋದ ದಿಕ್ಕನ್ನೂ ನೋಡುತ್ತಾನೆ. ಅವನ ಮುಖದಲ್ಲಿ ಮುಗುಳುನಗೆ ಮೂಡುತ್ತದೆ. ತಲೆಗೆ ಸುತ್ತಿದ್ದ ರುಮಾಲನ್ನು ತೆಗೆದು ಹರಿದು ಕೈಯ ಗಾಯಕ್ಕೆ ಕಟ್ಟುತ್ತಾನೆ. ಮತ್ತೆ, ಏನೂ ನಡೆದೇ ಇಲ್ಲವೇನೋ ಎಂಬಂತೆ, ನಿಧಾನವಾಗಿ ಬೊಳ್ಳಿ ಹೋದ ದಿಕ್ಕಿಗೆ ನಡೆಯುತ್ತಾನೆ.

ದೂರದಿಂದ ಹಾಡು ಹಿಂದಿನಂತೆಯೇ ಕೇಳಿ ಬರುತ್ತಿದೆ.)

— ತೆರೆ —

ದೃಶ್ಯ ೨

(ಹಳ್ಳಿಯ ಹೊಲೆಯರ ಕೇರಿ. ಚಿಕ್ಕ ಗುಡಿಸಲೊಂದರಮುಂಭಾಗದ ಅಂಗಳದಲ್ಲಿ ಎಂಟುಹತ್ತು ಕೃಷಿ ಕೂಲಿಗಾರರು ದೀಪದ ಸುತ್ತು ಕುಳಿತ್ತಿದ್ದಾರೆ. ಕೂಟದಲ್ಲಿ ಒಬ್ಬಿಬ್ಬರು ಮುದುಕರು, ನಾಲ್ಕೈದು ಮಂದಿ ಯುವಕರು, ಸಮೀಪದಲ್ಲೇ ಮೂರುನಾಲ್ಕು ಮಂದಿ ಹೆಂಗಸರು ಕುಳಿತಿದ್ದಾರೆ. ಒಬ್ಬಿಬ್ಬರ ಕೈಯಲ್ಲಿ ಮಕ್ಕಳೂ ಇದ್ದಾರೆ.

ಗುಡಿಸಲು ಹೊಲೆಯ ತನಿಯನದು. ಹಳ್ಳಿಯ ಬಡವರು, ಕೆಲಸವೆಲ್ಲ ಮುಗಿದ ನಂತರ ಅಲ್ಲಿ ಕಲೆತು ಹರಟುವುದು ಹಾಡುವುದು, ಕುಣಿಯುವುದು ವಾಡಿಕ.

ಒಬ್ಬ ಗಂಜೀರ ಬಾರಿಸುತ್ತಿದ್ದಾನೆ. ಇನ್ನೊಬ್ಬನು ಜಾನಪದ ಗೀತೆಯ ಧಾಟಿಯಲ್ಲಿ ಒಂದು ಕ್ರಾಂತಿ ಗೀತೆಯನ್ನು ಹಾಡುತ್ತಿದ್ದಾನೆ. ಅದನ್ನು ಅನುಸರಿಸಿ ಎಲ್ಲರೂ ಒಂದಾಗಿ ಹಾಡುತ್ತಾರೆ. ಒಬ್ಬ ಕೊಳಲು ಊದುತ್ತಿದ್ದಾನೆ.

ಕೂಟದಲ್ಲಿ ಮೊದಲು ಹಾಡುತ್ತಿರುವವನು ಸೋಮಪ್ಪ. ವಯಸ್ಸು ಸುಮಾರು ಇಪ್ಪತ್ತು. ಧೈರ್ಯಶಾಲಿ, ಚಟುವಟಿಕೆಗಾರ, ಬುದ್ಧಿವಂತ ಎಂದು ಅವನ ಮುಖಭಾವದಿಂದ ಸ್ಪಷ್ಟವಾಗುತ್ತದೆ.

ಸ್ವಲ್ಪ ಹೊತ್ತಿನಲ್ಲಿ ಹಾಡು ಮುಗಿಯುತ್ತದೆ.)

ತನಿಯ: (ಐವತ್ತು ವರುಷದ ಮುದುಕ) ಹಾಡಂದ್ರೆ ಹಿಂಗೆ ಇರ್ಬೇಕ್ ಕಣೋ, ಸೋಂಪ! ಇನ್ನೂ ಹೊತ್ತೈತೆ! ನೆನ್ನೆ ಹೊಸ್ತೊಂದು ಹಾಡಿದ್ಯಲ್ಲೋ? ಅದಾಗ್ಲಿ—ನೋಡಾನ!

ಸೋಮಪ್ಪ: ಅದನ್ನ ಹಾಡ್ಲಿಕ್ಕೆ ಬೊಳ್ಳೀನೂ ಬೇಕು! ಅವಳೆಲ್ಲಿ?

ಒಬ್ಬ ಹೆಂಗಸು: ಅವಳಿನ್ನೂ ಬಂದಂಗಿಲ್ಲಾ—ಇಷ್ಟೊತ್ತಾದ್ರೂನೂ!

ತನಿಯ: ಈವತ್ತು ಇಲ್ಲಿ ಕೆಲ್ಸ ಇಲ್ಲಾಂತ ಆಚೆ ಹಳ್ಳಿಗೆ ಹೋಗ್ಯಾಳೆ - ಬತ್ತ ಕುಟ್ಟೋಕೆ! ಬಂದ್ಬುಡ್ತಾಳೆ!

ಇನ್ನೊಬ್ಬ ಹೆಂಗಸು: ಕತ್ತಲಾಯ್ತಪ್ಪಾ! ಒಬ್ಳೇ ಹೆಂಗೆ ಬರ್ತಾಳೋ—?

ತನಿಯ: (ಮುಖದಲ್ಲಿ ಕಾತುರತೆ.) ಯಾಕೋ ತಡ! ಈಗ ಬಂದ್ಬುಟ್ಟಾಳು!

(ಬೊಳ್ಳಿ ಏದುತ್ತ ಓಡಿ ಬರುತ್ತಾಳೆ. ಬಂದವಳೆ ಹೆಂಗಸರ ಕೂಟದಲ್ಲಿ ಕುಸಿದು ಕುಳಿತುಕೊಳ್ಳುತ್ತಾಳೆ. ಓಡಿದ್ದರಿಂದಲೂ ಭಯದಿಂದಲೂ ಎದೆ ಬಡಿದುಕೊಳ್ಳುತ್ತಿದೆ. ಎಲ್ಲರೂ ಗಾಬರಿಯಿಂದ ಅವಳನ್ನೆ ನೋಡುತ್ತಾರೆ. ಒಬ್ಬ ಹೆಂಗಸು ಅವಳ ಬೆನ್ನು ಸವರುತ್ತಾಳೆ.)

ತನಿಯ: ಯಾಕೆ ಓಡ್ಕೊಂಡು ಬಂದ್ಯಾ?

ಬೊಳ್ಳಿ: (ಏದುತ್ತ) ಏ - ಏ - ಏನೂ - ಇಲ್ಲ!

ಸೋಮಪ್ಪ: ಕತ್ತಲಲ್ಲಿ ಹೆದರಿದ್ಯಾ?

ತನಿಯ: ಹೌದಾ!

ಬೊಳ್ಳಿ: (ಸ್ವಲ್ಪ ಸುಧಾರಿಸಿಕೊಂಡು) ನಂಗೇನೂ—ಆಗಿಲ್ಲಪ್ಪ.

ತನಿಯ: ಮತ್ತೆ ಗಡಗಡ ನಡಗ್ತಿದಿ!

ಬೊಳ್ಳಿ: ಕತ್ಲಾಯ್ತೂಂತ್ತ ಓಡ್ಕೊಂಡೆ ಬಂದೆ—ಅಷ್ಟೆ.

ಒಬ್ಬ ಹೆಂಗಸು: ಈವತ್ತು ಸಂಕ್ರಾತಿ ಮತ್ತೆ!

ಮತ್ತೊಬ್ಬ ಹೆಂಗಸು; ಒಂದು ಪಂಜಾದ್ರೂ ಹಿಡ್ಕೋಬೇಡ್ವೆ?

ತನಿಯ: (ಮೊದಲನೆ ಹೆಂಗಸು ಹೇಳಿದ್ದನ್ನೇ ನಿಧಾನವಾಗಿ ಉಸುರುತ್ತಾನೆ.) ಈವತ್ತು ಸಂಕ್ರಾತಿ! ಇದು—ಎಲ್ಲೊ - ಹೆದರ್ಕೊಂಡ್ಬಿಟ್ಟದೆ!

ಸೋಮಪ್ಪ: (ತಮಾಷೆಗೆ) ಹೌದೌದು! ಆ ಕಾಸರ್ಕನ ಗಿಡ ಇದೆಯಲ್ಲ? ಅಲ್ಲಿ ಹೆದರ್ಕೊಂಡಿರ್ಬೇಕು! ನಾಳೆ ಜೋಯಿಸ್ರನ್ನ ಕರ್ಸಿ ಮಂತ್ರ ಮಾಡಿಸ್ಬೇಕು ಕಣಪ್ಪೋ, ತನಿಯಣ್ಣ!

ತನಿಯ: ಸುಮ್ಕಿರೋ! (ಸ್ವಲ್ಪ ತಡೆದು) ನಾಳೆ ಪಂಜುರ್ಲಿಗೆ (ಅದು ಹೊಲೆಯರು ನಂಬುವ ಒಂದು ಭೂತ) ಒಂದು ಕೋಳಿ ಕೊಯಿಸ್ತಿನಿ! (ಬೊಳ್ಳಿಯೊಡನೆ) ನೀ ಹೆದರ್ಬೇಡ!

ಬೊಳ್ಳಿ: ಏನೂ ಬೇಡ! ನಾನೇನೂ ಹೆದರ್ಕೊಂಡಿಲ್ಲ. ಓಡಿ ದಣಿವಾಗಿದೆ — ಅಷ್ಟೇನೆ!

(ಎಲ್ಲರ ಮುಖದಲ್ಲೂ ಸಮಾಧಾನ ನೆಲೆಸುತ್ತದೆ.)

ಗಂಜೀರದವ; ಹಂಗಾದ್ರೆ ನಿನ್ನ ಹಾಡು ಸುರುಮಾಡು.

(ಬೊಳ್ಳಿ, ನಿಧಾನವಾಗಿ ಏಳುತ್ತಾಳೆ. ಅಷ್ಟರಲ್ಲಿ ರಾಜು ಪ್ರವೇಶಿಸುತ್ತಾನೆ. ರಾಜುವನ್ನು ನೋಡಿದೊಡನೆ ಬೊಳ್ಳಿ, ಕಾಲು ಉಡುಗಿದಂತೆ, ಕುಳಿತುಬಿಡುತ್ತಾಳೆ. ಎಲ್ಲರೂ ರಾಜುವನ್ನು ನೋಡುತ್ತಾರೆ. ರಾಜು ಮಣ್ಣಿನ ದಿನ್ನೆಯ ಮೇಲೆ, ಕಾಲುಗಳನ್ನು ಜೋತುಬಿಟ್ಟು ಕೈಗಳನ್ನು ಹಿಂದಕ್ಕೆ ಊರಿ ಕೂಡುತ್ತಾನೆ.)

ತನಿಯ: ಇಲ್ಲಿಗ್ಯಾಕೆ ಬಂದ್ರಿ—ದನಿಯೋರು? ಬಡವರು ಏನೋ ಮಾಡ್ತಿರ್ತೀವಿ—ತಾವ್ಯಾಕೆ ಬರ್ಬೇಕು ಬುದ್ಧಿ?

ರಾಜು: (ತಿರಸ್ಕಾರದ ನಗೆ ಬೀರುತ್ತ) ಬರ್ಬಾರ್ದೇನು? ನೀನ್ಯಾರು ಕೇಳೋಕೆ?

ತನಿಯ: ಅಂಗಲ್ಲ ಬುದ್ಧಿ! ಹುಡುಗ್ರು ಎನೋ ಹಾಡ್ಕೊಳ್ತಿದ್ರು—ಅದು ನಿಂತೋಗ್ಬಿಡ್ತಲ್ಲಾಂತ!

ರಾಜು: ಓ ಹೋ! ಹಾಗೋ! ಎಲ್ಲ ತಿಂದು ಸೊಕ್ಕಿದೀರಿ! ಹಾಡಂತೆ - ಹಾಡು!

ಸೋಮಪ್ಪ: ತಿಂದ್ ಸೊಕ್ಕಿರೋ ಮಂದಿ ಮಾತ್ರ ಹಾಡೋಲ್ಲ.—ಹಸ್ದು ಹಾಡೋರೂ ಇದಾರೆ.

ರಾಜು; ಸಾಕ್ಮಾಡೋ ಪುರಾಣಾನ! (ಎದ್ದು ದೀಪದ ಬಳಿಗೆ ಹೋಗಿ ಅದರಿಂದು ಬೀಡಿ ಹಚ್ಚುತ್ತಾನೆ. ಕೈಗೆ ಬಟ್ಟೆ ಸುತ್ತಿರುವುದು ಕಾಣುತ್ತದೆ.)

ಸೋಮಪ್ಪ: ಇದೇನು ಬುದ್ಧಿ, ಕೈಗೆ ಬಟ್ಟೆ?

ತನಿಯ: (ನಗಾಡುತ್ತ) ಎಲ್ಲೋ ಹೊಡ್ದಾಡಿ ಗಾಯ—ಗೀಯ ಮಾಡ್ಕೊಂಡಿದಾರೆ!

ರಾಜು: ಛೀ—ಛೇ! ಹೊಡ್ದಾಟ ಆಗಿದ್ರೆ ಪರ್ವಾ ಇರ್ಲಿಲ್ಲ.

(ಬೊಳ್ಳಿ ಕಳವಳದಿಂದ ಮುಖ ಮುಚ್ಚಿಕೊಳ್ಳುತ್ತಾಳೆ.)

ತನಿಯ: ಹಂಗಾರೆ—

ರಾಜು: ಹೆಣ್‌ನಾಯಿ ಕಡ್ದು ಬಿಡ್ತು ಕಣೊ! (ಬೊಳ್ಳಿ ಕಂಗಾಲಾಗುತ್ತಾಳೆ)

ಸೋಮಪ್ಪ: ನಾಯೀ ಬಾಲ ಹಿಂಡೋಕೆ ಹೋಗಿದ್ರೂಂತ ಕಾಣಸ್ತದೆ! ಇಲ್ಲಾಂದ್ರೆ ಸುಮ್ಕೆ ಕಡೀತದಾ?

ರಾಜು: ಬಾಲ ಹಿಂಡಿದ್ದಲ್ಲೋ—ಕೈ ಹಿಡ್ದೆ. ಅದು 'ಕುಂಯಿ' ಅಂದು ಕಡ್ದು—ಬಿಡ್ತು!

ತನಿಯ: ದನಿಗಳು ಹಿಂಗಾಗ್ಬಿಟ್ರಲ್ಲಾ!

ರಾಜು: ಹೆಂಗಾಗಿ ಬಿಟ್ರೋ?

ತನಿಯ: ಒಸಿ ಕುಂತ್ಕೊಳ್ಳಿ—ಹೇಳ್ತೀನಿ!

(ರಾಜು ತಿರುಗಿ ಹೋಗಿ ದಿನ್ನೆಯ ಮೇಲೆ ಕುಳಿತುಕೊಳ್ಳುತ್ತಾನೆ, ತನಿಯ ಎದ್ದು ಅವನ

(೭ನೇ ಪುಟ ನೋಡಿ)

ಕೃಷಿ ಅಭಿವೃದ್ಧಿಗೆ ರೈತರಿಗೆ ಹೊಲ ಸಿಗಬೇಕು!

(೩ನೇ ಪುಟದಿಂದ)

ರೈತರ ಒಪ್ಪಿಗೆ ಮತ್ತು ಸಹಕಾರದಿಂದಲೇ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸ ಬಹುದು. ಆದರೆ ಜಮೀನು ಹಂಚು ಹಂಚುವುದನ್ನೂ ಅದರ ಫಲವಾಗಿ ವ್ಯಾವಸಾಯಿಕ ಉತ್ಪಾದನೆ ಕಡಿಮೆಯಾಗುವುದೆಂಬ ಟೊಳ್ಳು ನೆಪವನ್ನೂ ಮುಂದೆ ಮಾಡಿ ಭೂವಿತರಣೆಯನ್ನು ವಿರೋಧಿಸುವ ವಾದಕ್ಕೆ ಯಾರೂ ಮನ್ನಣೆ ಕೊಡಲಾರರು. ಉಳುವ ರೈತರಿಗೆ ಹೊಲದಲ್ಲಿ ಭದ್ರತೆ ಕೊಟ್ಟು, ಅವರಿಂದ ಗೇಣಿಯ ರೂಪದಲ್ಲಿ ಉತ್ಪತ್ತಿಯ ಹೆಚ್ಚಿನ ಅಂಶ ಸೂರೆಯಾಗುತ್ತಿರುವುದನ್ನು ಕೊನೆಗಾಣಿಸಿದರೆ ವ್ಯಾವಸಾಯಿಕ ಉತ್ಪಾದನೆಯು ಅಭಿವೃದ್ಧಿ ಹೊಂದುವುದು ಖಂಡಿತ. ಇಂದಿನ ಪರಿಸ್ಥಿತಿಯಲ್ಲಿ ವ್ಯವಸಾಯದ ಅಭಿವೃದ್ಧಿಗೆ ಅದೇ ಸರಿಯಾದ ದಾರಿ.

ಭೂಸುಧಾರಣೆ ರಾಷ್ಟ್ರೀಯ ಅವಶ್ಯಕತೆ

ಭೂಮಾಲಕರ ಪ್ರತಿನಿಧಿಗಳ ಸಮ್ಮೇಳನವು ಮೈಸೂರು ವಿಧಾನ ಸಭೆಯ ಸದಸ್ಯರಿಗೆ ಒಂದು ವಿಚಿತ್ರ ಮನವಿ ಮಾಡಿಕೊಂಡಿದೆ. ಭೂಸಂಬಂಧ ಕಾನೂನು ಮಾಡುವುದು ರಾಜ್ಯದ ಅಧಿಕಾರಕ್ಕೆ ಸೇರಿದ್ದೆಂದೂ ಅದಕ್ಕೆ ಹೊರಗಿನವರು ಕೈಹಾಕದಂತೆ ತಡೆಯಬೇಕೆಂದೂ ಕೇಳಿಕೊಳ್ಳಲಾಗಿದೆ. ಇದು ಕೇಂದ್ರ ಸರಕಾರಕ್ಕೊಂದು ಸವಾಲಾಗಿದೆ. ಕೇಂದ್ರವು ಮೈಸೂರು ರಾಜ್ಯದಲ್ಲಿ ಭೂಸಂಬಂಧ ಕಾನೂನಿನ ವಿಚಾರದಲ್ಲಿ ಕೈಯಿಕ್ಕಬಾರದು, ಒತ್ತಾಯ ತರಬಾರದು ಎಂದು ಇದಕ್ಕೆ ಅರ್ಥ. ಯೋಜನಾ ಮಂಡಲದ ಶಿಫಾರಸುಗಳಿಗೆ ಮೈಸೂರು ಸರಕಾರ ಮಾನ್ಯತೆ ಕೊಡಬೇಕಾಗಿಲ್ಲ ಎಂದು ಇದರ ಸೂಚನೆ! ಇದು ನಿಜವಾಗಿಯೂ ಬಹಳ ವಿಚಿತ್ರವಾಗಿದೆ. ಮೈಸೂರು ರಾಜ್ಯವು ಸರ್ವತಂತ್ರ ಸ್ವತಂತ್ರವಾಗಿ, ಭೂಮಾಲಿಕರ ಸ್ವೇಚ್ಛಾಧಿಪತ್ಯದ ತಳವಾಗಿ, ಉಳಿಯಬೇಕೆಂದು ಈ ಸಮ್ಮೇಳನ ಸಾರುತ್ತಿದೆ. ಇಡೀ ದೇಶವು ಅನುಸರಿಸುವ ಮಾರ್ಗಕ್ಕೆ ಅಡ್ಡವಾಗಿ ಮೈಸೂರು ವರ್ತಿಸಬೇಕೆಂಬ ಈ ಅಪಾಯಕಾರಿ ಉಪದೇಶವನ್ನು ಮೈಸೂರಿನ ಶಾಸನ ಕರ್ತರಾಗಲಿ ಸರಕಾರವಾಗಲಿ ಅನುಸರಿಸುವುದು ಆತ್ಮಹತ್ಯೆಯಾಗುವುದೆಂದು ನಾವು ಎಚ್ಚರಿಸುತ್ತೇವೆ.

ಜಮೀನು ವ್ಯವಸಾಯಗಾರರಲ್ಲದವರ ಕೈಯಲ್ಲೂ ಕೆಲವೇ ಮಂದಿ ದೊಡ್ಡ ಭೂಮಾಲಕರ ಕೈಯಲ್ಲೂ ಸಂಗ್ರಹವಾಗಿ ಉಳುವವರಲ್ಲಿ ಹೆಚ್ಚಿನವರು ಹೊಲವಿಲ್ಲದವರಾಗುವುದನ್ನು ಕೊನೆಗಾಣಿಸಬೇಕು. ಉಳುವವರೇ ಹೊಲದ ಒಡೆಯರಾಗುವ ದಿಕ್ಕಿನಲ್ಲಿ ಭೂಸುಧಾರಣೆ ನಡೆಯಬೇಕು. ಇದರ ಬದಲು ಭೂಮಾಲಕರ ಪ್ರತಿನಿಧಿಗಳ ಸಮ್ಮೇಳನ ಕೊಡುವ ಸೂಚನೆ— ಭೂಮಾಲಿಕರಿಗೆ ಸುಖಸೌಭಾಗ್ಯದಲ್ಲಿ ಜೀವಿಸುವುದಕ್ಕೆ ಸಾಕಷ್ಟು ಭೂಮಿಯನ್ನು ಇಟ್ಟುಕೊಳ್ಳುವ ಹಕ್ಕು ಇರಬೇಕು; ಅದಕ್ಕಿಂತ ಕಮ್ಮಿಯಿರುವವರು ಇತರರಿಂದ ಮಾರ್ಕೆಟು ದರದಲ್ಲಿ ಹೊಲ ಕೊಂಡುಕೊಳ್ಳಲು ಅವಕಾಶವಿರಬೇಕು! ಜಮೀನನ್ನು ಶ್ರೀಮಂತರು ವಶಪಡಿಸಿಕೊಳ್ಳುವುದಕ್ಕೆ ಅವಕಾಶವಿರಬೇಕೆಂದೇ ಇದರ ಅರ್ಥ!

ಉಳುವವರ ರಕ್ಷಣೆಗೆ ಶಾಸನವಾಗಲಿ

ಭೂಮಾಲಕರ ಪ್ರತಿನಿಧಿ ಸಮ್ಮೇಳನವು ಭೂಸುಧಾರಣೆಯನ್ನು ವಿರೋಧಿಸುವುದಿಲ್ಲವಂತೆ! ಅವರಿಗೂ ಭೂಸುಧಾರಣೆ ಬೇಕು. ಆದರೆ ಅವರಿಗೆ ಬೇಕಾಗಿರುವ ಸುಧಾರಣೆ ಎಂಥಾದ್ದು? ಈಗ ಜಾರಿಯಲ್ಲಿರುವ ಕಾನೂನುಗಳಲ್ಲಿ ಗೇಣಿ ನಿರ್ಣಯ, ಹಿಡುವಳಿಯ ಪರಿಮಿತಿ ಮುಂತಾದ ಭಾಗಗಳನ್ನು ಭೂಮಾಲಿಕರಿಗೆ ಬೇಕಾದಂತೆ ತಿದ್ದುಪಡಿ ಮಾಡುವ "ಸುಧಾರಣೆ" ಅವರಿಗೆ ಬೇಕಾಗಿದೆ. ಗೇಣಿಯು ಉತ್ಪತ್ತಿಯ ಅರ್ಧಾಂಶಕ್ಕೆ ಏರಿಸಲ್ಪಡುವಂಥ ಸುಧಾರಣೆ ಅವರಿಗೆ ಬೇಕಾಗಿದೆ. ಅಂಥ ಕಾನೂನು ಆಗತಕ್ಕದ್ದೆಂದು ಕೇಳಿಕೊಂಡಿದ್ದಾರೆ.


ಅಂತೂ ಮೈಸೂರು ರಾಜ್ಯದ ದೊಡ್ಡ ಭೂಮಾಲಿಕರು ಭೂಸುಧಾರಣೆಯ ವಿರೋಧವಾಗಿ ಯುದ್ಧ ಸಾರಿದ್ದಾರೆ. ಅದನ್ನು ಇದಿರಿಸಲು ಸಿದ್ಧರಾಗೋಣ. ಒಕ್ಕಲು ತಪ್ಪಿಸುವುದನ್ನು ನಿಷೇಧಿಸುವ, ಗೇಣಿ ಅಥವ ಗುತ್ತಿಗೆ ಉತ್ಪತ್ತಿಯ ⅙ ಭಾಗಕ್ಕಿಂತ ಹೆಚ್ಚಿಲ್ಲದಂತೆ ನಿರ್ಣಯಿಸುವ, ಉಳುವವನೇ ಹೊಲದ ಒಡೆಯನಾಗುವುದಕ್ಕೆ ಅವಕಾಶವಿರುವ ಭೂಸುಧಾರಣೆಯ ಕಾನೂನು ಬೇಗನೆ ಜಾರಿಗೆ ಬರುವುದಕ್ಕೋಸ್ಕರ ಸಂಘಟಿತ ಚಳುವಳಿ ನಡಿಸೋಣ.

ಬಿ.ವಿ. ಕಕ್ಕಿಲ್ಲಾಯ

ಅಂದವಾದ ಮುದ್ರಣ ಕೆಲಸಕ್ಕೆ

ಜ ನ ಶ ಕ್ತಿ

ಮುದ್ರಣಾಲಯಕ್ಕೆ ಸಂದರ್ಶನವೀಯಿರಿ



ಮನೆ ಮುರಿದ ಮಗ

(೬ನೇ ಪುಟದಿಂದ)

ಹತ್ತಿರ ನಿಲ್ಲುತ್ತಾನೆ.)

ತನಿಯ: ನಾನೊಂದು ಮಾತು ಹೇಳ್ತೀನಿ ಬುದ್ಧಿ— ಕೋಪಿಸ್ಕೋ ಬಾರ್ದು!

ರಾಜು: ಒಂದ್ಯಾಕೆ? ಹತ್ತು ಮಾತು ಹೇಳು, ಕೇಳ್ತೀನಿ!

ತನಿಯ: ನಾವು ನಿಮ್ಮ ಮನೇ ಅನ್ನಾ ತಿಂದು ಬೆಳ್ದೋರು, ಬುದ್ಧಿ......

ಸೋಮಪ್ಪ: (ನಡುವೆ ಬಾಯಿ ಹಾಕಿ) ಛೇ ಛೇ—ಹಂಗಲ್ಲ ಕಣೋ, ತನಿಯಣ್ಣ! ದನಿಗಳು ಮೊದ್ಲಿಂದ ನಮ್ಮ ಅನ್ನಾ ತಿಂದು ಬೆಳೆದವರೊಂತನ್ನು!

ರಾಜು: (ಕೋಪದಿಂದ) ಹಲ್ಲು ಉದ್ರಿಸಿ ಬಿಟ್ಟೇನು! ಭಾರೀ ಬೊಗಳ್ತೀಯಲ್ಲೋ ಕಮ್ಯೂನಿಸಂ!

ಗಂಜೀರದವ: ನಮ್ಮ ಕೈ ಎಲ್ಲೂ ಒತ್ತೆ ಇಟ್ಟಿಲ್ಲ!

ರಾಜು: ಹುಂ!

ತನಿಯ: (ಉಳಿದವರಿಗೆ) ನೀವು ಸುಮ್ಕಿರಿ! ಹಿಂಗೆಲ್ಲಾ ಮಾಡ್ಬಾರ್ದು ಬುದ್ಧಿ ನೀವು.

ರಾಜು: ಹೆಂಗೋ ಮಾಡ್ಬಾರ್ದು?

ತನಿಯ: ನೀವು ಅಣ್ಣ—ತಮ್ಮ ಕಿತ್ತಾಡ್ಕೊಂಡ್ರೆ ಊರವರು ನಗ್ತಾರೆ, ಬುದ್ಧಿ!

ರಾಜು: ಊರವರು ನಗ್ಲೀಂತ್ಲೇ ನಾವು ಹಂಗ್ಮಾಡೋದು! ಊರವರು ಅಳ್ಬೇಕೆ ಮತ್ತೆ?

ತನಿಯ: ಅಂಗಲ್ಲ ಬುದ್ಧಿ! ನೀವು ಚೆನ್ನಾಗಿದ್ರೆ—ನಮ್ಗೆಲ್ಲ ಮರ್ಯಾದೆ ಬರ್ತೈತೆ!

ರಾಜು: ನನ್ಗಂತೂ ಏನೂ ಬರೋಲ್ಲ! (ಎದ್ದು, ತನಿಯನ ಹೆಗಲ ಮೇಲೆ ಎಡಗೈ ಇಟ್ಟು ಬಲಗೈ ಅವನ ಸೊಂಟದ ಸುತ್ತಲೂ ಹರಡುತ್ತ) ಎಲೆ—ಅಡಿಕೆ ಏನೂ ಇಲ್ವಾ?

ತನಿಯ: (ಬೊಳ್ಳಿಯ ಕಡೆಗೆ ನೋಡಿ) ಒಳಗೆ ಎಲೆ—ಅಡಿಕೆ ಇದೆ, ತಗೊಂಬಾ, ತಾಯಿ!

(ಬೊಳ್ಳಿ ಎದ್ದು ಒಳಕ್ಕೆ ಹೋಗುತ್ತಾಳೆ)

ಸೋಮಪ್ಪ: (ಕೂಟದವರೊಡನೆ) ಅವರಲ್ಲಿ ಮಾತಾಡ್ತಾ ಇರ್ಲಿ; ನಾವು ನಮ್ಮ ಕೆಲ್ಸ ನೋಡಾನ!

(ಗಂಜೀರದವ ಗಂಜೀರ ತಿಕ್ಕಿ, ಹೊಡೆದು ಶಬ್ದ ಮಾಡುತ್ತಾನೆ. ಕೊಳಲಿನವ ಬಾರಿಸಲು ತಯಾರಾಗುತ್ತಾನೆ. ಎಲ್ಲರೂ ಹಾಡಲು ಸಿದ್ಧರಾಗುತ್ತಾರೆ. ಅಷ್ಟರಲ್ಲಿ ಬೊಳ್ಳಿ ಒಂದು ಗರಿಯ ತಾಟಿನಲ್ಲಿ ಎಲೆ, ಅಡಿಕೆ, ಹೊಗೆಸೊಪ್ಪು, ಸುಣ್ಣ ಮುಂತಾದವುಗಳನ್ನು ತಂದು ದಿನ್ನೆಯ ಮೇಲಿಟ್ಟು ಹೆಂಗಸರ ಬಳಿಗೆ ಸರಿಯುತ್ತಾಳೆ.)

ಸೋಮಪ್ಪ: (ಬೊಳ್ಳಿಯೊಡನೆ) ನೀನು ಇಲ್ಲಿ ಕುಂತ್ಕೋ—ಈಗ ನೀನೂ ಹಾಡ್ಬೇಕು!

(ಬೊಳ್ಳಿ ಏನೂ ಹೇಳದೆ ಹೆಂಗಸರ ಮಧ್ಯೆ, ಕುಳಿತುಬಿಡುತ್ತಾಳೆ. ತಲೆ ಎತ್ತಿ ನೋಡುವುದಿಲ್ಲ.)

ತನಿಯ: (ಬೊಳ್ಳಿಯನ್ನು ಕುರಿತು) ಇವ್ಳಿಗೆ ಏನೋ ಆಗೇತ ಈವತ್ತು! ಹೋಗೇ! ನೀನೂ ಸೇರ್ಕೊಳ್ದಿದ್ರೆ ಆ ಹಾಡು ನಡ್ಯೋದೇ ಇಲ್ಲ.

(ಹೆಂಗಸರು ಬೊಳ್ಳಿಯನ್ನು ಹಾಡಲು ಒತ್ತಾಯಪಡಿಸುತ್ತಾರೆ. ಅವಳು ಮೆಲ್ಲಗೆ ಎದ್ದು ಹಾಡುಗಾರರ ಕೂಟದಲ್ಲಿ, ಸೋಮಪ್ಪನ ಹಿಂದೆ, ರಾಜುವಿಗೆ ಕಾಣಿಸದಂತೆ ಮರೆಯಾಗಿ, ಕುಳಿತುಕೊಳ್ಳುತ್ತಾಳೆ. ರಾಜು ದಿನ್ನೆಯ ಮೇಲೆ ಕುಳಿತುಕೊಂಡು ಎಲೆ-ಅಡಿಕೆಯ ತಾಟಿಗೆ ಕೈ ಹಾಕುತ್ತಾನೆ. ತನಿಯ ಅಲ್ಲೇ ನಿಂತಿರುತ್ತಾನೆ ಹಾಡು ಆರಂಭವಾಗುತ್ತದೆ.

ಹಾಡು ಮುಗಿದ ಮೇಲೆ ರಾಜು ಎದ್ದು)

ರಾಜು: ಲೇ—ತನಿಯ! ನಾನೀಗ ಹೋಗ್ತೀನಿ! ನಾಡಿದ್ದು ಯುಗಾದಿ. ಕಾಣಿಕೆ ಅಣ್ಣಂಗೆಲ್ಲಾ ದ್ರೂ ಕೊಟ್ಟೀರಾ ಮತ್ತೆ! ಈ ವರ್ಷ ನಂಗೆ ಬರ್ಬೇಕು! ತಿಳೀತ! (ಹೋಗುತ್ತಾನೆ)

ಸೋಮಪ್ಪ: (ರಾಜುಗೆ ಕೇಳಿಸುವಂತೆ, ಗಟ್ಟಿಯಾಗಿ) ನಾವು ಬಂದಿರೋದು ದನೂರಿಗಾ! ಅಣ್ಣಂಗೂ ಇಲ್ಲ, ತಮ್ಮಂಗೂ ಇಲ್ಲ, ಎಲ್ಲ ನಿಲ್ಸಿ ಬಿಟ್ಟೀವಿ!

ತನಿಯ: (ಬೊಳ್ಳಿಗೆ) ನಿನ್ ಕೆಲ್ಸ ನೋಡ್ಕೋ! ಮಾತ್ಯಾಕೆ ಅಳ್ತಿಯಾ?

ರಾಜು: (ತೆರೆಯ ಮರೆಯಿಂದ) ಹಾಂ! ಕೇಳಿಸ್ತು—ಕೇಳಿಸ್ತು! ಕೊಡ್ಲಿಲ್ಲಾಂದ್ರೆ ನೋಡ್ಕೋತೀನಿ! ನಿನ್ ಕಮ್ಯೂನಿಸಂ!

ಸೋಮಪ್ಪ: ಓ — ಹೋ —! (ಎಲ್ಲರೂ ನಗುತ್ತಾರೆ.

ಬೊಳ್ಳಿ: ಅದೊಂದು ಸನಿ ಇದ್ಹಂಗೆ! ಕಂಡ್ರೆ ಕಣ್ಣೆ ಸೀದೋಗ್ಬೇಕು! ಎದ್ದಾಗ ಮೊಕಾ ನೋಡಿದ್ರೆ ಇಡೀ ದಿನ ನೀರೇ ಸಿಗಂಗಿಲ್ಲ!

ತನಿಯ: ಹಾಗನ್ಬಾರ್ದೇ—ಬೊಳ್ಳೀ! ಎಂಗಿದ್ರೂ ದೊಡ್ಡೋರಿಗ್ಗಿಂತ ವಾಸಿ—ಏನಂತೀಯಾ ಸೋಂಪ?

ಸೋಮಪ್ಪ: ಅದು ನಿಜಾಂತೀನಿ!

ಒಬ್ಬ ಹೆಂಗಸು: ಸುದ್ಧ ಪೀಡೆ! ಹುಡುಗೀರು ದಾರಿಲಿ ನಡಿಯಂಗಿಲ್ಲ—ಈಯಪ್ಪ ಕಾಟದಿಂದ!

ಸೋಮಪ್ಪ: ಓಟಕಣವ್ವ, ದಿಟ! ಅದ್ರೆ, ದೊಡ್ಡ ಮನುಸ್ರಂಗೆ ಬರ್ತಾರಲ್ಲಾ - ದೊಡ್ಡೋರು-ಅವ್ರಿಗಿನ್ನ ಈ ಅಸಾಮಿ ಪರ್ವಾಗಿಲ್ಲ!

ತನಿಯ: ಅದೇ ನಾನಂದಿದ್ದು! ಈ ಚಿಕ್ಕಯ್ನೋರಿಗೆ ಮೇಲ್ಜಾತಿ ಕೀಳ್ಜಾತೀಂತ ಬೇದ ಇಲ್ಲ, ಬಡವ್ರ ತಂಟೆಗೆ ಬರೋಲ್ಲ ಇವ್ರು! ದೊಡ್ಡವರು ಭಲೇ ಡಮಾಮೀ!

ಗಂಜೀರದವ: ಇವ್ರ ಮನಸು ಒಳ್ಳೆದು!

ಬೊಳ್ಳಿ: ಏನು ಸುಡ್ಗಾಡು ಮನಸೋ? ಆದ್ಯಾರು ನೋಡಿದಾರೆ!

ಮತ್ತೊಬ್ಬ ಹೆಂಗಸು: ಮೊನ್ನೆ ಸೀನಪ್ಪನ ಮನೇಲಿದ್ದ ದೊಡ್ಡ ಹುಂಜ ಹೊತ್ಕೊಂಡೋದ್ರು!

ತನಿಯ: ಹಂಗೂ ಮಾಡ್ತಾರೆ, ಒಮ್ಮೊಮ್ಮೆ! ಇಲ್ಲಾನ್ನಾಕಿಲ್ಲ! ಆದ್ರೂನು ನಂಗೇನೋ ದೊಡ್ಡೋರಿಗ್ಗಿಂತ ಇವ್ರೆ ಚಲೋ ಅನಿಸ್ತದೆ!

ಗಂಜೀರದವ: ನೆನ್ನೆ ದಿವ್ಸ ಈ ರಾಜಪ್ಪ ಏನ್ಮಾಡಿದ್ರೂಂತೀಯ? ಹಂಗೆ ದಾರೀಲಿ ಬರ್ತಿರ್ಬೇಕಾದ್ರೆ, ಸಮ್ಮಣ್ಣನ ಮಗ ತಿಪ್ಪ ಅಲ್ಲಿ ನಿಂತಿತ್ತು, ಆ ಹುಡುಗನ್ನ ಎತ್ಕೊಂಡು ಧಿಮಿ-ಧಿಮೀಂತ ನಾಲ್ಕು ಪಟ್ಟು ಕುಣ್ದು—ಹಂಗೇನೆ ಹೊಂಟೋದ್ರು!

ಸೋಮಪ್ಪ: ಮನಸ್ಸು ಒಳ್ಳೆದು, ಚರ್ಯೆ ಕೆಟ್ಟದ್ದು! ಅದೊಂದು ಇಚಿತ್ರ!

ತನಿಯ: ರಾಜಪ್ಪನವರಲ್ಲಿ ಒಳ್ಳೇದೂ ಐತಿ, ಕೆಟ್ಟದ್ದೂ ಐತಿ! ಎರಡೂ ನೋಡ್ಕೊಂಡ್ ಅನ್ಸರಿಸ್ಬೇಕು.

— ತೆರೆ —

(ಮುಂದುವರಿಯುವುದು)

ಕೇರಳ ಪಿ.ಎಸ್.ಪಿ. ದಾರಿ!

ಕಮ್ಯೂನಿಸ್ಟರೊಡನೆ ಸಹಜೀವನ ಸಾಧ್ಯವಿಲ್ಲ ಎಂದು ಪಿ.ಎಸ್.ಪಿ. ಕಾರ್ಯಕಾರಿ ಸಮಿತಿಯ ಖಚಿತ ಅಭಿಪ್ರಾಯವಾಗಿದೆ. ಕೇರಳದ ಜನತೆ ಕಮ್ಯೂನಿಸ್ಟರನ್ನು ಬಹು ಸಂಖ್ಯೆಯಲ್ಲಿ ಆರಿಸಿ ಅವರನ್ನು ಅಧಿಕಾರಕ್ಕೆ ಏರಿಸಿದ್ದಾರೆ. ಹಾಗಾದರೆ, ಕಮ್ಯೂನಿಸ್ಟರೊಡನೆ ಸಹಜೀವನ ಸಾಧ್ಯವೇ ಇಲ್ಲದವರಿಗೆ ಏನು ದಾರಿ? ಅವರು ಒಂದೋ ಕಮ್ಯೂನಿಸ್ಟರನ್ನು ಬಲಾತ್ಕಾರದಿಂದ ಉರುಳಿಸಬೇಕು; ಅದು ಕೈಲಾಗದಿದ್ದರೆ ತಾವೇ ಆತ್ಮಹತ್ಯೆ ಮಾಡಿಕೊಳ್ಳಬೇಕು! ಈ ಎರಡು ದಾರಿಗಳಲ್ಲದೆ ಮೂರನೆಯ ದಾರಿಯಿಲ್ಲ. ಜನರಿಂದ ಆರಿಸಲ್ಪಟ್ಟು, ಘಟನಾತ್ಮಕವಾಗಿ ಅಧಿಕಾರಕ್ಕೆ ಬಂದಿರುವ ಕಮ್ಯೂನಿಸ್ಟ್ ಸರಕಾರವನ್ನು ಬಲಾತ್ಕಾರದಿಂದ ಉರುಳಿಸಲು ಪ್ರಯತ್ನಿಸುವ ಆಟ ನಡೆಯಲಾರದು! ತಾವು ಅಧಿಕಾರಕ್ಕೆ ಏರಿಸಿರುವ ಸರಕಾರವನ್ನು ರಕ್ಷಿಸುವ ಶಕ್ತಿ ಜನತೆಗೆ ಇದೆ. ಹಾಗಾದರೆ ಪಿ.ಎಸ್.ಪಿ.ಗೆ ಉಳಿದದ್ದು ಒಂದೇ ದಾರಿ—ಆತ್ಮಹತ್ಯೆ! ಪಿ.ಎಸ್.ಪಿ. ಅನುಸರಿಸುತ್ತಿರುವುದೂ ಆ ದಾರಿಯನ್ನೇ!

ರೈತರಂಗ

ರೈತರ ಸಭೆಗಳು

ಬಂಟ್ವಾಳ

ಬಂಟ್ವಾಳ ಫಿರ್ಕಾ ರೈತಸಂಘದ ನೇತೃತ್ವದಲ್ಲಿ ತಾ 31—12—57ನೇ ಮಂಗಳವಾರ ಸಂಜೆ ಗಂಟೆ 4–30ಕ್ಕೆ ಬಂಟ್ವಾಳ ಬಡ್ಡಕಟ್ಟೆಯಲ್ಲಿ ರೈತರ ಮತ್ತು ಮೂರ್ತೆದಾರರ ಸಭೆಯು ದ. ಕ. ಜಿಲ್ಲಾ ರೈತ ಸಂಘದ ಅಧ್ಯಕ್ಷ ಶ್ರೀ ಎ. ಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾರಂಭದಲ್ಲಿ ಶ್ರೀ ಬಿ. ವೀರಪ್ಪ ಸಾಲಿಯಾನರು ಸಭೆ ಕರೆದ ಉದ್ದೇಶವನ್ನು ವಿವರಿಸಿದರು. ಕರ್ನಾಟಕ ಪ್ರಾಂತ ರೈತ ಸಮ್ಮೇಳನದ ನಿರ್ಣಯಗಳು, ಜಿಲ್ಲಾ ರೈತ ಸಂಘದ ತೀರ್ಮಾನಗಳು, ಮತ್ತು ಮೂರ್ತೆದಾರರ ಸಮಸ್ಯೆಗಳ ಕುರಿತಾಗಿ ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಶ್ರೀ ಎಂ. ಎಚ್. ಕೃಷ್ಣಪ್ಪನವರು ಸಭೆಯಲ್ಲಿ ಮಾತನಾಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಜಿಲ್ಲೆಯ ಮೂರ್ತೆದಾರರು ನಡೆಸಿದ ಚಳುವಳಿ ಹಾಗೂ ಮೂರ್ತೆದಾರರ ಕೇಳಿಕೆಗಳನ್ನು ವಿವರಿಸಿದರು. ತಾಳೆಮರಗಳಿಗೆ ಮುದ್ರೆಯೊತ್ತಬೇಕೆಂಬ ಸರಕಾರದ ನಿರ್ಣಯವನ್ನು ಬದಲಿಸಲು ಮೂರ್ತೆದಾರರು ಚಳವಳಿ ನಡೆಸಬೇಕಾದ ಆವಶ್ಯಕತೆಯನ್ನು ಸಭೆಯಲ್ಲಿ ಅಧ್ಯಕ್ಷರು ಪ್ರಸ್ತಾಪಿಸಿದರು.

ಸಭೆಗೆ ಮೊದಲು ಬಂಟ್ವಾಳ ಫಿರ್ಕಾದ ಮೂರ್ತೆದಾರರ ಪ್ರತಿನಿಧಿಗಳ ಸಭೆ ಜರಗಿ ತಾಳೆಮರಗಳಿಗೆ ಮುದ್ರೆ ಹಾಕಬೇಕೆಂಬ ಸರ್ಕಾರದ ನಿರ್ಣಯವನ್ನು ಬದಲಿಸಲು ಮೂರ್ತೆದಾರರು ಸಂಘಟಿತರಾಗಿ ಚಳುವಳಿ ನಡೆಸಲು ತೀರ್ಮಾನವಾಗಿರುತ್ತದೆ.

ದಾಸರಹಳ್ಳಿ

ಬೆಂಗಳೂರು ಉತ್ತರ ತಾಲೂಕ ರೈತ ಸಂಘದ ಆಶ್ರಯದಲ್ಲಿ ದಾಸರ ಹಳ್ಳಿಯಲ್ಲಿ ಜನವರಿ ತಾ. 4ರಂದು ರೈತರ ಸಭೆ ಜರಗಿತು. ಶ್ರೀ ಮುನಿಸ್ವಾಮಪ್ಪ, ಮಾಜಿ ಗ್ರಾಮ ಪಂಚಾಯತ್ ಚೆಯರ್‌ಮೆನ್ ಅಧ್ಯಕ್ಷತೆ ವಹಿಸಿದ್ದರು. ಕರ್ನಾಟಕ ಪ್ರಾಂತ ರೈತಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಬಿ.ಟಿ.ವಿ.ರಾಜು ಪಚ್ಚಪ್ಪ, ಮೊದಲಾದವರು ರೈತ ಸಂಘಟನೆಯ ಆವಶ್ಯಕತೆಯನ್ನು ಕುರಿತು ಭಾಷಣ ಮಾಡಿದರು. ಫೆಬ್ರವರಿಯಲ್ಲಿ ಜರಗಲಿರುವ ತಾಲೂಕು ರೈತ ಸಮ್ಮೇಳನಕ್ಕೆ ರೈತ ಬಾಂಧವರು ಸಹಾಯ ಸಹಕಾರ ನೀಡಬೇಕೆಂದು ಭಾಷಣಗಾರರು ವಿನಂತಿಸಿದರು. ಭೂಸುಧಾರಣೆಗೆ ಸಂಬಂಧಿಸಿದ ಮನವಿಗೆ ರೈತರೆಲ್ಲರೂ ಸಹಿ ಕೊಡಬೇಕೆಂದೂ ರೈತ ಸಂಘಕ್ಕೆ ಎಲ್ಲರೂ ಸದಸ್ಯರಾಗಿ ಸೇರಬೇಕೆಂದೂ ಕೇಳಿಕೊಂಡರು.

ರೈತಸಂಘಕ್ಕೆ ಶ್ರೀ ಬಿ. ನರಸಿಂಹಯ್ಯ (ಅಧ್ಯಕ್ಷ), ಶ್ರೀ ಪಚ್ಚಪ್ಪ (ಕಾರ್ಯದರ್ಶಿ), ಶ್ರೀ ಮರಿಯಪ್ಪ (ಜತೆಕಾರ್ಯದರ್ಶಿ) ಶ್ರೀ ಬಿ. ಟಿ ವಿ. ರಾಜು (ಖಜಾಂಚಿ) ಮತ್ತು ಐದು ಮಂದಿ ಸದಸ್ಯರನ್ನೊಳಗೊಂಡ ಸಮಿತಿಯನ್ನು ಚುನಾಯಿಸಲಾಯಿತು.

ವಂದನಾರ್ಪಣೆಗಳೊಡನೆ ಸಭೆ ಮುಕ್ತಾಯವಾಯಿತು.

ಬಾಗಲಕುಂಟಿ

ಬೆಂಗಳೂರು ನಾರ್ತ್ ತಾಲ್ಲೂಕ್ ಯಶವಂತ ಪುರ ಹೋಬಳಿಯ ಬಾಗಲಕುಂಟಿ ಗ್ರಾಮದಲ್ಲಿ ರೈತ ಸಂಘದ ಸಭೆಯು ಪಟೇಲ್ ಬಿ. ಮಾರಣ್ಣನವರ ಅಧ್ಯಕ್ಷತೆಯಲ್ಲಿ ಜರಗಿತು. ಬಿ. ಟಿ. ವಿ. ರಾಜುರವರು, ಜತ್ತಿ ಸಮಿತಿಗೆ ತಿದ್ದುಪಡಿ ವ್ಯಕ್ತ ಪಡಿಸುತ್ತಾ, ರೈತರಿಗೆ ನ್ಯಾಯ ದೊರಕುವಂತಹ ಭೂಸುಧಾರಣೆ ಬಗ್ಗೆ ಕೆಲವು ವಿಷಯಗಳನ್ನು ತಿಳಿಸಿದರು.

ಬಿ. ಎಂ. ಮುನಿಕೊಂಡಪ್ಪನವರು ಮಾತನಾಡುತ್ತ ಜೋಡಿ ಗ್ರಾಮಗಳ ಸರ್ವೆ ನಡೆಯುವ ಬಗ್ಗೆ ಕೆಲವು ಸಲಹೆಗಳನ್ನು ಇತ್ತರು ಸಂಗದ ಅಧ್ಯಕ್ಷರಾಗಿ ಬಿ. ಎಂ. ಮರಿಯಪ್ಪ ಕಾರ್ಯದರ್ಶಿ ಶ್ರೀ ಬಿ. ಎಂ, ಬೀರಣ್ಣ ಮತ್ತು ಕಜಾಂಚಿ, ಬಿ. ಎಂ. ಮುನಿಕೊಂಡಪ್ಪನವರುಗಳಿಂದೊಡಗೂಡಿದ 6 ಜನ ಸದಸ್ಯರುಗಳ ಕಮಿಟಿಯನ್ನು ಸಭೆಯಲ್ಲಿ ಚುನಾಯಿಸಲಾಯಿತು.

ಬೀದರ ಪಂಚರ ನಿರ್ಣಯ ಜಾರಿಗೆ ಬರಲಿ

ಬೀದರ ತಾಲೂಕಾದ ಸಕಲ ಗ್ರಾಮ ಪಂಚರ ಸಮ್ಮೇಳನ ವಗದಾಳ ಗ್ರಾಮದಲ್ಲಿ 1957 ಮೇ ತಿಂಗಳಲ್ಲಿ ಜರಗಿ, ಕೆಲವು ಪ್ರಸ್ತಾವಗಳು ಪಾಸಾಗಿವೆ. ಆದರೆ ಅಧಿಕಾರಿಗಳು ಇನ್ನೂ ಪಾಸಾದಪ್ರಸ್ತಾವಗಳನ್ನ ಕಾರ್ಯಕೂಪಕ್ಕೆ ತಂದಿಲ್ಲ. ಆದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಪಾಸಾದ ನಿರ್ಣಯಗಳ ಪೈಕಿ ಕೆಲವು ಮುಖ್ಯ ಪ್ರಸ್ತಾವಗಳನ್ನಾದರೂ ಕಾರ್ಯರೂಪದಲ್ಲಿ ತರುವಂತಾಗಲೆಂದು ಆಶಿಸಲಾಗಿದೆ.
ಈ ಪ್ರಸ್ತಾವಗಳನ್ನು ಕೆಳಗೆ ನೀಡಲಾಗಿದೆ:

ಪ್ರಸ್ತಾವಗಳು

ಬೀದರದಿಂದ ತಾಲೂಕು ಚಿಂಚೋಳಿ ವರೆಗೆ ಕಮಠಾಣ, ವಗದಾಳ, ಮಿನಕೇರಿ ಚಾಂಗಲೇರಿ ಮುಂತಾದ ಗ್ರಾಮಗಳ ಮೇಲಿಂದ ಒಂದು ಪಕ್ಕಾ ರೋಡು (ರಸ್ತೆ) ರಚಿಸುವುದು ಅತ್ಯಂತ ಅವಶ್ಯಕವಿದೆ.

ಹೊನ್ನಾಡಿ, ಮುಂತಾದ ಗ್ರಾಮಗಳಲ್ಲಿ ಅಪೂರ್ಣವಾದ ಶಾಲೆಯ ಕಟ್ಟಡಗಳು ಸರಕಾರದವರು ಪೂರ್ಣ ಕಟ್ಟಿಸಬೇಕು.

ಎರಡು ಸಾವಿರಕ್ಕಿಂತಲೂ ಹೆಚ್ಚು ಜನ ಸಂಖ್ಯೆಯುಳ್ಳ ಗ್ರಾಮಗಳ ಶಾಲೆಯಲ್ಲಿ 5ನೇ ವರ್ಗ ಸ್ಥಾಪಿತವಾಗಬೇಕು.

ಯಾವ ಗ್ರಾಮಗಳಲ್ಲಿ ಶಾಲೆ ಕಟ್ಟಡ ನಿರ್ಮಾಣವಾಗಿದೆಯೋ ಆ ಗ್ರಾಮಗಳಿಗೆ ಅಧ್ಯಾಪಕರನ್ನು ನೇಮಿಸಬೇಕು.

ಪ್ರತಿಯೊಂದು ಗ್ರಾಮ ಸೇವಕನ ಭಾಗದಿಂದ (ಸರ್ಕಲಿನಿಂದ) ಸಲಹಾ ಸಮಿತಿಗೆ ಇಬ್ಬರು ಸದಸ್ಯರನ್ನು ಆ ಭಾಗದ ಪಂಚರ ಅನುಮತಿಯಿಂದ ಆರಿಸಬೇಕು.

ಬೀದರ ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಾರಖಾನೆ ಸ್ಥಾಪಿತವಾಗಬೇಕು.

ಮನ್ನಳ್ಳಿ, ಕಮಠಾಣ, ಖಾಸೆಂಪೂರ, ಮುಂತಾದ ಗ್ರಾಮಗಳಲ್ಲಿರುವ ಹಾಳು ಬಿದ್ದಿರುವ ಕೆರೆಗಳಿಗೆ ಸರಿಯಾಗಿ ದುರಸ್ತಿ ನಡೆಸಬೇಕು.

ಗ್ರೂಪ ಪಂಚಾಯತ ಸ್ಥಾಪಿತ ಆಗುವಾಗ ಹಳ್ಳಿಗಳ ಜನರಿಂದ ಅಭಿಪ್ರಾಯ ತಿಳಿದುಕೊಂಡು ಅವರ ಇಚ್ಛೆಯಂತೆ ಗ್ರಾಮ ಪಂಚಾಯಿತದಲ್ಲಿ ಸೇರಿಸಬೇಕು. ಸ್ಥಾಪಿತವಾಗಿರುವ ಗ್ರಾಮ ಪಂಚಾಯಿತಿಗಳು ಇದ್ದ ಹಾಗೆ ಇರಬೇಕು.

ಜಿಲ್ಲೆಯ ಪಂಚರೆಲ್ಲಾ ಒಂದುಗೂಡಿ ಸರಕಾರಕ್ಕೆ ಇಂಥಹ ರಚನಾತ್ಮಕ ಸಲಹೆಗಳನ್ನಿತ್ತು, ಅವುಗಳನ್ನು ಜಾರಿಗೊಳಿಸುದರಲ್ಲಿ ನೇರವಾಗಿ ಭಾಗವಹಿಸಲು ಸಿದ್ಧವಿದ್ದರೂ, ಈ ಅಭಿವೃದ್ಧಿ ಕಾರ್ಯವನ್ನು ಕೈಗೊಳ್ಳಲು ಸರಕಾರ ಮುಂಬರದಿರುವುದು ಶೋಚನೀಯ. ಇನ್ನಾದರೂ ಈ ನಿರ್ಣಯಗಳು ಜಾರಿಗೆ ಬರುವಂತಾಗಲಿ.

ದಕ್ಷಿಣ ಕನ್ನಡ ಜಿಲ್ಲೆಯ ರೈತ ಚಳುವಳಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತ ಸಂಘಟನೆ ಮತ್ತು ಚಳುವಳಿಯು ಬಲಗೊಂಡುತ್ತಿದೆ, ಹಬ್ಬಿ ಬೆಳೆಯುತ್ತಿದೆ. ಪ್ರಾಂತ ರೈತ ಸಮ್ಮೇಳನದ ನಿರ್ಣಯಗಳ ತಳಹದಿಯಲ್ಲಿ ತಯಾರಾಗಿರುವ ಮೈಸೂರು ವಿಧಾನ ಸಭಾ ಅಧ್ಯಕ್ಷರಿಗೆ ಅರ್ಪಿಸಲಿರುವ ಮನವಿಗೆ ಗ್ರಾಮಗ್ರಾಮಗಳಲ್ಲಿ ಸಹಿ ಸಂಗ್ರಹದ ಕೆಲಸವು ನಡೆಯುತ್ತಿದೆ. ಮಂಗಳೂರು, ಕೋಟೆಕಾರು, ಗುರುಪುರ, ಮುಲ್ಕಿ, ಪಾಣೆಮಂಗಳೂರು, ಬಂಟವಾಳ ಬೆಳ್ತಂಗಡಿ ಮತ್ತು ಪುತ್ತೂರು–ಈ ಕೇಂದ್ರಗಳ ಹಳ್ಳಿಗಳಲ್ಲಿ 12500 ಸಹಿ ಸಂಗ್ರಹಿಸಬೇಕೆಂದು ಜಿಲ್ಲಾ ರೈತ ಸಂಘವು ನಿರ್ಧರಿಸಿದೆ. ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಇದಕೋಸ್ಕರ ಪ್ರಚಾರ ನಡೆಯುತ್ತಿದೆ.

ಜಿಲ್ಲಾ ರೈತ ಸಂಘದ ಬಗ್ಗೆಯೂ ಪ್ರಾಂತ ರೈತಸಂಘಕ್ಕೆ ಸಹಾಯ ನೀಡುವ ಸಲುವಾಗಿಯೂ ಒಂದು ನಿಧಿ ಸಂಗ್ರಹದ ಕೆಲಸ ಆರಂಭವಾಗಿರುತ್ತದೆ. ಈಗಲೆ ರೂ. 200ರಷ್ಟು ಸಂಗ್ರಹವಾಗಿದೆ. ಸಹಾಯ ಸಂಗ್ರಹದ ಕೆಲಸ ಪೂರ್ತಿಯಾದ ನಂತರ ರೈತ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕೆಲಸ ಆರಂಭ ಮಾಡಲು ಜಿಲ್ಲಾ ರೈತಸಂಘ ನಿರ್ಧರಿಸಿದೆ.

ಜಿಲ್ಲಾ ರೈತ ಸಂಘದ ನೇತೃತ್ವದಲ್ಲಿ ಎಲ್ಲ ಸರ್ಕಲ್ (ಹೋಬಳಿ) ರೈತ ಸಂಘಗಳ ಕಾರ್ಯಕಾರಿ ಸಮಿತಿಗಳ ಸಭೆಗಳು ನಡೆದು ಸಹಿ ಸಂಗ್ರಹ, ಸಹಾಯ ಸಂಗ್ರಹ, ಸದಸ್ಯರನ್ನು ಸೇರಿಸುವುದು, ಗೇಣಿ ಕೋರ್ಟಿಗೆ ಅರ್ಜಿ ಸಲ್ಲಿಸುವುದು, ಸ್ಥಳೀಯ ಸಮಸ್ಯೆಗಳೇ ಮೊದಲಾದ ವಿಷಯಗಳನ್ನು ಚರ್ಚಿಸಿ ಕಾರ್ಯಕ್ರಮಗಳನ್ನು ನಿರ್ಣಯಿಸಲಾಗಿದೆ. ಗ್ರಾಮ ಸಂಘಗಳು ಇರುವ ಪ್ರತಿಯೊಂದು ಗ್ರಾಮದಲ್ಲೂ ಸಭೆಗಳನ್ನು ಜರಗಿಸಲಾಗುತ್ತಿದೆ. ಇಂಥ ಐವತ್ತು ಸಭೆಗಳು ಈಗಾಗಲೆ ಜರಗಿವೆ. ಈ ಸಭೆಗಳಲ್ಲಿ ರೈತ ಸಂಘದ ಸದಸ್ಯರೂ ಕಾರ್ಯಕರ್ತರೂ ಬಹಳ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದಾರೆ. ಈ ಸಭೆಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಮ್ಮೇಳನದ ನಿರ್ಣಯಗಳನ್ನೂ ಸ್ಥಳೀಯ ಸಮಸ್ಯೆಗಳನ್ನೂ ವಿವರಿಸಿ ಕಾರ್ಯಕ್ರಮಗಳನ್ನು ನಿರ್ಣಯಿಸಲಾಗುತ್ತಿದೆ.

ಕರ್ನಾಟಕ ಪ್ರಾಂತ ರೈತ ಸಮ್ಮೇನದ ನಿರ್ಣಯಗಳ 500 ಪ್ರತಿಗಳನ್ನು ಇಷ್ಟರಲ್ಲೇ ಮಾರಾಟ ಮಾಡಲಾಗಿದೆ. ಇನ್ನೂ 200 ಪ್ರತಿಗಳಿಗೆ ಜಿಲ್ಲಾ ರೈತ ಸಂಘದಿಂದ ಬೇಡಿಕೆ ಬಂದಿದೆ.

ಜಿಲ್ಲಾ ರೈತ ಸಂಘದ ಮುಖಪತ್ರವಾದ 'ರೈತಶಕ್ತಿ' ಮಾಸ ಪತ್ರಿಕೆಯ ವಿಶೇಷ ಸಂಚಿಕೆಯೊಂದು ಜನವರಿ ತಿಂಗಳಲ್ಲಿ ಪ್ರಕಟವಾಗುವುದು.

ಗೇಣಿ ಕಡಿಮೆ ಮಾಡುವ ಸಲುವಾಗಿ ಗೇಣಿ ಕೋರ್ಟುಗಳಲ್ಲಿ ಬಹಳ ಸಂಖ್ಯೆಯಲ್ಲಿ ರೈತರು ಅರ್ಜಿ ದಾಖಲು ಮಾಡುತ್ತಿದ್ದಾರೆ ಕೆಲವು ಅರ್ಜಿಗಳ ತನಿಖೆ ಮುಗಿದು ಗೇಣಿ ಕಡಿಮೆ ಮಾಡುವ ತೀರ್ಪು ಬಂದಿದೆ.

ಬೆಲ್ಲ ತಯಾರಿಸುವುದಕ್ಕೆ ಸಿಹಿ ಹೆಂಡ ಇಳಿಸುವ ಮೂರ್ತೆದಾರರು ಲೈಸನ್ಸು ದೊರಕಬೇಕಾದರೆ ಸಹಕಾರ ಸಂಘದ ಸದಸ್ಯರಾಗಬೇಕು, ಸದಸ್ಯರಾದವರಿಗೆ ಸಹಕಾರ ಸಂಘದಿಂದ ಚಿಕ್ಕಾಸಿನ ಪ್ರಯೋಜನ ದೊರೆಯುವುದಿಲ್ಲವಾದರೂ ಆ ಸಂಘಕ್ಕೆ ಕಮಿಶನ್ ಮತ್ತು ಹುಂಡಿ ಹಣ ತುಂಬಿಸಿರಬೇಕು–ಹೀಗೆ ಮೂರ್ತೆದಾರರನ್ನು ಪೀಡಿಸಲಾಗುತ್ತದೆ. ಕೆಲವು ಕಡೆಗಳಲ್ಲಿ ಮೂರ್ತೆದರರರ ಮೇಲೆ ಖಟ್ಲೆ ಹೂಡಲಾಗಿದೆ. ಈ ಬಗ್ಗೆ ಜಿಲ್ಲಾ ಮತ್ತು ಪ್ರಾಂತ ರೈತ ಸಂಘಗಳು ಸರಕಾರಕ್ಕೆ ಈ ಮೊದಲು ಮನವಿ ಮಾಡಿಕೊಂಡಿವೆ. ಸರಕಾರ ಈ ತನಕ ಅದನ್ನು ಗಮನಿಸಿದಂತೆ ತೋರುವುದಿಲ್ಲ. ಆದುದರಿಂದ ಮುಂದಿನ ಕಾರ್ಯಕ್ರಮ ನಿರ್ಣಯಿಸಲು ಜನವರಿ ತಿಂಗಳ ಅಂತ್ಯದಲ್ಲಿ ಜಿಲ್ಲಾ ಮೂರ್ತೆದಾರರ ಪ್ರತಿನಿಧಿ ಸಭೆಯನ್ನು ಜರಗಿಸಬೇಕೆಂದು ಜಿಲ್ಲಾ ರೈತಸಂಘ ನಿರ್ಣಯ ಮಾಡಿದೆ.

ಇದಲ್ಲದೆ ಗೇಣಿ ಕೊಟ್ಟುದಕ್ಕೆ ರಶೀದಿ ಪಡೆಯುದಕ್ಕೆ, ಒಕ್ಕಲು ತಪ್ಪಿಸುವುದನ್ನು ತಡೆಯುವುದಕ್ಕೆ ಮತ್ತಿತರ ಸ್ಥಳೀಯ ಸಮಸ್ಯೆಗಳಲ್ಲಿ ರೈತರ ಹಿತ ರಕ್ಷಿಸುವುದಕ್ಕೆ ಚಳುವಳಿ ಮತ್ತು ಹೋರಾಟಗಳು ಅಲ್ಲಲ್ಲಿ ನಡೆಯುತ್ತಿವೆ.

ಮಧುಗಿರಿ ಪಾವಗಡ ತಾಲ್ಲೂಕುಗಳ ರೈತರ ಹವಾಲೆ

ಈಗ್ಗೆ ಸುಮಾರು ವರ್ಷದಿಂದಲೂ ಎಲೆಕ್ಟ್ರಿಕ್ ಕರೆಂಟು ಸಾಲದೆ ಮೋಟಾರ್‌ಗಳು ಸುಡುತ್ತಿರುವುದೂ, ಅಕ್ಕಪಕ್ಕದ ರೈತರುಗಳು ಎಲೆಕ್ಟ್ರಿಕ್ ಕರೆಂಟು ಬೇಕೆಂದೂ ಎಷ್ಟೋ ಸಲ ಸರ್ಕಾರದ ಗಮನಕ್ಕೆ ತಂದಿದ್ದರೂ, ಕಾಂಗ್ರೆಸ್ಸು ಸರ್ಕಾರ ಅಲಕ್ಷ್ಯದಿಂದ ನೋಡುತ್ತಿದೆ. ಮಧುಗಿರಿಯ ಮಾಲಿ ಮರಿಯಪ್ಪನವರಂತು ಇದರ ಗೊಡವೆಯೇ ಬೇಡವೆಂದು ರೈತರನ್ನು ನಿರುತ್ಸಾಹ ಪಡಿಸುತ್ತಾ, ಮೂಕರಂತೆ ಸುಮ್ಮನೆ ಕುಳಿತು ಬಿಟ್ಟದ್ದಾರೆ. ಚುನಾವಣೆಯಾದ ಮೇಲೆ ಈ ಧೋರಣೆಯನ್ನನುಸರಿಸುತ್ತಿರುವುದು ಇವರ ಸಂಪ್ರದಾಯವಾಗಿರಬಹುದೇನೊ ನಿಜ. ಈಗಲಾದರೂ ತಕ್ಷಣವೇ ಕೊಡಿಗೇನಹಳ್ಳಿ ಹೋಬಳಿಯಲ್ಲಿ ಹೆಚ್ಚಿನ ಕರೆಂಟು ಕೊಡುವಂತೆಯೂ, ನಾಗಲಮಡಿಕೆ ಹೋಬಳಿಯಲ್ಲಿ ಹೊಸತಾಗಿ ಜಾಗ್ರತೆ ಕನಿಷ್ಟಪಕ್ಷ ಎಷ್ಟಿಮೋಟನ್ನಾದರೂ ಮಾಡುವಂತೆಯೂ ಮೊದಲಿನಂತೆ. ಯೂನಿಟ್ಟಿಗೆ 5 ನಯಾ ಪೈಸ ಮಾತ್ರವಿದ್ದು ಹೊಸದಾಗಿ ಒಂದು ಪೈಸ ತೀರಿಗೆ ಹಾಕಿರುವುದು ಖಂಡಿಸುತ್ತಾ, ಸರ್ಕಾರ ಸೂಕ್ತ ಕ್ರಮ ತೆಗೆದುಗೊಳ್ಳಬೇಕೆಂದು ಕೋರುತ್ತೇವೆ.

ಪೋಲಿಸ್ ಸಬ್-ಇನ್‌ಸ್ಪೆಕ್ಟರ ಮೇಲೆ ಉದ್ರಿಕ್ತ ಜನರ ಧಾಳಿ

ನರ್ಸ್‌ಗಳಿಬ್ಬರ ಮೇಲೆ ಅತ್ಯಾಚಾರ ನಡೆದ ಆರೋಪ

ತಾ. 29—12—57ನೇ ಆದಿತ್ಯವಾರ ಸಂಜೆ ಗೋಣಿಕೊಪ್ಪಲಿನಲ್ಲಿ ಉದ್ರಿಕ್ತ ಜನರ ತಂಡವೊಂದು ಪೋಲಿಸ್ ಸಬ್-ಇನ್ಸ್‌ಪೆಕ್ಟರ್ ನಾಣಯ್ಯ ಮತ್ತು ಒಬ್ಬ ಹೆಡ್ ಕಾನ್‌ಸ್ಟೆಬಲ್‌ಗೆ ಹೊಡೆದು, ಒದೆದು, ಜಖಂ ಮಾಡಿದರು. ಇನ್‌ಸ್ಪೆಕ್ಟರ್ ನಾಣಯ್ಯ ಮತ್ತು ಟ್ಯಾಕ್ಸಿ ಮಾಲಕ ಡ್ರೈವರ್ ಗೋಪಾಲ್ ಎಂಬವರೂ ಸೇರಿ ಎರಡು ದಿನಗಳ ಹಿಂದೆ ಸ್ಥಳೀಯ ಆಸ್ಪತ್ರೆಯ ಇಬ್ಬರು ನರ್ಸ್‌ಗಳ ಮೇಲೆ ಅತ್ಯಾಚಾರ ನಡೆಸಿದ್ದರೆಂಬ ವದಂತಿಯೇ ಜನರ ಉದ್ರಿಕ್ತ ವರ್ತನೆಗೆ ಕಾರಣವಾಗಿದೆ.

ಗೋಣಿಕೊಪ್ಪಲು ಸಂತೆಗೆ ಎರಡು ದಿನಗಳ ಮೊದಲು ಮಿ॥ ಗೋಪಾಲ್ ಎಂಬವರು, ತನ್ನ ಮನೆಯಲ್ಲಿ ಒಂದು ಹೆರಿಗೆಯಾಗಲಿರುವುದಕ್ಕೆ ಸಹಾಯಕ್ಕೆ ಬರಬೇಕೆಂದು ಇಬ್ಬರು ನರ್ಸ್‌ಗಳನ್ನು ತನ್ನ ಕಾರಿನಲ್ಲಿ ಕೂರಿಸಿ ಸಬ್ ಇನ್ಸ್‌ಪೆಕ್ಟರ್ ನಾಣಯ್ಯ ಕಾದಿದ್ದ ಸ್ಥಳಕ್ಕೆ ಒಯ್ದರೆಂದೂ, ಅಲ್ಲಿಂದ ನರ್ಸ್‌ಗಳನ್ನು ವಿರಾಜಪೇಟೆಗೆ ಅವರ ಜೊತೆಯಲ್ಲಿ ಬರಲು ಹೇಳಿದರೆಂದೂ, ಆಗ ನರ್ಸ್‌ಗಳು ಒಪ್ಪದೆ ಪ್ರತಿಭಟಿಸಿದಲ್ಲದೆ ಒಬ್ಬಳು ಕಾರಿನಿಂದ ಕೆಳಗೆ ಹಾರಿ ತೀವ್ರ ಜಖಂ ಆಗಿದೆಯೆಂದೂ ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ.

ಈ ವರ್ತಮಾನವನ್ನು ಕೇಳಿ ಸಂತೆಗೆ ಸೇರಿದ ಜನರಲ್ಲಿ ಒಂದು ಗುಂಪು ಉದ್ರೇಕಗೊಂಡು ಮೇಲೆ ಹೇಳಿದಂತೆ ಸಬ್ ಇನ್ಸ್‌ಪೆಕ್ಟರ್ ಮತ್ತು ಹೆಡ್ ಕಾನ್‌ಸ್ಟೇಬಲ್ ಮೇಲೆ ಹಲ್ಲೆ ನಡೆಸಿರುವುದಾಗಿದೆ.

ಈ ಸಂಬಂಧ ಏಳು ಜನರನ್ನು ದಸ್ತಗಿರಿ ಮಾಡಿ ಖಟ್ಲೆ ಹಾಕಲಾಗಿದೆ. ನರ್ಸ್ ಕೂಡ ಸಬ್ ಇನ್ಸ್‌ಪೆಕ್ಟರ್ ನಾಣಯ್ಯ ಮತ್ತು ಮಿ॥ ಗೋಪಾಲ್ ಇವರ ಮೇಲೆ ಖಟ್ಲೆ ಹಾಕಿದ್ದಾರೆ.

ಹಲ್ಲೆ ನಡೆದಾಗ ಅಂದಾಜು ಸಾವಿರ ಜನರು ನೋಡುತ್ತಿದ್ದರೂ ಯಾರೊಬ್ಬರೂ ಅಧಿಕಾರಿಯನ್ನು ರಕ್ಷಿಸುವ ಗೋಜಿಗೆ ಹೋಗಲಿಲ್ಲವೆಂದೂ, ಪಟ್ಟಣದ ಬೇರೊಂದು ಭಾಗದಲ್ಲಿದ್ದ ಕಾ। ಮೊಣ್ಣಯ್ಯನವರು ಈ ಸುದ್ದಿ ಕೇಳಿ ಅಲ್ಲಿಗೆ ಧಾವಿಸಿ ಬಂದು, ಜನರ ಗುಂಪನ್ನು ಸಮಧಾನಪಡಿಸಿ, ಪ್ರಜ್ಞಾಹೀನನಾಗಿದ್ದ ಪೋಲಿಸ್ ಅಧಿಕಾರಿಯನ್ನು ರಕ್ಷಿಸಿ ಪೋಲಿಸ್ ಸ್ಟೇಷನಿಗೆ ಕೊಂಡೊಯ್ದು ಬಿಟ್ಟರೆಂದೂ ಕೇಳುತ್ತೇವೆ.

ಪೋಲಿಸ್ ಸಚಿವ ಪೂಣಚ್ಚರು ಕಣ್ದೆರೆಯಲಿ!

ಕೊಡಗಿನ ಹಲವು ಪೋಲಿಸ್ ಅಧಿಕಾರಿಗಳ ದುಶ್ಚಟಗಳು, ದುಷ್ಟತನಗಳು ಇಂಥ ಘಟನೆಗಳಿಗೆ ಕಾರಣವಾಗುವ ಸಂದರ್ಭವಿರುವುದರಿಂದ ಕೂಡಲೇ ಯೋಗ್ಯ ಕ್ರಮ ಕೈಗೊಂಡು ಪೋಲಿಸ್ ಇಲಾಖೆಯನ್ನು ಒಂದು ಯೋಗ್ಯ ಇಲಾಖೆಯನ್ನಾಗಿ ಮಾಡಬೇಕೆಂದು, ಕಮ್ಯೂನಿಸ್ಟ್ ಪಾರ್ಟಿ ಹಲವು ಭಾರಿ ಸಂಬಂಧಪಟ್ಟ ಮೇಲಾಧಿಕಾರಿಗಳಲ್ಲಿ ಮನವಿ ಮಾಡಿಕೊಂಡಿದೆ. ಮುಖ್ಯಮಂತ್ರಿ ನಿಜಲಿಂಗಪ್ಪನವರನ್ನು ಸಹ ಕೊಡಗಿನ ಕಮ್ಯೂನಿಸ್ಟ್ ಮುಖಂಡರು ಭೇಟಿಮಾಡಿ ಈ ಬಗ್ಗೆ ಅರಿಕೆ ಮಾಡಿಕೊಂಡಿರುವರು. ಇವೆಲ್ಲದರ ಪರಿಣಾಮವೇನಾಯಿತೆಂದರೆ, ಕಾಮ್ರೇಡ್ ಮೊಣ್ಣಯ್ಯನವರ ಮೇಲೂ ಮತ್ತು ಇನ್ನೂ ಅಂದಾಜು 60ಕ್ಕಿಂತ ಹೆಚ್ಚು ಕಮ್ಯೂನಿಸ್ಟ್ ಪಾರ್ಟಿಯ, ಟ್ರೇಡ್ ಯೂನಿಯನಿನ ಮತ್ತು ರೈತಸಂಘದ ಕಾರ್ಯಕರ್ತರ ಮೇಲೂ ಪೋಲಿಸರು ಕೋರ್ಟುಗಳಲ್ಲಿ ತಕ್ಷೀರುಗಳನ್ನು ಹೊಡಿ ದಣಿಸುತ್ತಿರುವುದು. ಬೇಲಿಯೇ ಹೊಲ ಮೇಯುವಂತೆ ಪೋಲಿಸ್ ಅಧಿಕಾರಿಗಳೇ ಗೊಂದಲ ಸೃಷ್ಟಿಸುತ್ತಾರೆ. ಜನರನ್ನು ಸಮಾಧಾನ ಪಡಿಸಿ, ಗಲಭೆಯಾಗದಂತೆ ತಡೆಯುವ ಕಮ್ಯೂನಿಸ್ಟ್ ಕಾರ್ಯಕರ್ತರ ಮೇಲೆ ಪೋಲಿಸರ ಗದಾಪ್ರಹಾರವಾಗುತ್ತಿದೆ.

ಇನ್ನಾದರೂ, ಮಂತ್ರಿ ಪೂಣಚ್ಚನವರು ಕೊಡಗಿನ ಪೋಲೀಸರಿಂದ ನಡೆಯುವ ಲಾಕಪ್, ಚಿತ್ರಹಿಂಸೆ, ಸುಳ್ಳು ತಕ್ಷೀರುಗಳನ್ನು ಕೊಡುವುದು ಮತ್ತಿತ್ತರ ರೀತಿಗಳಲ್ಲಿ ಜನರಿಗಾಗುವ ಹಿಂಸೆಯನ್ನು ನಿಲ್ಲಿಸಲು ತಕ್ಕ ಕ್ರಮ ಕೈಗೊಳ್ಳುವರೇ?

ಭೂಸ್ವಾಮಿಗೆ ಭೂಧಾನ

ಕೊಡಗು ಜಿಲ್ಲಾ ಸೋಮವಾರಪೇಟೆ ಮಾಜಿ ಕಾಂಗ್ರೆಸ್ ಯಂ. ಎಲ್. ಎ. ಹೆಚ್. ಟಿ. ಮುತ್ತಣ್ಣನವರಿಗೆ, 18 ಎಕ್ರೆ ತರಿಭೂಮಿ, ಮತ್ತು ಸಾಕಷ್ಟು ಉತ್ಪತ್ತಿ, ಹಾಗೂ ದೊಡ್ಡದೊಂದು ಬಂಗ್ಲೆ ಇದ್ದಾಗ್ಲೂ ಸಹ, ಸರಕಾರದಿಂದ ತಮ್ಮ ನಿವಾಸದ ಗ್ರಾಮದ ಪೈಸಾರಿ ಬಿಟ್ಟು, ಸೋಮವಾರಪೇಟೆ ನೇಗಳ್ಳಿ ಗ್ರಾಮದ ಪೈಸಾರಿಯಿಂದ 10 ಎಕ್ರೆ ಜಾಗ ಕೊಡ್ಸಿಕೊಡಬೇಕಾಗಿ ಬರಕೊಂಡ ಅರ್ಜಿ ಮೇಲೆ ಸದ್ರಿ ಗ್ರಾಮಸ್ಥರು, ಎರಿ.ಎಲ್.ಎ.ರವರಿಗೆ, ಜಾಗ ಕೊಡಕೂಡದೆಂಬ ವಾಗ್ಮೂಲ ಕೊಟ್ಟದ್ದಲ್ಲದೆ, ಗ್ರಾಮಸ್ಥರೆಲ್ಲರೂ ದಸ್ಕತು ಮಾಡಿ, 3 ತಕರಾರು ಅರ್ಜಿ ರೆವಿನ್ಯೂಡಿಪಾರ್ಟಮೆಂಟಿಗೆ ಕೊಟ್ಟಾಗಿದೆ. ಆದರೂ ಅಂಥಾ ಅರ್ಜಿಗಳನ್ನು ಗಣ್ಯಕ್ಕೆ ತೆಗೆದುಕೊಳ್ಳದೆ ಅರ್ಜಿದಾರರಿಗೆ, ಕೊಡಗಿನ ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಜಾಗ ಕೊಡಿಸುವ ಅಭಿಪ್ರಾಯ ಮಾಡಿದ್ದಾರೆ. ನೇಗಳ್ಳಿ ಗ್ರಾಮದ ಪೈಸಾರಿಗೆ ಜಾಗವಿಲ್ಲದ ಬಡವರು ಅರ್ಜಿ ಮಾಡಿದ್ದರೂ ದೊಡ್ಡ ಮನುಷ್ಯರಿಗೆ ಜಾಗ ಕೊಡಲಾಗಿದೆ. ಇಲ್ಲಿನ ರೆವಿನ್ಯೂ ಅಧಿಕಾರಿಗಳೊಬ್ಬರು ಅರ್ಜಿದಾರರಿಗೆ ಕಾಂಗ್ರೆಸ್ಸಿನಲ್ಲಿ ಜೈಲಿಗೆ ಹೋದ ರೂಲ್ಸ್ ಮೇಲೆ ಜಾಗ ಕೊಡುವುದಾಗಿದೆಂಬುದಾಗಿ ಹೇಳಿದ್ದಾರೆ. ಅರ್ಜಿದಾರರು ಕಾಂಗ್ರೆಸ್ಸಿಗಾಗಿ ಯಾವಾಗ ಜೈಲಿಗೆ ಹೋಗಿದ್ದಾರೆ? ಯಾ, ಇಲ್ಲವೊ ಎಂಬುದರ ದಾಕ್ಲೆ ನೋಡಿದಲ್ಲಿ, ಇವರು ಕಾಂಗ್ರೆಸ್ಸಿಗಾಗಿ ಜೈಲಿಗೆ ಹೋಗಿರುವುದಿಲ್ಲವಾಗಿ ರುಜುವಾತು ಸಿಕ್ಕಲಾಗುತ್ತೆ. ರೆವಿನ್ಯೂ ಡಿಪಾರ್ಟ್‌ಮೆಂಟಿನವರೇ, ದೊಡ್ಡವರ ಬಾಲ ಹಿಡಿದು ಕುಣಿಯುವುದಾದರೆ ನಾಡಿನ ಬಡವನ ಸ್ಥಿತಿ ಏನಾಗಬೇಕು? ಈ ವಿಶಯದಲ್ಲಿ, ಸರಕಾರವು ತಕ್ಕ ಎಚ್ಚರಿಕೆ ತೆಗೆದುಕೊಂಡು ಯಾರಿಗೆ ಜಾಗ ಅವಶ್ಯವಿದೆಯೋ, ಅಂಥಾ ಬಡವನಿಗೆ ಜಾಗ ಕೊಟ್ಟು, ಬಡವನ ಹಿತವನ್ನು ಈಡೇರಿಸಲಿ.

ಓದುಗರ ಓಲೆ

ಕಳೆದ ಡಿಸೆಂಬರ್ 28, 29 ಮತ್ತು 30ನೇ ತಾರೀಖುಗಳಲ್ಲಿ ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕ ವರ್ಗ ತನ್ನ ಭವಿಷ್ಯವನ್ನು ರೂಪಿಸಿಕೊಳ್ಳಲು ತನ್ನ ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿತ್ತು.

ಚುನಾವಣೆಯ ಕಾನೂನು ಕ್ರಮಗಳನ್ನು ಕಾರ್ಮಿಕರಿಗೆ ಮೊದಲಾಗಿ ತಿಳಿಸದೆ, ‘ಬಣ್ಣ’ದ ಸಂಕೇತವನ್ನು ಉಮೇದುವಾರರಿಗೆ ಕೊಟ್ಟಿದ್ದುದು ಮಾತ್ರ ತಿಳಿದಿತ್ತು. ಆದರೆ ಕೊನೆಯ ಘಳಿಗೆಯಲ್ಲಿ ಪ್ರತಿಯೊಬ್ಬ ಮತದಾರನಿಗೂ ಎರಡು ಮತ ಹಾಕುವ ಹಕ್ಕನ್ನಿತ್ತುದರ ಪರಿಣಾಮವಾಗಿ ಶ್ರೀ ಸೂರಿಯವರು ಸೋತಿದ್ದಾರೆ. ಆದರೆ, ಕಾರ್ಮಿಕರ ಬಲವು ಸೂರಿಯವರಿಗೆ ಇದೆ ಎಂಬುದು, ಅವರು ಒಂದು ಓಟನಂತೆ 3ಸಾವಿರ ಕಾರ್ಮಿಕ ಓಟನ್ನು ಪಡೆದಿರುವುದರಿಂದ ತಿಳಿಯುತ್ತದೆ. ಚುನಾವಣೆಯಲ್ಲಿ ಎರಡು ಮತಗಳಂತೆ 1,600 ಮತ ಪಡೆದು ಉಮೇದುವಾರರು ಜಾತಿಯ ಹೆಸರಿನಲ್ಲೂ ಮತ್ತು ಒಬ್ಬ ಮತದಾರ ಎರಡು ಓಟನ್ನು ತನಗೇ ಹಾಕಬೇಕೆಂದು ಕರಪತ್ರ ಹಂಚಿಯೂ ಚುನಾವಣೆಯ ರೀತಿಯನ್ನೇ ಕುಲಗೆಡಿಸಿದ್ದಾರೆ.

ಇನ್ನು ಮುಂದಾದರೂ ಭದ್ರಾವತಿ ಕಾರ್ಮಿಕ ವರ್ಗ ಎಚ್ಚೆತ್ತು ತಮ್ಮ ಭವಿಷ್ಯದ ಬಗ್ಗೆ ಅಂಕಿಅಂಶಗಳ ಸಹಿತ ಅಧಿಕಾರಿ ವರ್ಗದವರೊಡನೆ ಮಾತನಾಡಬಲ್ಲ ಪ್ರತಿನಿಧಿಗಳನ್ನು ಚುನಾಯಿಸುವಲ್ಲಿ, ಅತ್ಯಂತ ಜಾಗರೂಕತೆಯಿಂದಿರಬೇಕೆಂಬುದನ್ನು ಈ ಚುನಾವಣೆ ತೋರಿಸುತ್ತದೆ.

“ಕಾರ್ಮಿಕಬಂಧು” ಭದ್ರಾವತಿ.

ಗುಬ್ಬಿ—

ಕತ್ತೆಮಟ್ಟೆ ಗಣಿಯಲ್ಲಿ ಭೂಕುಸಿತದಿಂದಾಗಿ ಸಾವು

ಕತ್ತೆಮಟ್ಟೆ ಎಂಬ ಮ್ಯಾಂಗನೀಸ್ ಗಣಿಯಲ್ಲಿ ಭೂಮಿ ಕುಸಿತದಿಂದ ಒಬ್ಬನು ಮೃತ ಪಟ್ಟಿದ್ದಾನೆ. ಕೆಲವರಿಗೆ ಗಾಯಗಳಾಗಿವೆ. ಸರ್ಕಾರದವರು ಗಾಯಗೊಂಡವರಿಗೂ ಮೃತರ ಬಂಧುಗಳಿಗೂ ಪರಿಹಾರ ಕೊಡಬೇಕಾಗದೆ. ಲೇಬರ್ ಇಲಾಖೆಯವರೂ ಜಿಯೊ-ಲಾಜಿಕಲ್ ಇಲಾಖೆಯವರೂ ಸರಿಯಾಗಿ ಗಣಿಗಳ ತನಿಖೆ ಮಾಡದಿದ್ದರಿಂದ ಗಣಿಗಳನ್ನು ಒಳಗೇ ಅಪಾಯಕರವಾಗಿ ಕೊರೆದುದರಿಂದಾಗಿ ಈ ರೀತಿ ಅಪಘಾತಗಳಾಗುತ್ತಿವೆ ಎಂದು ತಿಳಿದುಬಂದಿದೆ.

ಪಿ. ಡಬ್ಲ್ಯು. ಡಿ. ಕೆಲಸಗಾರರ ಸಂಘ ಸ್ಥಾಪನೆ

ತಾ 22—12—57ರಲ್ಲು ಎಚ್. ಸಿ. ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಗುಬ್ಬಿ ತಾಲ್ಲೂಕು ಪಿ. ಡಬ್ಲ್ಯು ಡಿ. ಕೆಲಸಗಾರರ ಸಭೆ ಜರಗಿ ಗುಬ್ಬಿ ತಾಲ್ಲೂಕು ಪಿ. ಡಬ್ಲ್ಯು ಡಿ. ಕೆಲ್ಸಗಾರರ ಸಂಘವನ್ನು ರಚಿಸಲಾಯಿತು ಮತ್ತು ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂದು ತೀರ್ಮಾನಿಸಲಾಯ್ತು. ಈ ಕೆಳಗಿನ ಅಧಿಕಾರಿ ವರ್ಗವನ್ನು ಚುನಾಯಿಸಲಾಯ್ತು.

ಎಚ್. ಟಿ. ಸಿದ್ದರಾಮಯ್ಯ ಅಧ್ಯಕ್ಷರಾಗಿಯೂ, ಶ್ರೀ ರಂಗನಾಥ್ ಕಾರ್ಯದರ್ಶಿಯಾಗಿಯೂ, ಹನುಮಂತಪ್ಪ ಖಜಾಂಚಿಯಾಗಿಯೂ ಆರಿಸಲ್ಪಟ್ಟರು. ಚಂದ್ರಮಯ್ಯ, ಕರೀತಿಮ್ಮಯ್ಯ, ದೊಡ್ಡರಂಗಯ್ಯ ಚಿಕ್ಕಜ್ಜ, ವೀರಣ್ಣ, ಕರಂಗಯ್ಯ ಇವರುಗಳನ್ನೊಳಗೊಂಡ ಕಾರ್ಯಕಾರಿ ಸಮಿತಿಯನ್ನು ರಚಿಸಲಾಯಿತು.

ಕಳ್ಳರಿಗೆ ಅಮಿತಾನಂದ!

ಮಧುಗಿರಿಯಲ್ಲಿ ಪೋಲಿಸ್ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಶಿದ್ದಪ್ಪನವರನ್ನು ವರ್ಗಾಯಿಸಿದ್ದುದು ಸರಿಯಷ್ಟೆ. ಆದರೇನು ಇವರಿಗೆ ಮಧುಗಿರಿಯ ಮಹಾಪುಡಾರಿ ಮಾಲಿ ಮರಿಯಪ್ಪನವರ ಬೆಂಬಲವಿದೆ. ಈ ಕಾಂಗ್ರೆಸ್ಸ್ ಪುಡಾರಿಗಳ ಕಾಟ ತಡೆದು ಕೊಳ್ಳಲಾರದೆ ಜನತೆ ರೊಚ್ಚಿಗೆದ್ದಿದ್ದಾರೆ. ಪುಡಾರಿಗಳಿಗೆ ಹೊಸ ಹೊಸ ಅಫೀಸರುಗಳು ಬಂದರೆ ಇವರ ಚೆಲ್ಲಾಟ ಎಡೆಬಿಡದೆ ನಡೆಯಲಿಕ್ಕಿಲ್ಲ. ಇದೂ ಅಲ್ಲದೆ ಮಧುಗಿರಿಯ ಕಳ್ಳರು ಶಿದ್ದಪ್ಪನವರ ಟ್ರಾನ್ಸ್‌ಫರ್ ರದ್ದಾಗುತ್ತಿರುವ ವದಂತಿ ಕೇಳಿ ಬಹಳ ಸಂತೋಷಪಡುತಿದ್ದಾರೆಂದು ಪುಕಾರು! ನಮ್ಮ ಕಾಂಗ್ರೆಸ್ಸ್ ಕಳ್ಳರ ರಾಜ್ಯದಲ್ಲಿ, ಇಂತಹ ಕಳ್ಳರಿಗೂ ಅವಕಾಶ ಸಿಕ್ಕುತ್ತಿರುವುದನ್ನು ಜನತೆ ಖಂಡಿಸುತ್ತಿದ್ದಾರೆ. ಶಿದ್ದಪ್ಪನವರು ಹೊಸದಾಗಿ ಮನೆಕಟ್ಟಿಸುತ್ತಿದ್ದಾರೆ. ಆದರೆ ಇದಕ್ಕಾಗೇ ಇಷ್ಟೊಂದು ಹಣವೆಲ್ಲಿಂದಬಂತು ಇವರಿಗೆ ಎಂದು ಜನರು ಗುಸುಗುಸು ಆಡಿಕೊಳ್ಳುತ್ತಿರುತ್ತಾರೆ. ಇದನ್ನೆಲ್ಲಾ ಕಾಂಗ್ರೆಸ್ಸ್ ಸರ್ಕಾರ ಇನ್ನಾದರೂ ಸರಿಪಡಿಡಿಸುತ್ತೆಂದು ಆಶಿಸೋಣವೇ?

“ರೆಡ್ಡಿ” ಮಧುಗಿರಿ.

ಸಹಕಾರ ಸಂಘದ ಅವ್ಯವಸ್ಥೆ

ಗೌರಿಬಿದನೂರಿನ ತಾಲ್ಲೂಕ್ ಕೊ-ಆಪರೇಟಿವ್ ಸೊಸೈಟಿ ಲಿಮಿಟೆಡ್ ಇದರಲ್ಲಿ ಅವ್ಯವಸ್ಥೆ ತಲೆದೋರಿದೆ. ಅನಿರೀಕ್ಷಿತವಾಗಿ ಸದರಿ ಸೊಸೈಟಿಯ ಡೈರಕ್ಟರುಗಳಾದ ಶ್ರೀಮಾನ್ ಎಚ್. ಎನ್. ನಾಗೇಶರಾಯರು ಶ್ರೀಮಾನ್ ಕೆ. ಎನ್. ವೆಂಕಟರಮಣಶೆಟ್ಟರು ಹೋಗಿ ಲೆಕ್ಕಗಳನ್ನು ತನಿಖೆ ಮಾಡಿದಾಗ ಅಕ್ಕಿ 490 ಸೇರು, ಕಾಫಿ ಬೀಜ 80ಪೌಂಡು ಸ್ಟಾಕ್ ಕಮ್ಮಿಇರುತ್ತೆ. ಈ ಸೊಸೈಟಿಯ ಆಡಳಿತವನ್ನು ನೋಡಿಕೊಳ್ಳಲು, ಸರ್ಕಾರದವರು ಇನ್ಸ್‌ಪೆಕ್ಟರ್ ಮತ್ತು ಇಂಟರ್‌ನಲ್ ಆಡಿಟರ್‌ರನ್ನು ನೇಮಿಸಿರುತ್ತಾರೆ. ಆದಾಗ್ಯೂ ಇಂತಹ ಲೋಪದೋಷಗಳು ನಡೆಯುತ್ತಿವೆ. ಇದರಿಂದ ರೈತ ಬಾಂಧವರಿಗೆ, ಸರ್ಕಾರದಲ್ಲಿ ಮತ್ತು ಸಹಕಾರ ಸಂಘಗಳಲ್ಲಿ ನಂಬಿಕೆ ಇಲ್ಲದೇ ಹೋಗುತ್ತೆ. ಸಹಕಾರಿ ಸಂಘಗಳ ಹಿತ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆಯವರು ತಕ್ಷಣ ಕ್ರಮ ಕೈಗೊಳ್ಳುತ್ತಾರೆಂದು ನಂಬಿದ್ದೇವೆ.

ಇತಿ, “ಗುಪ್ತ”

ಕೈರೋ ಸಮಾವೇಶದ ……………

(೧ನೇ ಪುಟದಿಂದ)

ಮಾಡಿರುವ ನಿರ್ಣಯದಲ್ಲಿ, ಇಂದು ಸ್ವಾತಂತ್ರ್ಯವನ್ನು ಗಳಿಸಿರುವ ಏಷ್ಯ-ಆಫ್ರಿಕಾ ರಾಷ್ಟ್ರಗಳು ಸಾಮ್ರಾಜ್ಯಶಾಹೀ ಶೋಷಣೆಯಿಂದಾಗಿ ಸಂಪೂರ್ಣವಾಗಿ ಹಾಳಾಗಿದ್ದ ತಮ್ಮ ಆರ್ಥಿಕವನ್ನು ಪುನರ್ರಚಿಸಿಕೊಳ್ಳುವುದರಲ್ಲಿ ತೊಡಗಿವೆ. ಬೃಹತ್ ಯೋಜನೆಗಳು ನಿರ್ಮಾಣ ಕಾರ್ಯಗಳು ನಡೆಯುತ್ತಿವೆ. ಆರ್ಥಿಕಾಭಿವೃದ್ಧಿಗಾಗಿ ಜನತೆ ಶ್ರಮಿಸುತ್ತಿದೆ ಮುಂದುವರಿದ ರಾಷ್ಟ್ರಗಳ ನೆರವು ಈ ರಾಷ್ಟ್ರಗಳಿಗೆ ಅಗತ್ಯವಾಗಿದೆ. ಆದರೆ ಅಂಥ ರಾಷ್ಟ್ರಗಳು ನೀಡುವ ಸಹಾಯವು ಯಾವ ಬಗೆಯ ರಾಜಕೀಯ ಕೊಂಡಿಗಳನ್ನು ಹೊಂದಿರದೆ ಇರಬೇಕು ಎಂದು ಸೂಚಿಸುವ ಗೊತ್ತುವಳಿಯನ್ನು ಮಾಡಿದೆ.

ಏಷ್ಯ-ಆಫ್ರಿಕಾ ದೇಶಗಳ ನಡುವೆ ಆರ್ಥಿಕಾಭಿವೃದ್ಧಿ ಕಾರ್ಯದಲ್ಲಿ ನಿಕಟ ಸಂಪರ್ಕವಿರಬೇಕೆಂದೂ, ಎಲ್ಲ ರಾಷ್ಟ್ರಗಳ ನಡುವೆಯೂ ಅನಿರ್ಬಂಧವಾದ, ಸ್ವತಂತ್ರವಾದ ವಾಣಿಜ್ಯ ಸಂಬಂಧವಿರಬೇಕೆಂದೂ ಸೂಚಿಸುವ ಗೊತ್ತುವಳಿಯನ್ನೂ ಅಂಗೀಕರಿಸಲಾಯಿತು.

ಸಾಂಸ್ಕೃತಿಕ ಕ್ಷೇತ್ರದಲ್ಲಿ

ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸುವುದು, ರಾಷ್ಟ್ರಗಳ ನಡುವಣ ಸ್ನೇಹ ಸಂಬಂಧಗಳಿಗೆ ಅತ್ಯಂತ ಪರಿಣಾಮಕಾರಿಯಾದುದೆಂದೂ, ಆದರಿಂದಾಗಿ ಸಾಂಸ್ಕೃತಿಕ ಕ್ಷೇತ್ರದಲ್ಲಿ ನಿಕಟವಾದ ಸಂಪರ್ಕವನ್ನು ಎಲ್ಲ ರಾಷ್ಟ್ರಗಳೂ ಬೆಳೆಸಬೇಕೆಂದೂ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಏಷ್ಯ-ಆಫ್ರಿಕಾ ದೇಶಗಳ ನಡುವೆ ಹೆಚ್ಚಿನ ಸಾಂಸ್ಕೃತಿಕ ಬಾಂಧವ್ಯವೇರ್ಪಡಬೇಕೆಂದೂ, ಪರಸ್ಪರ ಸಾಂಸ್ಕೃತಿಕ ನಿಯೋಗಗಳ ವಿನಿಮಯವಾಗಬೇಕೆಂದೂ ನಿರ್ಣಯಗಳಲ್ಲಿ ಕೋರಲಾಗಿದೆ.

ಎಲ್ಲ ರೀತಿಯಲ್ಲಿಯೂ ಕೈರೋದಲ್ಲಿ ನಡೆದ ಈ ಮಹಾ ಸಮ್ಮೇಳನವು ಯಶಸ್ವಿಗೊಂಡು, ಏಷ್ಯ-ಆಫ್ರಿಕಾ ಜನತೆಯಲ್ಲಿ ನವಚೇತನವನ್ನುಂಟುಮಾಡಿದೆ. ಏಷ್ಯ-ಆಫ್ರಿಕಾದ ಜನತೆಯ ನಡುವೆ ಹೆಚ್ಚಿನ ಸಂಪರ್ಕ ಬೆಳೆದು, ದೃಢಗೊಳ್ಳಲು ಈ ಸಂಬಂಧವನ್ನು ಅಭಿವೃದ್ಧಿಗೊಳಿಸಲು ಸ್ಥಾಪಿತವಾಗಿರುವ ಏಷ್ಯ-ಆಫ್ರಿಕಾ ಸೌಹಾರ್ದ ಸಮಿತಿಯು ತನ್ನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುವುದೆಂಬುದರಲ್ಲಿ ಸಂದೇಹವಿಲ್ಲ.

ರುಮೇನಿಯಾ ಅಧ್ಯಕ್ಷ ಗ್ರೋಜಾರ ನಿಧನ

ರುಮೇನಿಯಾದ ಅಧ್ಯಕ್ಷರಾದ ಕಾಮ್ರೇಡ್ ಪೆಟ್ರು ಗ್ರೋಜಾರವರು ತಮ್ಮ 72ನೇ ವರ್ಷದಲ್ಲಿ ನಿಧನರಾದರು

ಕರುಳಿನ ಶಸ್ತ್ರ ಚಿಕಿತ್ಸೆ ನಡೆದ ಕೆಲವೇ ದಿನಗಳ ನಂತರ ಜನವರಿ 7ರಂದು ಕಾ|| ಗ್ರೋಜಾ ಮರಣ ಹೊಂದಿದ್ದಾರೆ.

ಸಮಾಜವಾದಿ ರಾಷ್ಟ್ರವೊಂದರ ಅಧ್ಯಕ್ಷರ ಮರಣದಿಂದ ವಿಶ್ವದ ಸಮಾಜವಾದಿಗಳ ಪಾಲಿಗೆ ಬಿದ್ದ ಶೋಕದಲ್ಲಿ ನಾವೂ ಭಾಗಿಗಳು.

ನ್ಯೂಕ್ಲಿಯರ್ ಅಸ್ತ್ರಗಳ ವಿಸರ್ಜನೆ ಅಗತ್ಯ!

ನೆಹರೂ-ಜೆಕ್ ಪ್ರಧಾನಿ ಜಂಟಿ ಘೋಷಣೆ

ಭಾರತದ ಆಮಂತ್ರಣದ ಮೇರೆಗೆ ನವದೆಹಲಿಗೆ 3 ದಿನಗಳ ಸಂದರ್ಶನವಿತ್ತ ಜೆಕೊಸ್ಲಾವಾಕಿಯಾದ ಪ್ರಧಾನಿ ವಿಲಿಯಂ ಸಿರೋಕಿ ಮತ್ತು ಪ್ರಧಾನಿ ನೆಹ್ರೂರವರು ಜಂಟಿ ಘೋಷಣೆಯೊಂದನ್ನು ಹೊರಡಿಸಿದ್ದಾರೆ.

ನಿರಾಯುಧೀಕರಣ ಸಮಸ್ಯೆಯ ಪರಿಹಾರ ಮತ್ತು ವಿನಾಶಕಾರಿಯಾದ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಉತ್ಪಾದನೆ ಹಾಗೂ ಉಪಯೋಗ—ಇವುಗಳ ವಿಸರ್ಜನೆಯ ಪ್ರಶ್ನೆಗಳನ್ನೂ ಇತ್ಯರ್ಥಗೊಳಿಸಲು 'ಉನ್ನತ ಮಟ್ಟದ' ಸಮ್ಮೇಳನಗಳು ಸೇರುವುದೆಂಬುದರ ಬಗ್ಗೆ ನಾವು ಆಶಾವಾದಿಗಳಾಗಿದ್ದೇವೆ ಎಂದು ಈ ಹೇಳಿಕೆಯಲ್ಲಿ ಹೇಳಲಾಗಿದೆ.

ಮಿಲಿಟರಿ ಕೂಟ ಹಾಗೂ ಕೌಲುಗಳ ಖಂಡನೆ, ಜನತಾ ಚೀನಕ್ಕೆ ವಿಶ್ವಸಂಸ್ಥೆ ಮನ್ನಣೆ ಕೊಡಬೇಕೆಂದು ಒತ್ತಾಯ, ರಾಜ್ಯಗಳ ಶಾಂತಿಯುತ ಸಹಬಾಳ್ವೆ ಬಗ್ಗೆ ವಿಶ್ವಸಂಸ್ಥೆ ಒಪ್ಪಿದ ನಿರ್ಣಯ ಬಗ್ಗೆ ಕೃತಜ್ಞತೆ ಇವುಗಳು ಈ ಸಂಯುಕ್ತ ಹೇಳಿಕೆಯಲ್ಲಿನ ಪ್ರಧಾನಾಂಶಗಳಾಗಿವೆ.

ಪ್ರಪ್ರಥಮವಾಗಿ, ಸಮಾಜವಾದಿ ರಾಷ್ಟ್ರವಾದ ಚೀನಾ ಭಾರತದೊಡಗೂಡಿ ಪಂಚಶೀಲಾದ ಜಂಟಿ ಘೋಷಣೆ ಇತ್ತಿತು ತರುವಾಯ ಪ್ರಧಾನಿ ಬುಲ್ಗಾನಿನ್ ನೆಹ್ರೂ ಘೋಷಣೆ ಕೇಳಿ ಬಂತು, ಆ ಮೇಲೆ ರಷ್ಯಾ ಮತ್ತಿತರ ಸಮಾಜವಾದಿ ಮತ್ತು ಸ್ವತಂತ್ರ ಪ್ರಜಾಪ್ರಭುತ್ವ ರಾಷ್ಟ್ರಗಳು 'ಪಂಚಶೀಲ'ವನ್ನು ತಮ್ಮ ಅಂತರಾಷ್ಟ್ರೀಯ ನೀತಿಯ ಬುನಾದಿಯಾಗಿ ಕೈಗೊಂಡಿವೆ. ಇಂದು ಇನ್ನೊಂದು ಸಮಾಜವಾದಿ ರಾಷ್ಟ್ರ ಜೆಕೊಸ್ಲಾಕಿಯಾ ವಿಶ್ವಶಾಂತಿಯೇ ಸಮಾಜವಾದಿ ರಾಷ್ಟ್ರಗಳ ಹೆಗ್ಗುರಿ ಎಂಬುದನ್ನು ಈ ಜಂಟಿ ಘೋಷಣೆಯಲ್ಲಿ ಹೊರಗೆಡಹಿದೆ.

ಈ ಜಂಟಿ ಹೇಳಿಕೆಯಲ್ಲಿ ಇಂದಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯ ಮೇಲೆ ಮಾತ್ರವಲ್ಲದೆ, ಭಾರತ-ಜೆಕೊಸ್ಲಾವಾಕಿಯಾಗಳೊಳಗಿನ ಪರಸ್ಪರಸ್ನೇಹ ಸಂಪರ್ಕದ ಬಗ್ಗೆಯು ಸೌಹಾರ್ದತೆಯೂ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ಜೆಕೊಸ್ಲಾವಾಕಿಯಾದ ಸಹಕಾರ ಮತ್ತು ಸಹಾಯದಿಂದ ಭಾರತದಲ್ಲಿ ಸ್ಥಾಪಿಸಲಾಗುವ ಫೌಂಡ್ರಿ ಫೋರ್ಜ್ ಪ್ಲಾಂಟ್ (ಯಂತ್ರ ತಯಾರಿಕೆ) ಬಗ್ಗೆ ಒಪ್ಪಂದವು ನಡೆದಿದ್ದು ಇವರ ಬಗ್ಗೆ ಇಬ್ಬರು ನಾಯಕರು ತೃಪ್ತಿಯನ್ನು ಸೂಚಿಸಿದ್ದಾರೆ.

ಈ 'ಪ್ಲಾಂಟ'ಗೆ ಸುಮಾರು ರೂ. 30 ಕೋಟಿ ವೆಚ್ಚ ತಗಲುವುದು. ಇದರಲ್ಲಿ ವಿದೇಶದಿಂದ ಬರಬೇಕಾದ ಸುಮಾರು ರೂ. 16 ಕೋಟಿಯಷ್ಟು ಬೆಲೆಬಾಳುವ ಯಂತ್ರ-ತಂತ್ರ ಸಲಕರಣೆಗಳ ಜವಾಬುದಾರಿಯನ್ನು ಜೆಕೊಸ್ಲಾವಾಕಿಯಾ ವಹಿಸಿದುದರಿಂದ ವಿದೇಶೀ ವಿನಿಮಯದ ಬಿಕ್ಕಟ್ಟನ್ನು ಭಾರತ ಎದುರಿಸಬೇಕಾದುದಿಲ್ಲವೆಂಬುದು ಗಮನೀಯ ಅಂಶ.

ಕೇರಳ ಹೊಸ ತೆರಿಗೆ ವಿಧಿಸಲು ಕೇಂದ್ರ ಸಲಹೆ!

'ಸಾಧ್ಯವಿಲ್ಲ'ವೆಂದು ಇ. ಎಂ. ಎಸ್.

'ಮುಂದಿನ ವರುಷದಲ್ಲಿ ಕೇರಳದ ಜನತೆಯ ಮೇಲೆ ಹೊಸ ತೆರಿಗೆಯ ಹೊರೆ ವಿಧಿಸುವುದು ಅಸಾಧ್ಯ'ಎಂದುಹೇಳಿ, ಯೋಜನಾ ಮಂಡಲಿಯೊಡನೆ ಮಾತುಕತೆಗಾಗಿ ದೆಹಲಿಗೆ ತೆರಳಿದ್ದ ಕೇರಳದ ಮುಖ್ಯಮಂತ್ರಿ ಇ. ಎಂ. ಎಸ್. ನಂಬೂದಿರಿಪಾದರು ದೆಹಲಿಯಲ್ಲಿ ನಡೆದ ಮಾತುಕತೆಗಳ ಬಗ್ಗೆ ತಮ್ಮ ಅತೃಪ್ತಿಯನ್ನು ಪತ್ರಿಕಾಕರ್ತರೊಡನೆ ಸೂಚಿಸಿದ್ದಾರೆ.

ಕೇರಳದ ದ್ವಿತೀಯ ಯೋಜನೆಯ ತೃತೀಯ ಸಾಲಿಗೆರೂ 18·5 ಕೋಟಿ ನಿಗದಿಯಾಗಿದ್ದು ಅದರಲ್ಲಿ ರೂ 8 ಕೋಟಿ ರಾಜ್ಯ ಸರ್ಕಾರ ತನ್ನ ಹೆಚ್ಚಿನ ವರಮಾನದಿಂದ ಪಡೆಯಬೇಕೆಂದು ಯೋಜನಾ ಮಂಡಳಿಯ ಷರತ್ತಾಗಿದೆ. ಈ ಪ್ರಕಾರ ಬರುವ ವರ್ಷದಲ್ಲಿ ಕೇರಳವು ರೂ.ಒಂದು ಕೋಟಿಯಷ್ಟು ಹೆಚ್ಚಿನ ತೆರಿಗೆಯನ್ನು ಜನರಿಂದ ವಸೂಲು ಮಾಡಬೇಕೆಂದು ಕೇಂದ್ರ ಸರಕಾರ ಸೂಚಿಸಿದೆ. ಈ ಸೂಚನೆಯನ್ನು ಕೇರಳ ಸರಕಾರ ತಿರಸ್ಕರಿಸಿದೆ. ಜನತೆಯ ಮೇಲೆ ಈ ವರ್ಷದಲ್ಲೆ ಪರಮಾವಧಿ ತೆರಿಗೆ ವಿಧಿಸಲಾಗಿದೆ. ಬರುವ ವರುಷ ಇನ್ನಷ್ಟು ತೆರಿಗೆಯ ಹೊರೆಯನ್ನು ಜನತೆಯ ಮೇಲೆ ಹೇರಲು ಕೇರಳ ಸರ್ಕಾರ ಸಿದ್ಧವಿಲ್ಲ, ಎಂದು ನೇರವಾಗಿ ಕೇಂದ್ರ ಸರ್ಕಾರಕ್ಕೆ ಕೇರಳ ಸರ್ಕಾರ ತಿಳಿಸಿದೆಯೆಂದು ಇ. ಎಂ ಎಸ್. ನುಡಿದರು

ಕೇರಳ ಸರಕಾರ ಒಂದು ಕೋಟಿ ರೂಪಾಯಿ ವರಮಾನ ರಾಜ್ಯದಲ್ಲೇ ಯೋಜನೆಗಾಗಿ ಹೆಚ್ಚಾಗಿ ಪಡೆಯದೆ ಹೋದರೆ, ಕೇಂದ್ರ ಇದನ್ನು ಪೂರೈಸುವುದಿಲ್ಲವೆಂದು ಖಡಾಖಂಡಿತವಾಗಿ, ಹೇಳಿದರೂ, ಅಷ್ಟೇ ಖಂಡಿತವಾಗಿ ಈ ಹಣವನ್ನು ಬಡ ಜನತೆಯಿಂದ ಸುಲಿಯುವುದಿಲ್ಲ ಎಂದು ಹೇಳಲು ಜನತಾ ಸರ್ಕಾರವಾದ ಕೇರಳಕ್ಕೆ ಮಾತ್ರ ಸಾಧ್ಯವಾಗಿದೆ.

ಕೇರಳ ವಿದ್ಯಾ ಮಸೂದೆಯನ್ನು ಸುಪ್ರೀಂ ಕೋರ್ಟಿನ ಪರಿಶೀಲನೆಗೆ ಒಪ್ಪಿಸಿರುವುದು ವಿರುದ್ಧ ರಾಜ್ಯ ಸರಕಾರ ಇನ್ನೂ ಅಧಿಕೃತವಾಗಿ ತನ್ನ ಪ್ರತಿಭಟನೆ ಪ್ರದರ್ಶಿಸಿಲ್ಲವೆಂದೂ, ತಿರುವನಂತಪುರದಲ್ಲಿ ಪತ್ರಿಕಾ ಕರ್ತರ ಪ್ರಶ್ನೆಗಳಿಗುತ್ತರವೀಯುತ್ತ ಇ. ಎಂ. ಎಸ್.ರವರು, ತಾವು ನೆಹ್ರೂರವರನ್ನು ಕೇರಳಕ್ಕೆ ಭೇಟಿಕೊಡಲು ಆಹ್ವಾನಿಸಿರುವುದನ್ನು ತಿಳಿಸಿದರು.

ಮೈಸೂರು ಎಂ. ಎಲ್. ಸಿ. ಮತದಾರರಲ್ಲಿ ಅಗ್ರಹದ ವಿನಂತಿ

ಮೈಸೂರ ಕೌನ್ಸಿಲಗೆ ಮೂರುಸ್ಥಾನಗಳು ತುಂಬತಕ್ಕದಿದ್ದು ಧಾರವಾಡ, ಕಾರವಾರ, ಬೆಳಗಾಂವಿ: ಬಿಜಾಪುರ ಈ ಜಿಲ್ಲೆಗಳ ಎಲ್ಲಾ ಡಿ. ಎಲ್. ಬಿ. ವ. ಮುನಿಸಿಪಾಲ್ಟಿಯ ಐದು ಸಾವಿರ ಜನಸಂಖ್ಯೆಗಿಂತ ಹೆಚ್ಚು ಇರುವ ಗ್ರಾಮ ಪಂಚಾಯಿತಿ ಸದಸ್ಯರು ಈ ಚುನಾವಣೆಯಲ್ಲಿ ಮತ ಹಾಕಬೇಕಾಗಿದೆ. ಇದರಲ್ಲಿ ಆರು ಜನ ಉಮೇದುವಾರರು ನಿಂತಿದ್ದು ಅವರ ಪೈಕಿ ಶ್ರೀ ಎನ್. ಕೆ. ಉಪಾಧ್ಯಾಯರು ಸ್ವತಂತ್ರ ಉಮೇದುವಾರರಾಗಿ ನಿಂತಿರುತ್ತಾರೆ ಇವರು ಯೋಗ್ಯ ಉಮೇದವಾರರಿದ್ದು ಇವರಿಗೆ ನಿಮ್ಮ ಅಮೂಲ್ಯ ಮತವನ್ನು ಕೊಟ್ಟು ಆರಿಸಿ ತರಬೇಕಾಗಿ ಎಲ್ಲ ಡಿ. ಎಲ್. ಬಿ. ಮುನಿಸಿಪಾಲ್ಟಿ ಮತ್ತು ಗ್ರಾಮ ಪಂಚಾಯತಿ ಸದಸ್ಯರಿಗೆ ವಿನಂತಿ ಮಾಡಿಕೊಳ್ಳುತ್ತೇನೆ. ಈ ಚುನಾವಣೆಯ ಪದ್ಧತಿಯಲ್ಲಿ ಬದಲಾವಣೆ ಆಗಿದ್ದು ಪ್ರತಿಒಬ್ಬ ಸದಸ್ಯನಿಗೂ ಮತ ಹಾಕುವ ಹಕ್ಕು ಇರುತ್ತದೆ. ಉಮೇದುವಾರನ ಹೆಸರಿನ ಮುಂದೆ ಒಂದು ಅಂತಾ ಅಂಕಿ ಹಾಕಬೇಕಾಗುತ್ತದೆ ಕಾರಣ ಶ್ರೀ ಎನ್. ಕೆ. ಉಪಾಧ್ಯಯರ ಹೆಸರಿನ ಮುಂದೆ 1 (ಒಂದು) ಅಂಕಿ ಹಾಕಬೇಕಾಗಿ ವಿನಂತಿ.

ಶಿದ್ಧಪ್ಪ ಹೊಸಮನಿ
(ಮಾಜಿ ಎಂ. ಎಲ್. ಸಿ.)
ಬಿ. ಎ. ಎಲ್. ಎಲ್. ಬಿ. ಪ್ಲೀಡರ್

ಮುಂಧ್ರ ಪ್ರಕರಣದಲ್ಲಿ ಹೊಸ ಬೆಳಕು

(೨ನೇ ಪುಟದಿಂದ)

ಈ ಸಲಹೆಯನ್ನು ಮುಂದಿರಿಸುತ್ತ ಬಂದಿವೆ ಎಂದೂ ತಿಳಿಸಿದೆ. ಅಲ್ಲದೆ ಬ್ರಿಟನ್ನಿನ ಕನ್ಸರ್ವೇಟಿವ್ ಪ್ರಧಾನಿಯೊಬ್ಬರು ಈ ಸಲಹೆ ಮುಂಡಿಸುತ್ತಿರುವುದು, ಅವರ ಮೇಲೆ ಇರುವ ಒತ್ತಾಯದ ಕುರುಹಾಗಿದೆ. ಜನತೆಯ ಆಶೋತ್ತರಗಳಿಗೆ ಎದುರಾಗಿ ಹೋಗುವುದು ಮ್ಯಾಕ್‌ಮಿಲನ್‌ರಿಗೆ ಕಷ್ಟವಾಗಿರಬೇಕು ಎಂದು ತಿಳಿಸಿದೆ.

ಬ್ರಿಟಿಷ್ ಪ್ರಧಾನಿಯೇನೋ ಸಲಹೆಯನ್ನು ಮುಂದಿರಿಸಿದ್ದಾರೆ. ಆದರೆ ಅದನ್ನು ಎಷ್ಟು ದೂರದವರೆಗೆ ಕಾರ್ಯಗತ ಮಾಡಲು ಮುಂದಾಗುತ್ತಾರೆ ಎಂದು ಹೇಳುವುದು ಕಷ್ಟ. ಅಮೆರಿಕದ ಪ್ರತಿಕ್ರಿಯೆಯ ಮೇಲೆ ಅದರ ಮಾರ್ಗದರ್ಶನದ ಮೇಲೆ ಇರುವ ಬ್ರಿಟನ್ನಿನ ವಿದೇಶಾಂಗ ನೀತಿ ಹೇಗೆ ಹೊರಳುವುದೆಂದು ತಿಳಿದೇ ಇದೆ. ಈಗಾಗಲೆ ಬ್ರಿಟಿಷ್ ವಿದೇಶಾಂಗ ಶಾಖೆ, ಆ ಹೇಳಿಕೆಯ ಬಗ್ಗೆ ಸ್ಪಷ್ಟೀಕರಣ ಕೊಡುತ್ತ, ಪ್ರಧಾನಿಗಳ ಈ ಸಲಹೆಯನ್ನು ಒಂಟಿಯಾಗಿ ನೋಡಬಾರದೆಂದೂ ಆದರೆ ಇತರ ಪ್ರಶ್ನೆಗಳು ಇತ್ಯರ್ಥವಾಗುವುದರೊಂದಿಗೆ ನೋಡಬೇಕೆಂದೂ ತಿಳಿಸಿದ್ದಾರೆ.

ಮ್ಯಾಕ್‌ಮಿಲನ್‌ರವರ ಹೇಳಿಕೆಯನ್ನು ಎಲ್ಲ ಶಾಂತಿ ಪ್ರಿಯರೂ ಸ್ವಾಗತಿಸುತ್ತಾರೆ. ಸೂಚನೆ ಸೂಚನೆಯಾಗಿಯೇ ಉಳಿಯದೆ ಕಾರ್ಯಗತವಾಗಲಿ ಎಂದು ಹಾರೈಸಬೇಕಾಗಿದೆ.

REG. No. M. 6867

Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone 3810